# ಶ್ರವಣ, ಮನನ, ನಿದಿಧ್ಯಾಸನ

ಅಥವಾ

# ಅಧ್ಯಾತ್ಮಯೋಗ

ಮತ್ತು

# ವೇದಾಂತದ ಒಳಗಣ್ಣು




ಲೇಖಕರು

**ಬ್ರಹ್ಮಜ್ಞಕವಿ ಶ್ರೀ ದೇವರಾಯ ಕುಲಕರ್ಣಿ (ಹೊಂಬಳ)**



ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

ಆತ್ಮವಿಜ್ಞಾನಕ್ಕೆ ಸಾಕ್ಷಾತ್ಸಾಧನೆಗಳು

# ಶ್ರವಣ, ಮನನ, ನಿದಿಧ್ಯಾಸನ

ಅಥವಾ

# ಅಧ್ಯಾತ್ಮಯೋಗ

ಮತ್ತು

# ವೇದಾಂತದ ಒಳಗಣ್ಣು

ಲೇಖಕರು :

**ದೇವರಾಯ ಕುಲಕರ್ಣಿ (ಹೊಂಬಳ)**

**ಕ್ರಮಾಂಕ : 243**

Price List Catalog Sl.No. : 48

**ಅಧ್ಯಾತ್ಮ ಪ್ರಕಾಶಕಾರ್ಯಾಲಯ**

**ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ**

**ದೂರವಾಣಿ: 08175-273820**

www.adhyatmaprakasha.org.

e-mail: secretary@adhyatmaprakasha.org

coordinator_apk@yahoo.com

**ಬೆಂಗಳೂರು ಶಾಖೆ :**

**ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,**

**ತ್ಯಾಗರಾಜನಗರ, ಬೆಂಗಳೂರು - 560 028. ದೂ : 080-2676 5548**

e-mail: shankara.bhaskara@gmail.com

**2021**

**Shravana, Manana, Nidhidhyasana and Vedantada Olagannu**
Written by : **Sri Devaraya Kulakarni (Hombala)**
Published by : Adhyatma Prakasha Karyalaya, Holenarasipura-573211,
Hassan District, Karnataka State, INDIA.
**Phone: 08175-273820**

website : www.adhyatmaprakasha.org
e-mail : secretary@adhyatmaprakasha.org
coordinator_apk@yahoo.com

**1ನೆಯ ಮುದ್ರಣ : 1959; 2ನೆಯ ಮುದ್ರಣ 1976; 3ನೆಯ ಮುದ್ರಣ 2000;**
**ಸಂಯೋಜಿತ 1ನೆಯ ಮುದ್ರಣ 2021; 1000 ಪ್ರತಿಗಳು**

**ಮುದ್ರಣ ಕಾಗದ : 70 GSM NS Maplitho**

**ಪುಟಗಳು : 8+83=91**

**ಬೆಲೆ : ರೂ. 40/-**

**© ಅಧ್ಯಾತ್ಮಪ್ರಕಾಶಕಾರ್ಯಾಲಯದವು**

***ಪ್ರತಿಗಳು ದೊರೆಯುವ ಸ್ಥಳ :***
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ಹೊಳೆನರಸೀಪುರ - 573 211, ದೂರವಾಣಿ: 08175-273820**
e-mail: secretary@adhyatmaprakasha.org

**ಬೆಂಗಳೂರು ಶಾಖೆ :**
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,**
**ತ್ಯಾಗರಾಜನಗರ, ಬೆಂಗಳೂರು - 560 028 ದೂ : 080-2676 5548**
e-mail: shankara.bhaskara@gmail.com

**ಅಕ್ಷರ ಜೋಡಣೆ ಮತ್ತು ಮುದ್ರಣ :**
**ಶ್ರೀರಾಮ ಪ್ರಿಂಟರ್ಸ್**
**ನಂ.25, 15ನೇ ಕ್ರಾಸ್, ಶ್ರೀನಿಧಿ ಲೇಔಟ್,**
**ಬೆಂಗಳೂರು - 560 062. ಮೊಬೈಲ್: 98453 46197**

# ಪ್ರಕಾಶಕರ ಬಿನ್ನಹ

## (ಸಂಯೋಜಿತ ಮುದ್ರಣ)

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ವೇದಾಂತ ವಿವೇಚನಾ ಕ್ರಮಕ್ಕೆ ಮನಸೋತು ಶಿಷ್ಯರಾಗಿ ಅವರ ಬೋಧನಾಪದ್ಧತಿಯನ್ನು ಅಳವಡಿಸಿ ಕೊಂಡವರಲ್ಲಿ ಶ್ರೀ ದೇವರಾಯ ಕುಲಕರ್ಣಿಗಳೂ ಒಬ್ಬರು. ಶ್ರೀಯುತರು ಅನೇಕ ವೇದಾಂತಗ್ರಂಥಗಳನ್ನು ಅತ್ಯಂತ ಸುಲಭಶೈಲಿಯಲ್ಲಿ ರಚಿಸಿರುತ್ತಾರೆ. ಅವುಗಳಲ್ಲಿ **"ಶ್ರವಣ, ಮನನ, ನಿದಿಧ್ಯಾಸನ ಅಥವಾ ಅಧ್ಯಾತ್ಮಯೋಗ ಮತ್ತು ವೇದಾಂತದ ಒಳಗಣ್ಣು"** ಎಂಬ ಗ್ರಂಥಗಳೂ ವಿಶಿಷ್ಟವಾದವು.

ಈ ಎರಡೂ ಗ್ರಂಥಗಳು ಬೇರೆ ಬೇರೆಯಾಗಿ ಮುದ್ರಿತವಾಗಿದ್ದವು. ಅವನ್ನು ಒಂದೇ ಪುಸ್ತಕದಲ್ಲಿ ಮುದ್ರಣಮಾಡಿದರೆ ಜಿಜ್ಞಾಸುಗಳಿಗೆ ಅನುಕೂಲವೆಂದು ಈಗ ಒಂದೇ ಕಡೆ ಸಂಯೋಜಿಸಿ ಮುದ್ರಿಸಿದೆ.

ಈ ಗ್ರಂಥವೆರಡನ್ನೂ ಒಟ್ಟಿಗೆ ಮುದ್ರಿಸಬೇಕೆಂದು ಅಪೇಕ್ಷೆ ವ್ಯಕ್ತಪಡಿಸಿದ ಶ್ರೀಮತಿ ಡಾ॥ ಮಹಾದೇವಿ ಮಾಲಕರೆಡ್ಡಿ, ಎಂ.ಬಿ.ಬಿ.ಎಸ್. ಮತ್ತು ಶ್ರೀ ಡಾ॥ ಎ.ಬಿ. ಮಾಲಕರೆಡ್ಡಿ, ಎಂ.ಬಿ.ಬಿ.ಎಸ್., ಎಂ.ಡಿ. ಕರ್ನಾಟಕ ಸರ್ಕಾರದ ಮಾಜಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಇವರುಗಳು ಗ್ರಂಥ ಮುದ್ರಣದ ಸಂಪೂರ್ಣ ವೆಚ್ಚವನ್ನು ವಹಿಸಿರುತ್ತಾರೆ. ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಗ್ರಂಥವು ಸರ್ವಾಂಗಸುಂದರವಾಗಿ ಹೊರಬರಲು ಶ್ರಮಿಸಿದ ಎಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು. ಎಂದಿನಂತೆ ಮಹಾಜನರು ಈ ಗ್ರಂಥವನ್ನು ಬರಮಾಡಿಕೊಂಡು ಕಾರ್ಯಾಲಯದ ವೇದಾಂತಪ್ರಚಾರ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

08–6–2021 — **ಪ್ರಕಾಶಕರು**

ಬೆಂಗಳೂರು

# ಪ್ರಕಾಶಕರ ಬಿನ್ನಹ

## (ಮೊದಲನೆಯ ಮುದ್ರಣ)

ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳ ಬೋಧನೆಯನ್ನು ಪ್ರಚಾರಮಾಡುವ ಮುಖ್ಯ ಗುರಿಯನ್ನುಳ್ಳದ್ದಾಗಿದೆ.

ಶ್ರೀ ಶ್ರೀಗಳವರ ಸಾಕ್ಷಾತ್ ಶಿಷ್ಯರಲ್ಲೊಬ್ಬರಾದ ಶ್ರೀ ದೇವರಾಯ ಕುಲಕರ್ಣಿ (ಹೊಂಬಳ) ಬೆಂಗಳೂರು ಇವರು ಈವರೆಗೆ ಅನೇಕ ಗ್ರಂಥಗಳನ್ನು ಶ್ರೀಶ್ರೀಗಳವರ ಬೋಧನಾಪದ್ಧತಿಯನ್ನನುಸರಿಸಿ ಬರೆದು ಕೆಲವು ಗ್ರಂಥಗಳನ್ನು ಕಾರ್ಯಾಲಯಕ್ಕೆ ಸಮರ್ಪಿಸಿದ ಸದ್ಗುರುಭಕ್ತರಾಗಿದ್ದಾರೆ. ಇಂಥ ಮಹನೀಯರಿಂದ ಈ ಸಲ ಈ ಗ್ರಂಥವು ಹೊರಬರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶ್ರೀ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲಿರುವ ವಿಷಯಗಳನ್ನೇ ನೇರವಾಗಿ ಶ್ರೀಶಂಕರರ ವಾಕ್ಯಗಳಿಂದಲೇ ಜಿಜ್ಞಾಸುಗಳಿಗೆ ತಿಳಿಸಿಕೊಡುವ ಪದ್ಧತಿಯನ್ನು ಪ್ರಪ್ರಥಮವಾಗಿ ಶ್ರೀಶ್ರೀಗಳವರು ''ಶಾಂಕರವೇದಾಂತಸಾರ'' ಎಂಬ ಗ್ರಂಥದ ಮೂಲಕ ತೋರಿಸಿಕೊಟ್ಟರು. ಶ್ರೀಶ್ರೀಗಳವರ ದಿಗ್ದರ್ಶನದಂತೆ ಅವರ ಹೆಜ್ಜೆಗಳಲ್ಲಿಯೇ ಹೆಜ್ಜೆಗಳನ್ನಿಟ್ಟು ನಡೆಯುವ ಮೂಲಕ ಶ್ರೀ ದೇವರಾಯರು ಶ್ರೀಶ್ರೀಗಳವರ ಸಂಪ್ರದಾಯದಲ್ಲಿ ಒಂದು ಮುಖ್ಯ ಸ್ಥಾನವನ್ನು ಪಡೆದಿದ್ದಾರೆ.

ಈಗ ಬಂದಿರುವ ಈ ಗ್ರಂಥವು ಉತ್ತಮ ಜಿಜ್ಞಾಸುಗಳಿಗೆ ಆತ್ಮವಿಜ್ಞಾನವನ್ನು ಸಂಪಾದಿಸಲು ಕೈದೀವಿಗೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. **''ಶಂಕರಸಂಸ್ಮರಣ'', 'ಶಂಕರದರ್ಶನ'' (ಬ್ರಹ್ಮಜ್ಞವಚನ), ''ಶಾಂಕರವೇದಾಂತ ಸೌರಭ''** ಮೊದಲಾದ ಗ್ರಂಥಗಳನ್ನು ಕಾರ್ಯಾಲಯಕ್ಕೇ ಸಮರ್ಪಿಸಿರುವಂತೆ ಈ ಗ್ರಂಥದ ಸಂಪೂರ್ಣಹಕ್ಕುಬಾಧ್ಯತೆಗಳನ್ನೂ ಕಾರ್ಯಾಲಯಕ್ಕೇ ಶ್ರೀ ದೇವರಾಯರು ಸಮರ್ಪಿಸಿದ್ದಾರೆ. ಈ ಮಹನೀಯರ ತ್ಯಾಗ, ಗುರುಭಕ್ತಿಗಳು ಶ್ಲಾಘನೀಯವಾಗಿವೆ. ಕಾರ್ಯಾಲಯವು ಇವರ ಈ ಉಪಕಾರವನ್ನು ಸ್ಮರಿಸುವುದಲ್ಲದೆ ಇವರಿಂದ ಇನ್ನೂ ಹೆಚ್ಚಿನ ಸದ್ಗುರು ಸೇವೆ ನಡೆಯಲೆಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥಿಸುತ್ತೇವೆ.

ಕಾರ್ಯಾಲಯದಲ್ಲಿ ಸದ್ಗುರುಸೇವೆ ನೆರವೇರಿಸುತ್ತಿರುವ ಶ್ರೀ ಹೆಚ್. ವೆಂಕಟನರಸಪ್ಪನವರು ಈ ಗ್ರಂಥ ಹೊರಬರಲು ತುಂಬಾ ಶ್ರಮಪಟ್ಟಿದ್ದಾರೆ.

ಶ್ರೀ ದೇವರಾಯರು ಬರೆದ  ಕೈಬರಹದ ಪ್ರತಿಯನ್ನು ಪುನಃ ತಿದ್ದಿ ಬರೆಯುವುದು, ಅಚ್ಚಿನ ಕರಡನ್ನು ತಿದ್ದುವುದು, ಸೂಕ್ತಸಲಹೆಗಳನ್ನುಕೊಟ್ಟು ಗ್ರಂಥವು ಪರಿಪೂರ್ಣ ವಾಗುವಂತೆ ಮಾಡುವುದು ಮುಂತಾಗಿ ಬಹುವಿಧದಿಂದ ಸದ್ಗುರು ಸೇವೆಮಾಡಿದ್ದಾರೆ.

ಒಟ್ಟಿನಲ್ಲಿ ಕನ್ನಡನಾಡಿನ ಜಿಜ್ಞಾಸುಗಳು ಈ ಗ್ರಂಥವನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡು ಇದರ ಲಾಭವನ್ನು ಪಡೆಯುವಂತಾಗಲೆಂದು ಹಾರೈಸುತ್ತೇವೆ.

ತಾ|| 10.6.1991

**ಪ್ರಕಾಶಕರು**

# ಮುನ್ನುಡಿ

ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳಂತೆ ಆತ್ಮ ವಿಜ್ಞಾನಕ್ಕೆ ಸಾಧನೆಗಳು ಮೂರು ಪ್ರಕಾರವಾಗಿವೆ. ಅದರಲ್ಲಿ -

1. ''ಕರ್ಮಯೋಗ-ಉಪಾಸನೆ'' ಎಂಬ ಪರಂಪರಾಸಾಧನೆಗಳನ್ನು (ಶ್ರೀಮದ್ಭಗವದ್ಗೀತೆ ಹಾಗೂ ಉಪನಿಷತ್ತುಗಳಲ್ಲಿ ಹೇಳಿರುವ ಈ ಸಾಧನೆಗಳನ್ನು) ಬ್ರಹ್ಮಸೂತ್ರಗಳಲ್ಲಿ ಚರ್ಚಿಸಿ ನಿರ್ಣಯಿಸಿರುತ್ತದೆ.

2. ಅಮಾನಿತ್ವಾದಿಗಳು (ಗೀ. 13-7 ರಿಂದ 11) ಬುದ್ಧಿವಿಶುದ್ಧತ್ವಾದಿಗಳು (ಗೀ. 18-51 ರಿಂದ 54) ಹಾಗೂ ಸಾಧನಚತುಷ್ಟಯ ಸಂಪತ್ತಿ (ಸೂ. ಭಾ. 1-1-1) ಇವೆಲ್ಲವುಗಳೂ ''ಸಹಕಾರಿಸಾಧನೆಗಳು''.

3. ''ಶ್ರವಣ, ಮನನ, ನಿದಿಧ್ಯಾಸನ ಇವುಗಳು ಸಾಕ್ಷಾತ್ ಸಾಧನೆಗಳು''

ಈ ಜನ್ಮದಲ್ಲಾಗಲಿ ಹಿಂದಿನ ಜನ್ಮದಲ್ಲಾಗಲೀ ಪರಂಪರಾ ಸಾಧನಗಳನ್ನು ಆಚರಿಸಿದ್ದರ ಫಲವಾಗಿ ಯಾರಿಗೆ ಸಹಕಾರಿಸಾಧನೆಗಳು ಅಳವಟ್ಟಿರುವವೋ ಅಂಥ ಜಿಜ್ಞಾಸುಗಳಿಗೆ ಮಾತ್ರ ಸಾಕ್ಷಾತ್ ಸಾಧನೆಗಳು ಉಪಯೋಗವಾಗುತ್ತವೆ. ಸರಿಯಾದ ಅಧಿಕಾರವಿಲ್ಲದವರಿಗೆ ಈ ಸಾಧನೆಗಳು ಬೌದ್ಧಿಕ ವಿಚಾರ ಸರಣಿಯಂತೆ ಅಥವಾ ತರ್ಕ ಅನುಮಾನಗಳಂತೆ ಕಾಣುವುದು ಸಹಜ. ಬುದ್ಧಿಯನ್ನೂ ಅಹಂಪ್ರತ್ಯಯವನ್ನೂ ಮೀರಿದ ಅನುಭವ ಸ್ವರೂಪವೇ ತಾನಾಗಿ ನಿಂತು ಅನುಭವಸ್ವರೂಪದ ವ್ಯಾಪ್ತಿಯನ್ನು ತನ್ನಲ್ಲಿ ತೋರುತ್ತಿರುವ ಪ್ರಪಂಚದಲ್ಲೆಲ್ಲ ಕಂಡು ದ್ವೈತಪ್ರಪಂಚವನ್ನು ಬಾಧಿತ ಗೊಳಿಸಿಕೊಂಡು ಕೇವಲಾತ್ಮನಾಗಿ, ಅದ್ವಿತೀಯನಾಗಿ ಸಹಜವಾಗಿ ನೆಲೆನಿಲ್ಲುವ ಆತ್ಮಜ್ಞಾನ ನಿಷ್ಠೆಯೇ ಈ ಸಾಕ್ಷಾತ್ ಸಾಧನೆಗಳಿಗೆ ಮುಖ್ಯಫಲವು. ಮೇಲೆ ತಿಳಿಸಿದ ಅಮಾನಿತ್ವಾದಿ ಸಾಧನ ಸಂಪತ್ತಿಯು ಅಂತಃಕರಣದಲ್ಲಿಲ್ಲದವರಿಗೆ ಈ ಮುಖ್ಯ ಫಲವು ಶ್ರವಣಾದಿಗಳನ್ನು ಅವಲಂಬಿಸಿದರೂ ಆಗಲಾರದು. ಶ್ರೀಶಂಕರರು ಗೀತಾಭಾಷ್ಯದಲ್ಲಿ ''**ಯತನ್ತೋಽಪಿ ಶಾಸ್ತ್ರಾದಿಪ್ರಮಾಣೈಃ ಅಕೃತಾತ್ಮಾನಃ ಅಸಂಸ್ಕೃತಾತ್ಮಾನಃ ತಪಸಾ ಇನ್ದ್ರಿಯಜಯೇನ ಚ ದುಶ್ಚರಿತಾತ್ ಅನುಪರತಾಃ ಅಶಾನ್ತದರ್ಪಾಃ ಪ್ರಯತ್ನಂ ಕುರ್ವನ್ತೋಽಪಿ ನೈನಂ ಪಶ್ಯನ್ತಿ ಅಚೇತಸಃ ಅವಿವೇಕಿನಃ**'' (ಗೀ.ಭಾ. 15-11, ಭಾ.ಭಾ. 909) ಎಂದಿದ್ದಾರೆ. ''ಅಂತಃಕರಣದಲ್ಲಿ ಅಮಾನಿತ್ವಾದಿ ಸಾಧನೆಗಳಿಲ್ಲದವರು, ತಪಸ್ಸು ಹಾಗೂ ಇಂದ್ರಿಯಗಳ

ಜಯವಿಲ್ಲದೆ ಇರುವವರು, ಕೆಟ್ಟನಡತೆಗಳನ್ನು ಬಿಡದೆ ಇರುವವರು, ದರ್ಪವನ್ನು ಬಿಟ್ಟು ಶಾಂತರಾಗದವರು; ಶಾಸ್ತ್ರ , ಗುರುಗಳು ಎಂಬ ಪ್ರಮಾಣಗಳಿಂದ ಶ್ರವಣಮನನಗಳನ್ನು ಮಾಡುತ್ತಿದ್ದರೂ ಆತ್ಮವಿಜ್ಞಾನಕ್ಕೆ ಪ್ರಯತ್ನಿಸುತ್ತಿದ್ದರೂ ಸಹ ಈ ಅವಿವೇಕಿಗಳು ಆತ್ಮವಿಜ್ಞಾನವನ್ನು ಪಡೆಯಲಾರರು'' ಎಂಬುದು ಈ ವಾಕ್ಯದ ತಾತ್ಪರ್ಯವು. ಆದ್ದರಿಂದ ಪರಂಪರಾ ಹಾಗೂ ಸಹಕಾರಿ ಸಾಧನಸಂಪನ್ನರಿಗೇ ಈ ಸಾಕ್ಷಾತ್ ಸಾಧನೆಗಳು ಪ್ರಯೋಜನವನ್ನು ಎಂದರೆ ಅದ್ವಿತೀಯ ಆತ್ಮಜ್ಞಾನ ನಿಷ್ಠೆಯನ್ನು ತಂದುಕೊಡುತ್ತವೆ.

## ಪ್ರಕೃತ ವಿಚಾರ

ನಾನು 1964ರಲ್ಲಿ ''**ಅಧ್ಯಾತ್ಮಯೋಗ**'' ಎಂಬ ಒಂದು ಸಣ್ಣ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸಿದ್ದೆ. ಅದು ಪುನಃ ಮೂರು ಸಲ ಕನ್ನಡದಲ್ಲಿ, ನಾಲ್ಕು ಸಲ ತೆಲುಗಿನಲ್ಲಿ ಪ್ರಕಟವಾಯಿತು. ಈಗ ಆ ಸಣ್ಣ ಪುಸ್ತಕದೊಂದಿಗೆ ಸಾಕ್ಷಾತ್ ಸಾಧನಗಳಾದ ಶ್ರವಣ ಮನನಗಳನ್ನು ಸೇರಿಸಿ ಒಟ್ಟಿಗೇ ಒಂದು ಹೊಸ ಪುಸ್ತಕವನ್ನಾಗಿ ಪ್ರಕಟಿಸುವ ಯೋಗ ಒದಗಿಬಂದಿರುವುದು ಸದ್ಗುರುಗಳ ಕೃಪಾಕಟಾಕ್ಷವೇ ಆಗಿದೆ.

ತತ್ತ್ವಜಿಜ್ಞಾಸುಗಳಿಗೆ ಈ ಚಿಕ್ಕ ಪುಸ್ತಕದಿಂದ ಸ್ವಲ್ಪಮಟ್ಟಿಗೆ ಮಾರ್ಗದರ್ಶನವಾದರೆ ನಾನು ಧನ್ಯನೆಂದುಕೊಳ್ಳುತ್ತೇನೆ. ಈ ಸಾಧನೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಬಯಸುವವರು ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ದೊರಕುವ ''ಶಾಂಕರ ವೇದಾಂತಸೌರಭ'' ಎಂಬ ಗ್ರಂಥವನ್ನು ನೋಡಬಹುದು.

**ಸದ್ಗುರು ಪಾದರೇಣು**
**ದೇವರಾಯ ಕುಲಕರ್ಣಿ**
**(ಹೊಂಬಳ) ಬೆಂಗಳೂರು**

# ವಿಷಯಾನುಕ್ರಮಣಿಕೆ

**I. ಶ್ರವಣ ಮನನ ನಿದಿಧ್ಯಾಸನ ಅಥವಾ ಅಧ್ಯಾತ್ಮಯೋಗ**

1. ಶ್ರವಣ – 1–11
2. ಮನನ – 11–19
3. ಅಧ್ಯಾತ್ಮಯೋಗ ಅಥವಾ ನಿದಿಧ್ಯಾಸನ – 19–30

**II. ವೇದಾಂತದ ಒಳಗಣ್ಣು**

1. ಹೊರನೋಟ – ಒಳನೋಟ – 35–39
2. ಶ್ರುತಿಗಳ ಒಳದೃಷ್ಟಿಯ ಉಪದೇಶ ಕ್ರಮ – 39–43
3. ಸ್ವಪ್ನ ವಿಜ್ಞಾನ – 43–37
4. ಸ್ವಪ್ನಾನುಭವದ ಮೂಲಕ ಆತ್ಮವಿಜ್ಞಾನ – 47–51
5. ಸ್ವಪ್ನಾನುಭವದ ಮೂಲಕ ಆತ್ಮವಿಜ್ಞಾನ – 51–55
6. ಉಪನಿಷತ್ತಿನಂತೆ ನಿದ್ರಾನುಭವದ ವಿಮರ್ಶೆ – 55–59
7. ನಿದ್ರಾನುಭವದ ವಿಮರ್ಶೆ – ಆನಂದರೂಪ – 59–63
8. ನಿದ್ರಾನುಭವದ ವಿಮರ್ಶೆ – ಜಗದ್ಬೀಜ – ಬುದ್ಧಿಸಂಬಂಧ – 64–67
9. ನಿದ್ರಾನುಭವವೂ ಅವಿದ್ಯೆಯೂ – 68–71
10. ಅವಿದ್ಯಾದಿಗಳ ಬಗೆಗೆ ತಪ್ಪುಗ್ರಹಿಕೆ – 72–76
11. ದೃಷ್ಟಿಭೇದದ ರಹಸ್ಯ –76–80
12. ಭಾಷ್ಯಕಾರರ ನಿರೂಪಣೆ – 80–83

* * * * *

ಆತ್ಮವಿಜ್ಞಾನಕ್ಕೆ ಸಾಕ್ಷಾತ್ಸಾಧನೆಗಳು

# ಶ್ರವಣ, ಮನನ, ನಿದಿಧ್ಯಾಸನ

ಅಥವಾ

# ಅಧ್ಯಾತ್ಮಯೋಗ

ಆತ್ಮವಿಜ್ಞಾನಕ್ಕೆ ಸಾಕ್ಷಾತ್ಸಾಧನೆಗಳು

# ಶ್ರವಣ, ಮನನ, ನಿದಿಧ್ಯಾಸನ

ಅಥವಾ

# ಅಧ್ಯಾತ್ಮಯೋಗ

## ಶ್ರವಣ

ಬೃಹದಾರಣ್ಯಕ ಉಪನಿಷತ್ತಿನಲ್ಲಿ (2-4-5) ಯಾಜ್ಞವಲ್ಕ್ಯ ಮಹರ್ಷಿಗಳು ತಮ್ಮ ಪತ್ನಿಯಾದ ಮೈತ್ರೇಯಿಯನ್ನು ಕುರಿತು ಬೋಧಿಸುವಾಗ ''**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ**'' ಎಂದು ಹೇಳಿದ ಈ ಮಂತ್ರದಲ್ಲಿ ಆತ್ಮತತ್ತ್ವವನ್ನು ಕಂಡುಕೊಳ್ಳಲು ಶ್ರವಣ, ಮನನ, ನಿದಿಧ್ಯಾಸನಗಳು ಸಾಧನೆಗಳು ಎಂದು ಹೇಳಿದ್ದಾರೆ.

''**ಸಾಕ್ಷಾದೇವ ಚ ಕಾರಣತ್ವಾತ್ ಶ್ರವಣಮನನನಿದಿಧ್ಯಾಸನಾನಾಮ್**'' (ತೈ. ಶಿಕ್ಷಾವಲ್ಲಿ ಉಪಸಂಹಾರ ಭಾಷ್ಯ, ಭಾ. ಭಾ. 85) ಎಂದು ಶ್ರೀಶಂಕರಭಗವತ್ಪಾದರು ಅಪ್ಪಣೆ ಕೊಡಿಸಿದ್ದಾರೆ. ಶ್ರವಣ, ಮನನ, ನಿದಿಧ್ಯಾಸನಗಳು ಆತ್ಮತತ್ತ್ವವನ್ನು ಕಂಡುಕೊಳ್ಳಲು ಸಾಕ್ಷಾತ್ ಎಂದರೆ ನೇರಾದ ಸಾಧನೆಗಳು ಎಂಬುದು ಇದರ ತಾತ್ಪರ್ಯವು. ಶ್ರವಣಮಾತ್ರದಿಂದಲೇ ಉತ್ತಮಾಧಿಕಾರಿಗೆ ಆತ್ಮತತ್ತ್ವದಲ್ಲಿ ನೆಲೆನಿಲ್ಲುವಿಕೆಯು ಬಂದುಬಿಡುತ್ತದೆ. ಶ್ರವಣದ ಜೊತೆಗೇ ಅವನಿಗೆ ಮನನ (ಯುಕ್ತಿಯಿಂದ ಅನುಭವಕ್ಕೆ ಹೊಂದಿಸಿಕೊಳ್ಳುವುದು), ನಿದಿಧ್ಯಾಸನ (ಏಕಾಗ್ರತೆಯಿಂದ ತತ್ತ್ವವನ್ನು ಅನುಭವದಲ್ಲಿ ಕಂಡುಕೊಂಡು ನಿಶ್ಚಯಿಸಿಕೊಳ್ಳುವುದು) ಎಂಬ ಸಾಧನೆಗಳೂ ಸಹ ಮುಗಿದುಹೋಗಿರುತ್ತವೆ. ಅಂಥ ಅಧಿಕಾರಿಗೆ ಪ್ರತ್ಯೇಕವಾಗಿ ಶ್ರವಣವಾದ ಬಳಿಕ ಮನನನಿದಿಧ್ಯಾಸನಗಳನ್ನು ಪ್ರತ್ಯೇಕವಾಗಿ ಮಾಡಬೇಕಾದದ್ದು ಉಳಿಯುವುದಿಲ್ಲ. ''**ಯೇಷಾಂ ಪುನರ್ನಿಪುಣ**

**ಮತೀನಾಂ ನಾಜ್ಞಾನಸಂಶಯವಿಪರ್ಯಯಲಕ್ಷಣಃ ಪದಾರ್ಥವಿಷಯಃ ಪ್ರತಿಬನ್ಧೋಽಸ್ತಿ, ತೇ ಶಕ್ನುವಂತಿ ಸಕೃದುಕ್ತಮೇವ ತತ್ತ್ವಮಸಿವಾಕ್ಯಾರ್ಥಮ್ ಅನುಭವಿತುಮ್**'' (ಸೂ.ಭಾ. 4-1-2) ಎಂಬ ವಾಕ್ಯದಲ್ಲಿ ಶ್ರೀಶಂಕರರು ''ಯಾರಿಗೆ ಅಜ್ಞಾನ, ವಿಪರೀತಜ್ಞಾನ, ಸಂಶಯಗಳು ತತ್-ತ್ವಂ-ಅಸಿ ಎಂಬ ಪದಗಳ ಅರ್ಥದ ಬಗ್ಗೆ ಪ್ರತಿಬಂಧವು ಇರುವುದಿಲ್ಲವೋ ಅವರು ಒಂದೇ ಸಲ ಹೇಳಿದರೂ ತತ್ತ್ವವನ್ನು ಅನುಭವದಲ್ಲಿ ಕಂಡುಕೊಳ್ಳಲು ಸಮರ್ಥರಾಗಿರುತ್ತಾರೆ'' ಎಂಬ ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ. ಆದ್ದರಿಂದ ನಾನೆಂಬ ಅನಿಸುವಿಕೆಯ ಹಿಂದೆ ಇರುವ ನಿಜವಾದ ತಾನಾಗಿರುವ ತತ್ತ್ವದ ಕಡೆಗೆ ಜಿಜ್ಞಾಸುವಿನ ಲಕ್ಷ್ಯವನ್ನು ತಿರುಗಿಸುವುದೊಂದೇ ಈ ಸಾಕ್ಷಾತ್‌ಸಾಧನೆಗಳ ಕೆಲಸವೇ ಹೊರತು ಯಾವುದಾದರೊಂದು ಕರ್ಮ, ಉಪಾಸನೆ ಮುಂತಾದವುಗಳಲ್ಲಿ ಹೇಳಿದಂತೆ 'ಇದಾದ ಬಳಿಕ ಇದನ್ನು ಮಾಡಬೇಕು' ಎಂಬ ಬಗೆಯ ವಿಧಿಯನ್ನು ಹೇಳುವ ಉದ್ದೇಶವು ಇರುವುದಿಲ್ಲ. ಈ ಕಾರಣದಿಂದಲೇ ಶ್ರವಣವಾದ ಬಳಿಕ ಮನನ, ನಿದಿಧ್ಯಾಸನಗಳನ್ನೂ ವಿಧಿಸಿದೆಯಲ್ಲವೇ? ಎಂಬ ಪ್ರಶ್ನೆಗೆ ಆಚಾರ್ಯರು ಸೂ.ಭಾ. (1-1-4, ಭಾ.ಭಾ. 61) ''**ಮನನನಿದಿಧ್ಯಾಸನಯೋರಪಿ ಶ್ರವಣವತ್ ಅವಗತ್ಯರ್ಥತ್ವಾತ್**'' ಎಂದಿದ್ದಾರೆ. ಶ್ರವಣದಂತೆಯೇ ಮನನನಿದಿಧ್ಯಾಸನಗಳೂ ಸಹ ಆತ್ಮತತ್ತ್ವವನ್ನು ಅನುಭವದಲ್ಲಿ ಕಂಡುಕೊಳ್ಳುವುದಕ್ಕಾಗಿಯೇ ಹೇಳಿದೆ ಎಂಬುದು ಇದರ ತಾತ್ಪರ್ಯವು. ಇದರಿಂದ ಏರ್ಪಡುವುದೇನೆಂದರೆ ಕೇವಲ ಶ್ರವಣಮಾತ್ರದಿಂದಲೇ ಆತ್ಮಾನುಭವದಲ್ಲಿ ನೆಲೆನಿಲ್ಲಬಹುದು. ಅದಾಗದಿದ್ದಲ್ಲಿ ಶ್ರವಣಮನನಗಳೆರಡನ್ನೂ ಉಪಯೋಗಿಸಬೇಕು. ಆಗಲೂ ಆತ್ಮಾನುಭವದಲ್ಲಿ ನೆಲೆನಿಲ್ಲುವಿಕೆಯು ಬಾರದಿದ್ದರೆ ನಿದಿಧ್ಯಾಸವನ್ನು ಉಪಯೋಗಿಸಿಕೊಳ್ಳಬೇಕು ಎಂಬುದು ಆಚಾರ್ಯರ ಅಭಿಪ್ರಾಯ. ಹೀಗೆ ಶ್ರವಣ-ಮನನ-ನಿದಿಧ್ಯಾಸನಗಳು ವಸ್ತುತಂತ್ರ ಸಾಧನೆಗಳಾಗಿದ್ದು ಏಕಾಗ್ರತೆಯಿಂದ ಶಾಸ್ತ್ರವೂ ಗುರುಗಳೂ ಬೋಧಿಸಿದ್ದನ್ನು ಜಿಜ್ಞಾಸುವು ತನ್ನ ಅನುಭವದಲ್ಲಿ ಕಂಡುಕೊಂಡು ಹಾಗಿರುವುದನ್ನು ನಿಶ್ಚಿಸಿಕೊಳ್ಳಬೇಕಾದ ಸಾಧನೆಗಳಾಗಿವೆ. ಶಾಸ್ತ್ರದ ಮಾತಿನಲ್ಲಿ ಕೇವಲ ಶ್ರದ್ಧೆಯನ್ನು ಮಾತ್ರ ಇಟ್ಟುಕೊಂಡು ಅದರಂತೆ ಆಚರಿಸಬೇಕಾದ ಕರ್ಮ- ಉಪಾಸನೆ ಮೊದಲಾದ ಸಾಧನೆಗಳಂತೆ ಇವು ಕರ್ತೃತಂತ್ರಸಾಧನೆಗಳಲ್ಲ. ಶ್ರವಣಾದಿಗಳಿಗೆ ಶ್ರದ್ಧೆ ಬೇಕಾಗಿದ್ದರೂ ಆತ್ಮತತ್ತ್ವವು ಕೇವಲಶ್ರದ್ಧಾಮಾತ್ರಗಮ್ಯವಾದ ಸ್ವರ್ಗಾದಿಗಳಂತೆ ಅಲ್ಲ. ಈಗಲೇ ಇಲ್ಲಿಯೇ ತತ್ತ್ವವು ಅನುಭವಗೋಚರವಾಗಬೇಕಾದ ವಸ್ತುತಂತ್ರಜ್ಞಾನಕ್ಕೇ ಈ ಸಾಧನೆಗಳು ಸೇರಿರುತ್ತವೆ. ಈಗ ಶ್ರವಣದ ಸ್ವರೂಪವನ್ನು ಕುರಿತು ತಿಳಿಯಲೆತ್ನಿಸೋಣ.

# ಶ್ರವಣದ ಸ್ವರೂಪ

## ವೇದಾಂತೇತರ ಶಾಸ್ತ್ರಗಳ ಪರಿಧಿ

ವ್ಯವಹಾರದಲ್ಲಿ ನಮ್ಮೆಲ್ಲರಿಗೂ ನಮ್ಮದೇ ಆಗಿರುವ ಶರೀರ, ಪ್ರಾಣಗಳು, ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ, ಸುಖದುಃಖಗಳೇ ಮೊದಲಾದ ವೇದನೆಗಳು ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿ ಇದ್ದುಬಿಟ್ಟಿವೆ. ನಾವು ವ್ಯವಹಾರ ಮಾಡುವಾಗ ''ನಾನು'' ಎಂದು ಹೇಳಿಕೊಳ್ಳುವೆವಷ್ಟೇ? ಹೀಗೆ ಹೇಳುವಾಗ ಶರೀರವನ್ನು 'ನಾನು' ಎಂದಿಟ್ಟುಕೊಂಡಿರುತ್ತೇವೆ. ಮಿಕ್ಕ ಪ್ರಾಣ – ಮೊದಲಾದ ಕರ್ಮೇಂದ್ರಿಯಗಳು, ಕಣ್ಣು, ಕಿವಿ ಮೊದಲಾದವುಗಳನ್ನು 'ನನ್ನವು' ಎಂದಿಟ್ಟು ಕೊಂಡಿರುತ್ತೇವೆ. ಹೀಗೆ ಈ ಒಟ್ಟು ಸಂಘಾತ(ಮುದ್ದೆ)ವನ್ನೇ 'ನಾನು' ಎಂದು ಕೊಳ್ಳುತ್ತಿರುತ್ತೇವೆ.

ವೇದಾಂತಶಾಸ್ತ್ರವೊಂದನ್ನುಳಿದು ಮಿಕ್ಕ ಶಾಸ್ತ್ರಗಳೆಲ್ಲವೂ ಈ ಮೇಲೆ ವರ್ಣಿಸಿದ 'ನಾನು' ಇಂಥವನು (ಳು) ಎಂಬುದನ್ನೇ ಪ್ರಧಾನವಾಗಿ ಹಿಡಿದು ''ಇಂಥ ನೀನು ಸುಖವಾಗಿರಬೇಕಾದರೆ ಹೀಗೆ ಹೀಗೆ ಮಾಡು. ಅದರಿಂದ ಇಂಥಿಂಥ ಫಲಗಳು ಬರುತ್ತವೆ'' ಎಂಬುದನ್ನೇ ತಿಳಿಸುತ್ತವೆ. ಎಲ್ಲ ಲೌಕಿಕಶಾಸ್ತ್ರ ಗಳು; ಧರ್ಮ, ದೇವರು, ಸ್ವರ್ಗಾದಿಗಳು ಮುಂತಾದವುಗಳನ್ನು ಕುರಿತು ವಿಧವಿಧವಾಗಿ ಹೇಳುವ ವೇದ-ಕುರಾನ್-ಬೈಬಲ್-ಮೊದಲಾದ ಶಾಸ್ತ್ರ ಗಳು; ಉಪಾಸನಾದಿಗಳಿಂದಲೂ, ಯೋಗಸಾಧನೆಗಳಿಂದಲೂ ಅದ್ಭುತವಾದ ಫಲಗಳನ್ನೂ ಹಾಗೂ ಪರಲೋಕಗತಿಗಳನ್ನೂ ಕುರಿತು ಹೇಳುವ ಶಾಸ್ತ್ರಗಳು, ಅಣಿಮಾದಿಸಿದ್ಧಿಗಳ ಪ್ರಾಪ್ತಿ, ದೇವತಾಸಾಕ್ಷಾತ್ಕಾರ, ದಿವ್ಯಪವಾಡಗಳ ಪ್ರಾಪ್ತಿಯೇ ಮೊದಲಾದದ್ದನ್ನು ಬೋಧಿಸುವ ಶಾಸ್ತ್ರಗಳೂ ಸಹ ಈ ಮೊದಲು ಹೇಳಿದ ''ನಾನು ಇಂಥವನು'' ಎಂಬುದನ್ನೇ ಪ್ರಧಾನವಾಗಿಹಿಡಿದು ತಮ್ಮ ತಮ್ಮ ವಿಷಯಗಳನ್ನು ಬೋಧಿಸುತ್ತಿರುತ್ತವೆ. ಹೀಗಿರುವುದರಿಂದ ಈ ಶಾಸ್ತ್ರಗಳೆಲ್ಲವೂ ಹೇಳತಕ್ಕ ವಿಷಯಗಳು ಕಾಲ-ದೇಶ-ಕಾರ್ಯಕಾರಣಭಾವಗಳಿಗೆ ಕಟ್ಟುಬಿದ್ದಿರುತ್ತವೆ. ನಾನು ಏನನ್ನೋ ಮಾಡಿ ಏನನ್ನೋ ಪಡೆಯಬೇಕೆಂಬ ತವಕವುಳ್ಳವರಿಗೆ ಇವು ಪ್ರಯೋಜನಕಾರಿಗಳಾಗಿಯೇ ಇವೆ.

## ವೇದಾಂತಶಾಸ್ತ್ರದ ವೈಶಿಷ್ಟ್ಯ

'ನಾನು ಇಂಥವನು' ಎಂಬುದನ್ನು ಪ್ರಧಾನವಾಗಿ ಹಿಡಿದು ಹೊರಟಿರುವ ಸಕಲಶಾಸ್ತ್ರಗಳ ಎಲ್ಲೆಕಟ್ಟನ್ನು ಈವರೆಗೆ ತೋರಿಸಲಾಗಿದೆ. ಈಗ ವೇದಾಂತದ ಬೋಧನೆ ಏನೆಂದರೆ : ಹೀಗೆ ಸಾಧ್ಯಸಾಧನರೂಪವಾದ ಎಂದರೆ ಮಾಡಿ ಪಡೆಯುವದೆಂಬ ಎಲ್ಲವೂ ಅನಿತ್ಯವೇ

ಆಗಿರುವುದೆಂಬುದನ್ನು ಜಿಜ್ಞಾಸುವು ಮನಗಂಡು ''**ನಿರ್ವೇದಮಾಯಾತ್ ನಾಸ್ತಿ ಅಕೃತಃ ಕೃತೇನ**'' (ಮುಂ. 1-2-12) ಮಾಡಿ ಪಡೆದದ್ದು ನಿತ್ಯವಲ್ಲ ಎಂದು ಅದರಲ್ಲಿ ವಿರಕ್ತನಾಗಿ ಇರಬೇಕು, ಹಾಗೂ ನಿತ್ಯವಾದದ್ದು ಮಾಡಿ ಪಡೆಯುವುದರಿಂದ ಸಿಕ್ಕುವುದಿಲ್ಲ ಎಂಬಂತೆ ಪರಮತತ್ತ್ವವನ್ನೇ ಕಂಡುಕೊಳ್ಳುವ ಗುರಿಯನ್ನು ಜೀವನಕ್ಕೆ ಇಟ್ಟುಕೊಂಡಿರಬೇಕು. ಇಂಥ ಅಧಿಕಾರಿಗೆ ಪರಮತತ್ತ್ವವಾದ ಆತ್ಮಸ್ವರೂಪವನ್ನು ಬೋಧಿಸಲಾಗುತ್ತದೆ. ಆ ಬೋಧನೆಯ ಸ್ವರೂಪವೇನೆಂದರೆ -

ಮೇಲೆ ವರ್ಣಿಸಿದ ''ನಾನು ಇಂಥವನು(ಳು)'' ಎಂಬ ಅನಿಸುವಿಕೆಗೆ ವೇದಾಂತದಲ್ಲಿ ''ಅಹಂಪ್ರತ್ಯಯ''ಎಂದು ಕರೆಯುತ್ತಾರೆ. ಇದೇ (Me- notion) ತಾನು ಎಂದು ಪ್ರತಿಯೊಬ್ಬನೂ ಸಹಜವಾಗಿ ತಿಳಿದುಕೊಂಡಿರುತ್ತಾನೆ. ಆದರೆ ಇದು ತಾನಲ್ಲ ಎಂದು ವೇದಾಂತವು ಉಪದೇಶಿಸುತ್ತದೆ. ನೀನು ಈ ಅಹಂಪ್ರತ್ಯಯವಲ್ಲ. ಇದು ತೋರಿದ್ದನ್ನೂ ಅಡಗಿದ್ದನ್ನೂ ಬೆಳಗುತ್ತಾ ಇದರ ಸೋಂಕೇ ಇಲ್ಲದಿರುವ ಈ ಅಹಂಪ್ರತ್ಯಯಕ್ಕೂ ಸಾಕ್ಷಿಯಾಗಿರುವ ಕೇವಲ ಚಿನ್ಮಾತ್ರಸ್ವರೂಪವೇ ನೀನು. ಅದೇ ನಿಜವಾದ ತಾನು, ನಾನು ಎಂದುಕೊಳ್ಳಲು ಆ ತತ್ತ್ವವೇ ಯೋಗ್ಯವಾಗಿದೆ. ಈ ಸಂಗತಿಯನ್ನು ನಿನ್ನ ಸ್ವಂತ ಅನುಭವದಿಂದ ಕಂಡುಕೋ. ಇದು ಶಾಸ್ತ್ರವು ಹೇಳುವದಾದ್ದರಿಂದ ಒಪ್ಪಬೇಕಾಗಿದೆ ಎಂದು ನಂಬಬೇಕಾಗಿಲ್ಲ. ಇದು ಬರೀ ನಂಬಿಕೆಯ ವಿಷಯವಲ್ಲ. ಬುದ್ಧಿ, ಮನಸ್ಸು, ಇಂದ್ರಿಯಗಳನ್ನು ಉಪಯೋಗಿಸಿ ಹೊರಗಿನ ವಸ್ತುಗಳನ್ನು ಕಂಡುಕೊಳ್ಳುವಂತೆಯೂ ಅಲ್ಲ. ''ಹೀಗಿರುವುದರಿಂದ ಹೀಗಿರಬೇಕು'' - ಉದಾಹರಣೆಗೆ ಹೊಗೆ ಕಾಣುವುದರಿಂದ ಬೆಂಕಿಯು ಅಲ್ಲಿರಬೇಕು-ಎಂಬ ಅನುಮಾನದಿಂದಲೂ ತರ್ಕದಿಂದಲೂ ಕಂಡುಕೊಳ್ಳತಕ್ಕದ್ದಲ್ಲ. ಪತಂಜಲಯೋಗಾದಿಗಳಲ್ಲಿ ಹೇಳಿದಂತೆ ಸಾಧನೆಮಾಡಿ ಅಸಂಪ್ರಜ್ಞಾತಸಮಾಧಿಯೇ ಮೊದಲಾದ ವಿಲಕ್ಷಣ ಅವಸ್ಥೆಗಳ ಅನುಭವವನ್ನು ಪಡೆದ ಬಳಿಕವೇ ಗೊತ್ತಾಗಬೇಕಾದ ತತ್ತ್ವವೂ ಅಲ್ಲ. ಇನ್ನು ಭೌತಿಕವಿಜ್ಞಾನದಿಂದಾಗಲಿ (Material Science) ಮಾನಸವಿಜ್ಞಾನದಿಂದಾಗಲೀ (Psychology) ತಿಳಿದುಕೊಳ್ಳುವ ಸಂಗತಿಯಂತೂ ಅಲ್ಲವೇ ಅಲ್ಲ. ಏಕೆಂದರೆ ಈ ನಿಜವಾದ ತಾನಾಗಿರುವ ನಿನ್ನ ಸ್ವರೂಪವು ಇಂದ್ರಿಯಗಳನ್ನೂ ಮನಸ್ಸನ್ನೂ (ಅಂತಃಕರಣವನ್ನೂ) ಮೀರಿರುವ ನಿನ್ನ ಸಹಜವಾದ ಇರುವಿಕೆಯಾಗಿದೆ. ಇಂಥ ಈ ಬರೀ ಇರವಿನ, ಬರೀ ಅರಿವಿನ ಸ್ವರೂಪವನ್ನು ಈಗ ನೀನು ತಪ್ಪಾಗಿ ತಿಳಿದುಕೊಂಡಿರುವ ''ನಾನು ಇಂಥವನು (ಳು)'' ಎಂಬ ಅನಿಸುವಿಕೆಯ ದೃಷ್ಟಿಯಿಂದ ''ಸಾಕ್ಷಿ'' ಎಂದು ವೇದಾಂತದಲ್ಲಿ ಕರೆದಿದೆ. ಈ ಸಾಕ್ಷಿಸ್ವರೂಪವನ್ನು ತಿಳಿಸುವ ಶಾಸ್ತ್ರವು ವೇದಾಂತ ಅಥವಾ ಉಪನಿಷತ್ತುಗಳು ಮಾತ್ರವೇ ಆಗಿವೆ. ಮಿಕ್ಕ ಯಾವ ಶಾಸ್ತ್ರಗಳಿಗೂ ಈ ಸಾಕ್ಷಿಸ್ವರೂಪದ ಸುದ್ದಿಯೇ ಗೊತ್ತಾಗುವಹಾಗಿಲ್ಲ. ಏಕೆಂದರೆ ಈ ಮೊದಲು (3ನೇ ಪುಟದಲ್ಲಿ) ಹೇಳಿದಂತೆ '' ನಾನು

ಇಂಥವನು'' ಎಂಬುದನ್ನೇ ಪ್ರಧಾನವಾಗಿ ಹಿಡಿದೇ ಎಲ್ಲಾ ಶಾಸ್ತ್ರಗಳೂ (ವೇದಾಂತ ಒಂದನ್ನುಳಿದು) ಹೊರಟಿವೆ. ಈ ಮಾತನ್ನು ಶ್ರೀಶಂಕರರು ಸೂತ್ರಭಾಷ್ಯದಲ್ಲಿ (1-1-4, ಭಾ.ಭಾ. 54) **''ನ ಹಿ ಅಹಂಪ್ರತ್ಯಯ ವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ, ಸಮಃ, ಏಕಃ, ಕೂಟಸ್ಥನಿತ್ಯಃ ಪುರುಷೋ ವಿಧಿಕಾಣ್ಡೇ ತರ್ಕಸಮಯೇ ವಾ ಕೇನಚಿತ್ ಅಧಿಗತಃ ಸರ್ವಸ್ಯ ಆತ್ಮಾ''** ಎಂದು ತಿಳಿಸಿದ್ದಾರೆ. ಧರ್ಮಾಧರ್ಮಗಳನ್ನು ಬೋಧಿಸುವ ವಿಧಿಕಾಂಡದಲ್ಲಾಗಲಿ ಬುದ್ಧಿಯ ಪ್ರತ್ಯಯಗಳನ್ನು ಜೋಡಿಸಿ ತರ್ಕದಿಂದ ನಿರ್ಣಯಿಸುವ ತಾರ್ಕಿಕರ ಸೂತ್ರದಲ್ಲಾಗಲಿ ಈ ಸಾಕ್ಷಿ ವಿಷಯವು ತಿಳಿಯಬಂದಿರುವುದಿಲ್ಲ ಎಂಬುದು ಈ ವಾಕ್ಯದ ಅಭಿಪ್ರಾಯವು. ಹೀಗಿರುವುದರಿಂದ ಜಿಜ್ಞಾಸುವು ಶ್ರವಣಮಾಡುವ ಸಮಕಾಲದಲ್ಲಿಯೇ ತನ್ನ ಅನುಭವಕ್ಕೆ ಹೊಂದಿಸಿಕೊಂಡು ನೋಡಿ ಅನುಭವದಿಂದಲೇ ಹಾಗಿರುವುದನ್ನು ಗುರ್ತಿಸಿ ಕಂಡುಕೊಳ್ಳಬೇಕು.

## ಅನುಭವ ಎಂದರೇನು?

ನಮಗೆ ಯಾವುದೇ ಅನುಭವವು ಬರಬೇಕಾದರೆ ದೇಹ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಿರಲೇಬೇಕಲ್ಲವೇ? ಈಗ ನೀವು ಹೇಳಹೊರಟಿರುವ ಸಾಕ್ಷಿಸ್ವರೂಪವು ಇಂದ್ರಿಯ, ಮನಸ್ಸು, ಬುದ್ಧಿಗಳಾಚೆಗೆ ತಾನೇತಾನಾಗಿದೆ ಎಂದು ಹೇಳಿದ ಬಳಿಕ ಮತ್ತೆ ಅದನ್ನು ಅನುಭವದಲ್ಲಿ ಕಂಡುಕೊಳ್ಳ ಬೇಕೆಂಬ ಮಾತು ಹೇಗೆ ಹೊಂದುತ್ತದೆ? ನೀವು ಹೇಳುತ್ತಿರುವ ಅನುಭವವೆಂಬುದು ಯಾವದು? ಎಂಬ ಪ್ರಶ್ನೆ ಬರುತ್ತದೆ. ಈ ಪ್ರಶ್ನೆಗೆ ಸಮಾಧಾನವನ್ನು ಹೇಳುವುದಕ್ಕೇ ಅನುಭವ ಎಂದರೇನು? ಎಂಬುದನ್ನು ಈಗ ವಿವರಿಸೋಣ. ಆಗ ವೇದಾಂತದ ಉಪದೇಶವು ಸ್ಪಷ್ಟವಾಗಿ ತಿಳಿಯುತ್ತದೆ. ಈ ವಿವರಣೆ ಇಲ್ಲದೆ ಸರಿಯಾಗಿ ತಿಳಿಯಲಾರದು.

## ಎರಡು ಬಗೆಯ ಅನುಭವಗಳು

ಹೊರಗಿನ ವಸ್ತುಗಳಿಗೂ ಇಂದ್ರಿಯಗಳಿಗೂ ಸಂಬಂಧ ಬಂದಾಗ ನಮಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಹಾಗೂ ಶೀತ - ಉಷ್ಣಗಳ ಅನುಭವವಾಗುವುದು ಎಲ್ಲರಿಗೂ ತಿಳಿದ ಮಾತಾಗಿದೆ. ಪವಾಡಗಳು, ಸಿದ್ಧಿಗಳು, ಮಹಿಮೆಗಳು - ಮುಂತಾದ ಭವ್ಯಾನುಭವಗಳೂ ದಿವ್ಯಾನುಭವಗಳೂ ಉತ್ಪನ್ನವಾಗುವುದುಂಟು. ಇದರಂತೆಯೇ ಶಾಸ್ತ್ರಗಳಲ್ಲಿ ತಿಳಿಸಿರುವ ಸ್ವರ್ಗ, ನರಕ, ಕೈಲಾಸ, ವೈಕುಂಠ, ಬ್ರಹ್ಮಲೋಕ, ಪಿತೃಲೋಕ - ಮೊದಲಾದ ಲೋಕಾಂತರಗಳಲ್ಲಿ ಅನೇಕ ಬಗೆಯ ವಿಚಿತ್ರಾನುಭವಗಳೂ ಬರುವುದುಂಟೆಂದು ಕೂಡಾ ತಿಳಿದುಬರುತ್ತದೆ. ಈ ಎಲ್ಲ ಬಗೆಯ ಅದ್ಭುತ ದಿವ್ಯ - ಭವ್ಯ ಅನುಭವಗಳನ್ನೂ ಸಹ

ವೇದಾಂತಶಾಸ್ತ್ರವು ''ವೇದನಾನುಭವದಲ್ಲಿ''ಯೇ ಸೇರಿಸಿಬಿಡುತ್ತದೆ. ಏಕೆಂದರೆ ಮೇಲೆ ತಿಳಿಸಿರುವ ಎಲ್ಲ ಬಗೆಯ ಅನುಭವಗಳೂ ಬಂದಿವೆ, ಬರುತ್ತವೆ ಮುಂತಾಗಿ ಹೇಳಬೇಕಾದರೆ ಈ ಮೊದಲು ಹೇಳಿದ 'ಅಹಂಪ್ರತ್ಯಯ'(Me-notion)ವೆಂಬುದಿದ್ದೇ ಇರಬೇಕು. ಆದ್ದರಿಂದ ವೇದಾನುಭವಗಳೆಲ್ಲಕ್ಕೂ ಈ ಅಹಂಪ್ರತ್ಯಯವೇ (ನಾನು ಇಂಥವನು ಎಂಬ ಭಾವವು) ಆಧಾರವಾಗಿದೆ. ಈ ಎರಡು ಬಗೆಯ ಎಂದರೆ ಪ್ರತ್ಯಯಾನುಭವ ವೇದನಾನುಭವಗಳೆರಡೂ ಅಹಂಪ್ರತ್ಯಯದ ಕಕ್ಷೆಯಲ್ಲಿಯೇ ಇವೆ. ಇವು ಉಂಟಾಗಲು ಇಂದ್ರಿಯಗಳು, ಮನಸ್ಸು, ಬುದ್ಧಿ, ದೇಶ, ಕಾಲ, ಕಾರ್ಯಕಾರಣಭಾವಗಳು ಇದ್ದೇ ತೀರಬೇಕು. ಮತ್ತು ಇವು ಅಂತಃಕರಣದಲ್ಲಿ ಬಂದುಹೋಗುವವುಗಳೇ ಹೊರತು ಸ್ಥಿರವಾಗಿರುವವುಗಳಲ್ಲ - ಇಂಥ ಈ ಎರಡು ಬಗೆಯ ಅನುಭವಗಳಲ್ಲಿ ಯಾವುದಾದರೊಂದರ ಬಗ್ಗೆ ತಿಳಿಯಪಡಿಸುವುದೇ ವೇದಾಂತೇತರ ಶಾಸ್ತ್ರಗಳ ಗುರಿಯು. ವ್ಯವಹಾರದೃಷ್ಟಿ ಅಥವಾ ಲೋಕಾನುಭವದೃಷ್ಟಿಯಲ್ಲಿ ಈ ಅನುಭವಗಳೆಲ್ಲವೂ ಉಂಟಾಗುವುದು ಸತ್ಯ. ಇಂಥ ಅನುಭವಗಳೆಲ್ಲ ಸುಳ್ಳು, ಭ್ರಾಂತಿ ಎಂದೂ ಇವುಗಳಿಂದ ಏನೂ ಪ್ರಯೋಜನವಿಲ್ಲವೆಂದೂ ವೇದಾಂತವು ಹೇಳುವುದಿಲ್ಲ. ''ನಾನು ಇಂಥವನು'' ಎಂಬುದನ್ನಿಟ್ಟುಕೊಂಡಾಗ ಇವೆಲ್ಲವೂ ಸರಿ. ಈ ಅನುಭವಗಳಿಂದ ಪ್ರಯೋಜನಗಳೂ ಉಂಟಾಗುತ್ತವೆ ಎಂದೇ ವೇದಾಂತವು ಒಪ್ಪಿಕೊಳ್ಳುತ್ತದೆ.

## ಅನುಭವಸ್ವರೂಪವೇ ಆದ ಸಾಕ್ಷಿತತ್ತ್ವ

ಆದರೆ ಈವರೆಗೆ ವಿವರಿಸಿದ ಎರಡು ಬಗೆಯ ಅನುಭವಗಳನ್ನೂ ಮೀರಿದ, ತಾನೇ ಅನುಭವಸ್ವರೂಪವಾಗಿರುವ ಪ್ರತಿಯೊಬ್ಬರ ನಿಜಸ್ವರೂಪ ಎಂದರೆ ನಿಜವಾದ ಬರೀ 'ಇರವಾಗಿರುವ' ತತ್ತ್ವವೇ ಪರಮಾರ್ಥವಾದ ಆತ್ಮತತ್ತ್ವವು. ಈ ತಾನಾಗಿರುವ ಸ್ವರೂಪವು ವೇದನ ಪ್ರತ್ಯಯಾನುಭವಗಳು ತೋರಿದ್ದನ್ನೂ ಅಡಗಿದ್ದನ್ನೂ ಬೆಳಗುತ್ತಾ ಇವುಗಳ ಸಂಗವೇ (ಅಂಟು) ಇಲ್ಲದೆ ಇದ್ದುಬಿಟ್ಟಿದೆ. ಅದೇ ನೀನು ಎಂಬುದು ವೇದಾಂತದ ಅಸಾಧಾರಣ ಉಪದೇಶವು. ಈ ತಾನಾಗಿ ಇರುವ ಸ್ವರೂಪಕ್ಕೇ ''ಸಾಕ್ಷಿ'' ಎಂದು ಹೆಸರು. ''ಸಾಕ್ಷಾತ್ ದ್ರಷ್ಟರಿ ಸಂಜ್ಞಾಯಾಂ'' ಎಂಬ ವ್ಯಾಕರಣದ ನಿಯಮದಂತೆ ಸಕಲವೇದನ ಪ್ರತ್ಯಯಾನುಭವಗಳನ್ನು ನೇರಾಗಿ (ಸಾಕ್ಷಾತ್ ಎಂದರೆ ಯಾವ ಸಾಧನೆಯನ್ನು ಬಯಸದೆ) ಬೆಳಗುವ ಹಾಗೂ ಈ ವೇದನ ಪ್ರತ್ಯಯಾನುಭವಗಳು ಅಡಗಿಹೋಗಿರುವುದನ್ನು ಸಹ ನೇರಾಗಿ ಬೆಳಗುತ್ತಿರುವ ಸಹಜಸ್ವರೂಪವೇ ಸಾಕ್ಷಿಸ್ವರೂಪವು. ಈ ತನ್ನ ನಿಜ ಸ್ವರೂಪದ ಕಡೆಗೆ ಜಿಜ್ಞಾಸುವು ಲಕ್ಷ್ಯವನ್ನು ಶ್ರವಣಕಾಲದಲ್ಲಿ ಹಿಂದಿರುಗಿಸಬೇಕು ಹಾಗೂ ಅದೇ ನಿಜವಾದ

ತಾನಾಗಿರುವುದನ್ನು ಗುರುತಿಸಿಕೊಳ್ಳಬೇಕು. ಇದೇ ಶ್ರವಣದ ಸ್ವರೂಪವು. ಇಲ್ಲಿ ಜಿಜ್ಞಾಸುವು ಹಿಂದಿರುಗಿ ಕಂಡುಕೊಳ್ಳಲು ಮೊದಲು ಒಂದು ಕ್ರಮವನ್ನು ನೋಡೋಣ. ಆ ಕ್ರಮದಿಂದ ಇದು ಸ್ಪಷ್ಟವಾಗುವುದು. ನಮ್ಮ ಲಕ್ಷ್ಯವು ಯಾವಾಗಲೂ ಬುದ್ಧಿ, ಮನಸ್ಸು, ಇಂದ್ರಿಯಗಳ ಮುಖಾಂತರ ಹೊರಗೆ ಹೋಗುತ್ತಿರುವುದು ಸ್ವಾಭಾವಿಕ. ಹೀಗೆ ಹೊರಗೆ ಹೋಗುತ್ತಿರುವ ಲಕ್ಷ್ಯವನ್ನು ಒಳಗಡೆಗೆ ಹರಿಸುತ್ತಾ ಹೋಗಬೇಕು. ಆ ಕ್ರಮವೇ ಶ್ರವಣ ಎನಿಸುವುದು. ಶ್ರವಣ ಎಂದರೆ ಬರೀ ಕೇಳುವುದಲ್ಲ. ಲಕ್ಷ್ಯವಿಟ್ಟು ಏಕಾಗ್ರತೆಯಿಂದ ಕೇಳುವುದು (ಔಜಿಂಔಿಟ್ಟಿಜ್ಞಿಜ). ಇಷ್ಟುಮಾತ್ರವಲ್ಲದೆ ಅನುಭಾವಿಗಳು ಹೇಳುತ್ತಿರುವಂತೆಯೇ ಅದು ಹಾಗಿದೆಯೇ ಎಂಬುದನ್ನು ತಾನು ಕಂಡುಕೊಳ್ಳುತ್ತಲೇ ಹೋಗಬೇಕು (ಖಟ ಚಿಥಿ ಡಟ್ಟಿಜ್ಜಿಜಿಥಿಥ). ಹೇಳುವವನೂ ಸಹ ಅನುಭವವನ್ನು ತೋರಿಸುತ್ತಲೇ ಜಿಜ್ಞಾಸುವನ್ನು ಹಿಂದಿರುಗುವಂತೆ ಬೋಧಿಸಬೇಕು. ಆಗ ಸಾಕ್ಷಿರೂಪವು ಅನುಭವವೇದ್ಯವಾಗುತ್ತದೆ.

## ಒಳ ಸರಿಯುವ ಕ್ರಮ

ಹೊರಗಿನ ವಸ್ತುಗಳನ್ನು ನೋಡುವಾಗ ನಾವು ಕಣ್ಣು ಮುಂತಾದ ಇಂದ್ರಿಯಗಳಲ್ಲಿ ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ನನ್ನ ಕಣ್ಣು ಸರಿಯಾಗಿ ಕಾಣುವುದೋ ಇಲ್ಲವೋ, ನನ್ನ ಕಿವಿ ಸರಿಯಾಗಿ ಕೇಳುವುದೋ ಇಲ್ಲವೋ, ಎಂಬುದನ್ನು ಪರೀಕ್ಷಿಸುವಾಗ ಇಂದ್ರಿಯಗಳನ್ನೇ ವಿಷಯೀಕರಿಸುವುದರಿಂದ ಅವುಗಳಲ್ಲಿಯ ತಾದಾತ್ಮ್ಯಭಾವವನ್ನು ಬಿಟ್ಟು ಮನಸ್ಸಿನಲ್ಲಿ ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ನನ್ನ ಮನಸ್ಸು ಚಂಚಲವಾಗಿದೆ, ವ್ಯಗ್ರವಾಗಿದೆ ಮುಂತಾಗಿ ಹೇಳುವಾಗ ಮನಸ್ಸಿನಲ್ಲಿಯ ತಾದಾತ್ಮ್ಯ ಭಾವವನ್ನು ಬಿಟ್ಟು ಬುದ್ಧಿಯಲ್ಲಿ ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ನನ್ನ ಬುದ್ಧಿಗೆ ಈ ವಿಷಯ ತಿಳಿಯಲಿಲ್ಲ, ಈ ವಿಷಯ ತಿಳಿಯಿತು ಎಂದು ಹೇಳುವಾಗ 'ನಾನು' ಎಂಬ ಅಹಂಪ್ರತ್ಯಯದೊಂದಿಗೆ ತಾದಾತ್ಮ್ಯಭಾವವನ್ನು ಹೊಂದಿರುತ್ತೇವೆ. ಇದರಂತೆ ಸುಖದುಃಖಾದಿಭಾವಗಳು ನಮ್ಮ ಮನಸ್ಸಿಗೆ ಬಂದಾಗ ಆಯಾ ಭಾವಗಳೇ ನಾವಾಗಿರುತ್ತೇವೆ. ತಾದಾತ್ಮ್ಯ ಎಂದರೆ ಅದೇ ತಾನಾಗಿರುವುದು (Identifying) ಎಂದರ್ಥ. ಇಲ್ಲಿಯವರೆಗೆ ಹೇಳಿದ ವಿಷಯವೇನೆಂದರೆ ಇಂದ್ರಿಯಗಳಿಂದ ಹೊರಗಿನ ವಿಷಗಳನ್ನು ಅರಿಯಬಹುದು. ಆದರೆ ವಿಷಯುಗಳು ಇಂದ್ರಿಯಗಳನ್ನರಿಯಲಾರವು. ಹೀಗೆಯೇ ಮನಸ್ಸು ಇಂದ್ರಿಯಗಳನ್ನರಿಯುತ್ತದೆ. 'ನಾನು' ಎಂಬುವನು ಬುದ್ಧಿಯನ್ನರಿಯುತ್ತಾನೆ. ಹೀಗೆ ಕ್ರಮವಾಗಿ ಒಳಸರಿದು 'ನಾನು' ಎಂಬ ಅನಿಸುವಿಕೆಯವರೆಗೆ (Me-notion) ಬಂದು ಅಹಂಪ್ರತ್ಯಯನಾಗಿ ನಿಲ್ಲಬೇಕು. ಈಗ ಅತಿಸೂಕ್ಷ್ಮವಾದ ಹಾಗೂ ಮಹತ್ತ್ವದ

ವಿಷಯವೇನೆಂದರೆ –'ನಾನು' ಎಂಬ ಅನಿಸುವಿಕೆ ಇದೆ ಎಂಬುದು ಏತರಿಂದ ತಿಳಿಯುತ್ತದೆ? ಎಂಬುದನ್ನು ಲಕ್ಷ್ಯವಿಟ್ಟು ವಿಚಾರಿಸಬೇಕು. ಈ ಹಿಂದೆ ಹೇಳಿದ ಬುದ್ಧಿಮನಸ್ಸುಗಳಿಂದ ಈ 'ನಾನು' ಎಂಬುದನ್ನು ವಿಷಯೀಕರಿಸಿ ತಿಳಿಯಲಾಗುವುದಿಲ್ಲ. ಆದ್ದರಿಂದ 'ನಾನು' ಎಂಬ ಅನಿಸುವಿಕೆಯು – ಅಹಂ ಪ್ರತ್ಯಯವು ಅನುಭವಸ್ವರೂಪವೇ ಆದ ಸಾಕ್ಷಿಯೇ ಆಗಿ ಉಳಿದು ನಾನೆಂಬ ಅನಿಸುವಿಕೆಯಲ್ಲಿಯ ತಾದಾತ್ಮ್ಯಭಾವವನ್ನು ಕಳಚಿಕೊಂಡೇ ಈ ಅಹಂ ಪ್ರತ್ಯಯವನ್ನು ವಿಷಯೀಕರಿಸುತ್ತೇವೆ. ಆದರೆ ಅದನ್ನು ಹೊರಪಡಿಸುವಾಗ ಮತ್ತೆ ಈ ಅಹಂಪ್ರತ್ಯಯ ಬುದ್ಧಿ, ಮನಸ್ಸು, ಇಂದ್ರಿಯಗಳ ಮೂಲಕವೇ ಹೊರಪಡಿಸಬೇಕಾಗಿರುವದರಿಂದ ಬುದ್ಧಿಯಿಂದಲೇ ತಿಳಿಯಿತು ಎಂದು ಭ್ರಾಂತರಾಗುತ್ತೇವೆ. ಒಬ್ಬರು ಓದುತ್ತಿರುವಾಗ ಕಣ್ಣಿನಿಂದ ನೋಡಿದ್ದನ್ನು ಬಾಯಿಯಿಂದ ಹೊರಪಡಿಸುತ್ತಿರುತ್ತಾರೆ. ಆಗ ಅವರು ಬಾಯಿಯಿಂದಲೇ ಓದುತ್ತಾರೆ ಎನ್ನುತ್ತೇವೆ. ಬಾಯಿಮುಚ್ಚಿಕೊಂಡು ಕಣ್ಣಿನಿಂದ ಓದಿಕೊಳ್ಳಬಹುದು. ಆದರೆ ಕಣ್ಣುಮುಚ್ಚಿಕೊಂಡು ಬಾಯಿಂದ ಓದುವುದು ಸಾಧ್ಯವಿಲ್ಲ. ಹಾಗೆಯೇ ಸಾಕ್ಷಿಸ್ವರೂಪವಾಗಿ ಉಳಿದು ಅಹಂಪ್ರತ್ಯಯವನ್ನು ವಿಷಯೀಕರಿಸಿ ಪುನಃ ಅಹಂಪ್ರತ್ಯಯ, ಬುದ್ಧಿ ಮೊದಲಾದವುಗಳ ಮೂಲಕ ಹೊರಪಡಿಸುತ್ತಿರುತ್ತೇವೆ. ಇದನ್ನು 'ವಿವೇಕ'ದಿಂದ ಘಬಿಡಿಸಿಕೊಳ್ಳುವುದರಿಂದಶ್ರೀ ಕಂಡುಕೊಳ್ಳುವುದೇ ಮುಖ್ಯ. ಹೀಗೆ ಅನುಭವಿಗಳ ಉಪದೇಶವನ್ನು ಕೇಳುವಾಗ ಹೊರಗಿನ ವಸ್ತುಗಳನ್ನು ನೋಡುವುದನ್ನು ನಿಲ್ಲಿಸಬೇಕು. ಮನಸ್ಸಿನಲ್ಲಿ ನಿಂತು ಹೊರಗಿನ ವಿಷಯಗಳನ್ನು ಕುರಿತು ಚಿಂತಿಸುವುದನ್ನು ಬಿಡಬೇಕು. ಬುದ್ಧಿಯಿಂದ ತರ್ಕಮಾಡುವ ಕೆಲಸವನ್ನು ನಿಲ್ಲಿಸಬೇಕು. 'ನಾನು' ಎಂಬ ಅನಿಸುವಿಕೆಯಲ್ಲಿ ನಿಂತು ನಾನು ಸುಖಿ, ನಾನು ದುಃಖಿ ಎಂಬ ಇತ್ಯಾದಿ ಯೋಚನೆಯುಗಳನ್ನು ತಂದುಕೊಳ್ಳುವುದನ್ನು ಕೈಬಿಡಬೇಕು. ಈ ಅಹಂಪ್ರತ್ಯಯವನ್ನು ವಿಷಯೀಕರಿಸುವ ಅನುಭವಸ್ವರೂಪನಾದ ಸಾಕ್ಷಿ ಮಾತ್ರನಾಗಿ ತಾನಿರುವುದನ್ನು ಏಕಾಗ್ರತೆಯಿಂದ ಲಕ್ಷಿಸಬೇಕು. ಇದೇ ಒಳ ಸರಿಯುವ ಕ್ರಮವು. ಹೀಗೆ ಒಳಸರಿದು ಅನುಭವಸ್ವರೂಪದವರೆಗೆ ಲಕ್ಷ್ಯವನ್ನು ತಿರುಗಿಸುವುದೇ ಶ್ರವಣದಲ್ಲಿ ಮುಖ್ಯವು. ಈ ಸಾಕ್ಷಿಸ್ವರೂಪವೇ ''ಆತ್ಮ''. ಮಿಕ್ಕ ಎಲ್ಲವೂ – ಅಹಂಪ್ರತ್ಯಯ ಮೊದಲುಗೊಂಡು ತೋರುವುದೆಲ್ಲವೂ ಅನಾತ್ಮ.

## ಆತ್ಮಪ್ರತ್ಯಯ

ಅನುಭವಸ್ವರೂಪನಾದ ಸಾಕ್ಷಿಯೇ ತಾನು ಎಂಬುದನ್ನು ಒಳಸರಿಯುವ ಕ್ರಮದಿಂದ ಕಂಡುಕೊಂಡಾಗ 'ನಾನು' ಎಂದುಕೊಳ್ಳುವುದಕ್ಕೆ ಅರ್ಹವಾದದ್ದು ಈ ಸಾಕ್ಷಿಸ್ವರೂಪವೇ ಹೊರತು ಈ ಮೊದಲು ಅಂದುಕೊಳ್ಳುತ್ತಿದ್ದ ಅಹಂ ಪ್ರತ್ಯಯವು ''ನಾನು''ಎಂದುಕೊಳ್ಳುವದಕ್ಕೆ

ಯೋಗ್ಯವಾದುದಲ್ಲ ಎಂಬ ನಿರ್ಣಯವು - ನಿಶ್ಚಿತಬುದ್ಧಿಯು ಅಂತಃಕರಣದಲ್ಲಿ ಹೊರಬರುತ್ತದೆ. ಇದು ಒಂದು ನಂಬಿಗೆಯಲ್ಲ, ಶಾಸ್ತ್ರಹಾಗೂ ಗುರುಗಳ ಬಗೆಗೆ ಇರುವ ಶ್ರದ್ಧೆಯಿಂದ ಒಪ್ಪಿಕೊಂಡಿದ್ದಲ್ಲ; ತರ್ಕದಿಂದಲೂ ಊಹಿಸಿದ್ದಲ್ಲ. ಮತ್ತೇನೆಂದರೆ ನೇರಾದ ತಾನೇ ಆಗಿರುವ ಅನುಭವದ ಬಲದಿಂದ ಅನುಭವಸ್ವರೂಪವನ್ನು ಕಂಡುಕೊಂಡಿದ್ದರ ಬಲದಿಂದ ಬಂದಿರುವ ನಿಶ್ಚಿತಬುದ್ಧಿಯಾಗಿದೆ. ಈ ಆತ್ಮ ಪ್ರತ್ಯಯವು ಅಂತಃಕರಣದಲ್ಲಿ ಹೊರತೋರಿ ಕೊಳ್ಳುವುದೇ ಶ್ರವಣದ ಪ್ರಯೋಜನವು. ಹೊರಗಿನ ವಸ್ತುಗಳನ್ನು ಕುರಿತು ತಿಳಿದಾಗ ಹೇಗೆ ಆಯಾ ವಸ್ತುಗಳ ಬಗ್ಗೆ ನಿಶ್ಚಿತವಾದ ಅರಿವುಂಟಾಗುವುದೋ ಹಾಗೆಯೇ ಇಲ್ಲಿ ತಾನೇ ತಾನಾಗಿರುವ ಅನುಭವಸ್ವರೂಪದ ಕಡೆಗೆ ಲಕ್ಷ್ಯವನ್ನು ಹಿಂದಿರುಗಿಸಿದಾಗ ಆ ತನ್ನ ನಿಜವಾದ ಇರುವಿಕೆಯ ಬಗ್ಗೆ ಉಂಟಾದ ಅನುಭವಪೂರ್ವಕವಾದ ನಿಶ್ಚಿತಜ್ಞಾನವಾಗಿರುತ್ತದೆ. ಇಲ್ಲಿ ಹೊರಗಿನ ವಸ್ತುಗಳಂತೆ ಆತ್ಮಸ್ವರೂಪವನ್ನು ವಿಷಯೀಕರಿಸಿ ಅರಿತೆನೆಂದು ತಪ್ಪಾಗಿ ತಿಳಿಯಬಾರದು. ಮತ್ತೇನೆಂದರೆ ಸಾಕ್ಷಿಸ್ವರೂಪದವರೆಗೆ ಜಿಜ್ಞಾಸುವಿನ ಲಕ್ಷ್ಯವು ಹೋದಾಗ ಅದು ತನ್ನ ಮನಸ್ಸಾಗಿರುವಿಕೆ ಅಥವಾ ಬುದ್ಧಿಯಾಗಿರುವಿಕೆಯನ್ನು ಕಳೆದುಕೊಂಡು ಆ ಸ್ವರೂಪದಂತೆಯೇ ಭಾಸವಾಗತೊಡಗುತ್ತದೆ. ಇದೇ ಆತ್ಮಪ್ರತ್ಯಯದ ಸ್ವರೂಪವು. ಇದನ್ನೂ ಸಹ ಅನುಭವಸ್ವರೂಪವೇ ಆದ ಸಾಕ್ಷಿಸ್ವರೂಪದ ಬೆಳಕಿನಲ್ಲಿಯೇ ಗುರುತಿಸಿರುತ್ತೇವೆ. ಕಾರಣಸ್ವರೂಪವು ಆತ್ಮಪ್ರತ್ಯಯದಿಂದ ವಿಷಯೀಕರಿಸಲ್ಪಡುವುದಿಲ್ಲ. ಮತ್ತೇನೆಂದರೆ ಜಿಜ್ಞಾಸುವು ಅನುಭವ ಸ್ವರೂಪನಾಗಿಯೇ ಉಳಿಯುತ್ತಾನೆ. ಇದನ್ನು ಗುರುತಿಸಿದ ಬುದ್ಧಿಯು ಅಥವಾ ಅಂತಃಕರಣವು, ಮನಸ್ಸೂ, ಆತ್ಮಸ್ವರೂಪದಂತೆ ಭಾಸವಾಗುತ್ತದೆ. ಆದ್ದರಿಂದ ಆತ್ಮಸ್ವರೂಪವನ್ನು ಅರಿಯುವುದೆಂದರೆ ಆ ಸ್ವರೂಪವಾಗಿ ಉಳಿಯುವುದೇ ಆಗಿದೆ. ಉತ್ತಮಾಧಿಕಾರಿಯಾದ ಜಿಜ್ಞಾಸುವು ಶ್ರವಣ ಸಮಕಾಲದಲ್ಲಿಯೇ ಸ್ವರೂಪನಾಗಿ ಉಳಿದುಕೊಳ್ಳುತ್ತಾನೆ.

## ಅದ್ವಿತೀಯ ಸ್ವರೂಪ

ಈವರೆಗಿನ ವಿವೇಚನೆಯಿಂದ ಅಹಂಪ್ರತ್ಯಯದವರೆಗಿನ ಎಲ್ಲವೂ ಅನಾತ್ಮ ಎಂದರೆ ನಾನಲ್ಲದ್ದು, ಸಾಕ್ಷಿಸ್ವರೂಪವು ಆತ್ಮ ಎಂದರೆ ನಿಜವಾದ ತಾನು ಎಂಬ ವಿಭಾಗವಾಗಿರುವಂತೆ ತಿಳಿದುಬರುತ್ತದೆ. ಆದರೆ ಹೀಗೆ ಆತ್ಮಾನಾತ್ಮ ಎಂಬ ಎರಡು ಸ್ವತಂತ್ರ ವಸ್ತುಗಳಿಲ್ಲ. ಶ್ರೀಶಂಕರರು ಬೃಹದಾರಣ್ಯಕ ಭಾಷ್ಯದಲ್ಲಿ ''**ನ ಚ ಅನಾತ್ಮಾ ಸನ್ ಸರ್ವಮ್ ಆತ್ಮೈವ ಭವತಿ ಕಸ್ಯಚಿತ್। ತಸ್ಮಾತ್ ಅವಿದ್ಯಯೈವ ಅನಾತ್ಮತ್ವಂ ಪರಿಕಲ್ಪಿತಂ, ನ ತು ಪರಮಾರ್ಥತಃ ಆತ್ಮವ್ಯತಿರೇಕೇಣ ಅಸ್ತಿಕಿಂಚಿತ್॥**'' (ಬೃ. 2-4-14, ಭಾ.ಭಾ. 377) ಅನಾತ್ಮ ಎಂಬ

ವಸ್ತುವು ಮೊದಲು ಇದ್ದು ಜ್ಞಾನವಾದ ಬಳಿಕ ಅದು ಆತ್ಮವಾಗುವುದು ಎಂದಲ್ಲ. ಆದ್ದರಿಂದ ಆತ್ಮಸ್ವರೂಪವನ್ನು ತಿಳಿಯದಿದ್ದಾಗ ಆ ಅವಿದ್ಯೆಯಿಂದಲೇ ಆತ್ಮನನ್ನೇ ಅನಾತ್ಮ ಎಂದು ತಪ್ಪಾಗಿ ತಿಳಿದಿರುತ್ತೇವೆ. ಆದ್ದರಿಂದ ಅನಾತ್ಮವು ಕಲ್ಪಿತ. ಪರಮಾರ್ಥವಾಗಿ ಆತ್ಮನಿಗಿಂತ ಬೇರೆಯಾಗಿ ಯಾವುದೂ ಇಲ್ಲ ಎಂಬುದು ಈ ವಾಕ್ಯದ ತಾತ್ಪರ್ಯವು. ಆದ್ದರಿಂದ ಆತ್ಮ-ಅನಾತ್ಮ ಎಂಬ ಎರಡು ಇವೆ ಎಂದು ತಿಳಿದುಕೊಳ್ಳಬಾರದು. ಮತ್ತೇನೆಂದರೆ ಆತ್ಮಸ್ವರೂಪವಾದ ಸಾಕ್ಷಿತತ್ತ್ವವೇ ನಿಜವಾಗಿರತಕ್ಕದ್ದು. ಅದನ್ನು ಅರಿಯದಿದ್ದಾಗ ಅದೇ ತತ್ತ್ವವೇ ಅನಾತ್ಮವಾದಂತೆ ಕಾಣುತ್ತದೆ. ಹಾಗೆ ಕಂಡಾಗಲೂ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗಿರುವುದೇ ಇಲ್ಲ. ಆದ್ದರಿಂದ ಆತ್ಮಸ್ವರೂಪವು ಅದ್ವಿತೀಯವು. ಇದನ್ನು ಹೇಗೆ ಅನುಭವದಲ್ಲಿ ಕಂಡುಕೊಳ್ಳಬೇಕೆಂಬುದನ್ನು ನೋಡೋಣ.

1. ಹೊರಗಿನ ಪ್ರಪಂಚಸಮೇತವಾಗಿ ನಮ್ಮ ಶರೀರದಿಂದ ಆರಂಭಿಸಿ ಅಹಂಪ್ರತ್ಯಯದವರೆಗಿನದೆಲ್ಲವೂ ಅನಾತ್ಮ. ಈ ಅನಾತ್ಮವು ಆತ್ಮಸ್ವರೂಪವನ್ನುಳಿದು ತಾನೇ ಇದ್ದದ್ದಾಗಲಿ ತೋರಿಕೊಂಡದ್ದಾಗಲಿ ಅನುಭವದಲ್ಲಿಲ್ಲ. ಅಹಂಪ್ರತ್ಯಯ ಪ್ರಪಂಚ ಇದೆ ಎನ್ನುವಾಗ ಆತ್ಮಸ್ವರೂಪವಾದ ತಾನು ಇದ್ದೇ ತೀರಬೇಕು.

2. ಈ ಆತ್ಮಸ್ವರೂಪವಾದ ನಿಜವಾದ ತಾನು ಅನಾತ್ಮವನ್ನೆಲ್ಲಾ ವ್ಯಾಪಿಸಿರುತ್ತಾನೆ. ಇಲ್ಲಿಯವರೆಗೆ ಅನಾತ್ಮ ಇಲ್ಲಿಂದ ಮುಂದಕ್ಕೆ ಆತ್ಮ ಎಂದು ಮೇರೆಯನ್ನು ತೋರಿಸಲು ಸಾಧ್ಯವಿಲ್ಲ. ಸಕ್ಕರೆಯಿಂದ ಮಾಡಲ್ಪಟ್ಟ ಆನೆಯಲ್ಲಿ ಇಲ್ಲಿಯವರೆಗೆ ಆನೆ, ಇಲ್ಲಿಂದ ಮುಂದಕ್ಕೆ ಸಕ್ಕರೆ ಎಂಬ ವಿಭಾಗವು ಹೇಗಿಲ್ಲವೋ, ಆನೆಯನ್ನೆಲ್ಲಾ ಸಕ್ಕರೆಯೇ ವ್ಯಾಪಿಸಿದೆಯೋ ಹಾಗೆಯೇ ಆತ್ಮವೇ ಅನಾತ್ಮವನ್ನೆಲ್ಲಾ ವ್ಯಾಪಿಸಿರುತ್ತದೆ. ಹೀಗೆ ಆತ್ಮ ಸ್ವರೂಪದ ವ್ಯಾಪ್ತಿಯನ್ನು ಅನಾತ್ಮದಲ್ಲೆಲ್ಲ ಕಂಡುಕೊಂಡಾಗ ಅನಾತ್ಮವು ಬಾಧಿತವಾಗುತ್ತದೆ ಎಂದರೆ ಕಂಡರೂ ನಿಜವಾಗಿಲ್ಲ ಎಂದಾಗುತ್ತದೆ. ಅನಾತ್ಮದ ನಿಜವು ಆತ್ಮನೇ ಆಗಿರುವುದು ಅನುಭವವೇದ್ಯವಾಗುತ್ತದೆ.

3. ಕೇವಲ ತಾನೇತಾನಾಗಿರುವ ಆತ್ಮಸ್ವರೂಪದ ದೃಷ್ಟಿಯಿಂದ ಅನಾತ್ಮವಾದ ಪ್ರಪಂಚವು ಒಂದಿದೆ ಎಂಬ ತಕರಾರು ಬರುವ ಹಾಗೆಯೇ ಇಲ್ಲ. ಅಹಂಪ್ರತ್ಯಯದ ದೃಷ್ಟಿಯಿಂದಲೇ ಆತ್ಮ, ಅನಾತ್ಮ ಎಂಬ ಭೇದವನ್ನು ತತ್ತ್ವವನ್ನು ತಿಳಿಸಲೋಸುಗ ಆರಂಭದಲ್ಲಿ **ಅಧ್ಯಾರೋಪ** ದೃಷ್ಟಿಯಿಂದ ಒಪ್ಪಿರುತ್ತದೆ. ಯಾವಾಗ ಆತ್ಮಸ್ವರೂಪದ ವ್ಯಾಪ್ತಿಯನ್ನು ಕಂಡು ಕೇವಲ ಆತ್ಮ ಸ್ವರೂಪದ ದೃಷ್ಟಿಯಿಂದ ನೋಡುವನೋ ಆಗ ತನಗೆ ಎರಡನೆಯದಿಲ್ಲದ ಅದ್ವಿತೀಯನಾಗಿಯೇ ಉಳಿಯುತ್ತಾನೆ. ಆಗ ಸಾಕ್ಷಿಯಾದ ಆತ್ಮ, ಸಾಕ್ಷ್ಯವಾದ ಅನಾತ್ಮ ಎಂಬ

ಭೇದವೇ ಹೊರಟುಹೋಗಿರುತ್ತದೆ. ಹೀಗೆ ಅದ್ವಿತೀಯವಾದ ಆತ್ಮಾನುಭವದಲ್ಲಿ ನೆಲೆನಿಲ್ಲುವುದೇ **ಶ್ರವಣದ ಫಲವು.** ಶ್ರವಣಮಾತ್ರಕ್ಕೇ ಈ ಫಲವು; ಈ ನೆಲೆನಿಲ್ಲುವಿಕೆಯು ಬಾರದಿದ್ದವರಿಗೆ ಮನನವನ್ನು ಹೇಳಿರುತ್ತದೆ. ಈಗ ಮನನದ ಸ್ವರೂಪವನ್ನು ಕುರಿತು ತಿಳಿಯಲೆತ್ನಿಸೋಣ.

* * * * *

# ಮನನ

## ಮನನ ಎಂದರೇನು?

ಮನನ ಎಂದರೆ ಶ್ರವಣಕಾಲದಲ್ಲಿ ಗ್ರಹಿಸಿದ ಸಂಗತಿಗಳನ್ನು ತಾನೇ ತನ್ನಲ್ಲಿ ಅನುಭವಪೂರ್ವಕವಾದ ಯುಕ್ತಿಗಳಿಂದ ಹೊಂದಿಸಿ ನೋಡಿಕೊಳ್ಳುತ್ತಾ ಆತ್ಮಸ್ವರೂಪನಾಗಿ ನೆಲೆನಿಲ್ಲುವ ವಿಧಾನವು. ಶ್ರವಣಕ್ಕೆ ಅನುಭವಿಗಳ ಬೋಧವು ಬೇಕಾಗಿರುತ್ತದೆ. ಮನನದಲ್ಲಿ ಆ ಬೋಧೆಯನ್ನೇ ಯುಕ್ತಿಗೆ ಅನುಭವಪೂರ್ವಕವಾಗಿ ಹೊಂದಿಸಿ ನೋಡಿಕೊಳ್ಳುವುದು ಹೇಗೆ? ಆ ರೀತಿಗಳು ಯಾವುವು? ಎಂಬುದನ್ನು ಕೇಳಿಕೊಂಡ ಬಳಿಕ ತಾನೊಬ್ಬನೇ ಏಕಾಗ್ರತೆಯಿಂದ ಆ ರೀತಿಗಳನ್ನನುಸರಿಸುತ್ತಾ ಕೇವಲಾತ್ಮನಾಗಿ ಅದ್ವಿತೀಯನಾಗಿ ನೆಲೆನಿಲ್ಲುವುದೇ ಮುಖ್ಯಗುರಿ. ಆದ್ದರಿಂದ ಅನುಸಂಧಾನಮಾಡಬೇಕಾದ ಅನುಭವ ಪೂರ್ವಕವಾದ ಯುಕ್ತಿಗಳನ್ನು ಇಲ್ಲಿ ತೋರಿಸಲಾಗುತ್ತದೆ.

## ಸಾಕ್ಷ್ಯನುಭವವನ್ನು ಆಶ್ರಯಿಸುವುದು

ನಮಗೆ ವಿಷಯಗಳನ್ನು ತಿಳಿದುಕೊಳ್ಳಲು ಬುದ್ಧಿ, ಮನಸ್ಸು, ಇಂದ್ರಿಯಗಳು ಬೇಕೆಂಬುದು ಸಹಜವಾಗಿದೆ. ಆದರೆ ಬುದ್ಧಿಯೇ ಮೊದಲಾದ ಯಾವ ಸಾಧನೆಯ ಅಗತ್ಯವಿಲ್ಲದೆಯೇ ಒಳಗಿನಿಂದ ಕೆಲವು ಅನುಭವಗಳು ಬರುತ್ತಿರುತ್ತವೆ. ಉದಾ: ''ನಾನೊಂದು ಕನಸನ್ನು ಕಂಡೆನು'' ಇದು ನಮ್ಮ ಬುದ್ಧಿಗೆ ಒಳಗಿನಿಂದ ನೇರಾಗಿ ಬಂದ ಅನುಭವವು. ಹೊರಗಿನ ವಸ್ತುಗಳನ್ನರಿಯುವಾಗ ಇಂದ್ರಿಯ, ಮನಸ್ಸು, ಬುದ್ಧಿಗಳನ್ನುಪಯೋಗಿಸಿ ಅರಿಯುತ್ತೇವೆ. ಆದರೆ ''ನನಗೊಂದು ಕನಸಾಯಿತು'' ಎಂಬುದನ್ನರಿಯಲು ಇವುಗಳ ಕಸರತ್ತೇನೂ ಬೇಕಾಗಿಲ್ಲ. ಇದರಂತೆಯೇ ''ನಾನು ಸುಖವಾಗಿ ನಿದ್ರಿಸಿದೆನು'' ಎಂಬ ಅನುಭವವು ಒಳಗಿನಿಂದಲೇ ಈ ಬುದ್ಧಿಗೆ ನೇರಾಗಿ ಬಂದಿರುತ್ತದೆ. ಹೀಗೆ ಇಂದ್ರಿಯ, ಮನಸ್ಸು, ಬುದ್ಧಿಗಳ ಕಸರತ್ತಿನ ಅಪೇಕ್ಷೆ ಇಲ್ಲದೆ ನೇರಾಗಿ ಒಳಗಿನಿಂದ

ಬರುವ ಈ ಬಗೆಯ ಅನುಭವವನ್ನು **'ಸಾಕ್ಷ್ಯನುಭವ'** (Intution) ಎನ್ನುತ್ತಾರೆ. ಈ ಅನುಭವವು ಎಲ್ಲರಿಗೂ ಸಹಜವಾಗಿಯೇ ಇರುವುದರಿಂದ ಇದು ಸಾರ್ವತ್ರಿಕಾನುಭವವು. ಮನನಕ್ಕೆ ಸಾಕ್ಷ್ಯನುಭವವನ್ನೇ ಆಶ್ರಯಿಸಬೇಕು. ವೇದನಪ್ರತ್ಯಯಾನುಭವಗಳನ್ನು ಹಿಡಿಯಬಾರದು.

## ಮನನಮಾಡುವ ಕ್ರಮ

ವ್ಯವಹಾರದೃಷ್ಟಿಯಿಂದ ''ನಾನು ಈ ಜಗತ್ತಿನಲ್ಲಿ ಒಂದು ಕಾಲದಲ್ಲಿ ಒಂದು ದೇಶದಲ್ಲಿ ಒಬ್ಬ ತಂದೆತಾಯಿಗಳಿಂದ ಜನಿಸಿದ್ದೇನೆ. ನನ್ನಂತೆ ಇತರ ಜನರೂ ಜೀವಿಗಳೂ ಇಲ್ಲಿದ್ದಾರೆ. ನಾನು ಹುಟ್ಟುವ ಮೊದಲೂ ಈ ಪ್ರಪಂಚವು ಇತ್ತು. ನಾನು ಸತ್ತಹೋದ ಬಳಿಕವೂ ಇದು ಇದ್ದೇ ಇರುತ್ತದೆ. ಇಂಥ ಅನಾದಿ ಅನಂತವಾದ ಪ್ರಪಂಚದಲ್ಲಿ ಸ್ವಲ್ಪ ದಿನ ಇದ್ದು ಸತ್ತು ಹೋಗುವವನು ನಾನು'' ಎಂದು ತಿಳಿದಿರುತ್ತೇನೆ. ಇದು ವ್ಯವಹಾರಕ್ಕೆ ಬೇಕೂ ಆಗಿದೆ. ಸರಿಯಾಗಿಯೂ ಇದೆ. ಆದರೆ ಪರಮಾರ್ಥತತ್ತ್ವವನ್ನು ಅನುಭವಪೂರ್ವಕವಾಗಿ ಗೊತ್ತುಪಡಿಸುವಾಗ ಈ ಮೇಲಿನ ಗ್ರಹಿಕೆಯು ಉಪಯೋಗವಾಗುವುದಿಲ್ಲ. ಈ ವಿಚಾರ ಸರಣಿ ಹೇಗೆಂದರೆ –

1. ಸೂರ್ಯ, ಚಂದ್ರ, ಗ್ರಹ, ನಕ್ಷತ್ರಾದಿ ಅನಂತಕೋಟಿಬ್ರಹ್ಮಾಂಡ ಹಾಗೂ ಲೋಕಲೋಕಾಂತರಗಳು ಸೇರಿರುವ **''ಆಧಿದೈವಿಕಪ್ರಪಂಚ''** (Divine plane) ಎಂಬ ಒಂದುಗುಂಪು. ಎದುರಿಗೆ ಕಾಣುವ ಭೌತಿಕಪ್ರಪಂಚ ಹಾಗೂ ಅದರಲ್ಲಿರುವ ಎಲ್ಲ ಜೀವರುಗಳ ಶರೀರಾದಿಗಳ (ತನ್ನ ಶರೀರವೂ ಸೇರಿ) ಸಮೇತವಾದ ಇಡೀ ವಿಶ್ವವನ್ನು ಒಂದು ಗುಂಪು ಮಾಡಿಕೊಳ್ಳಬೇಕು. ಇದಕ್ಕೆ **ಆಧಿಬೌತಿಕ ಪ್ರಪಂಚ** (Material plane) ಎಂದು ಹೆಸರು. ಏಕೆಂದರೆ ಇದು ಆಕಾಶ, ವಾಯು, ಅಗ್ನಿ, ಜಲ, ಭೂಮಿ ಎಂಬ ಪಂಚಮಹಾಭೂತಗಳಿಂದಲೇ ಆಗಿರುತ್ತದೆ. ಭೌತಿಕವಿಜ್ಞಾನಿಗಳು ಹಿಂದೆ ಕಂಡುಹಿಡಿದಿರುವ, ಈಗ ಇದ್ದದ್ದನ್ನು ನೋಡಿಸುವ, ಮುಂದಕ್ಕೆ ಕಂಡುಹಿಡಿಯುವ ಎಲ್ಲಾ ಬಗೆಯ (ಕಂಪ್ಯೂಟರ್, ರೋಬೋಟ್ಸ್, ಸ್ಪೂಟ್ನಿಕ್ ವಗೈರೆ) ಎಲ್ಲಾ ಯಂತ್ರಗಳೂ ಆಧಿಭೌತಿಕವೇ ಆಗಿವೆ. ಇದು ಎರಡನೆಯ ಗುಂಪು. ಇನ್ನು ತನ್ನ ದೇಹದ ಒಳಗಡೆ ಇರುವ ಪ್ರಾಣ, ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ, ಸುಖ, ದುಃಖ, ವೇದನೆಗಳು, ಕೊನೆಗೆ ''ನಾನು ಇಂಥವನು (ಳು)'' ಎಂಬ ಅಹಂಪ್ರತ್ಯಯವೂ ಸೇರಿ ಒಂದು ಗುಂಪು. ಇದನ್ನು **''ಆಧ್ಯಾತ್ಮಿಕಪ್ರಪಂಚ''** (Spiritual plane or Corporial plane) ಎಂಬುದು ಮೂರನೆಯ ಗುಂಪು. ಈ ಮೂರೂ ಬಗೆಯ ಪ್ರಪಂಚಗಳನ್ನು ಸೇರಿಸಿ ಒಂದು ಗುಂಪು ಮಾಡಿಕೊಳ್ಳಬೇಕು. ಮೇಲೆ

ವರ್ಣಿಸಿದ ಮೂರು ಬಗೆಯ ಪ್ರಪಂಚವು ಅನಾದಿ ಅನಂತವಾಗಿರುವ ಕಾಲ, ದೇಶ, ಕಾರಣಭಾವಗಳಿಗೆ ಒಳಪಟ್ಟಿರುತ್ತದೆ. [Time, Space & Causation]. ಹೀಗೆ ಹೇಳಿದ ಮೂರು ಬಗೆಯ ಪ್ರಪಂಚವೂ ಕಾಲದೇಶಕಾರ್ಯ ಕಾರಣಭಾವಗಳೂ ಸೇರಿ ಒಟ್ಟು ಪ್ರಪಂಚವು (ಅನೇಕ ಜೀವರು, ದೇವತೆಗಳು, ಮೊದಲಾದ ಎಲ್ಲಾ ನಾನಾತ್ವವೂ ಸೇರಿದ ಒಟ್ಟು ಪ್ರಪಂಚವು ) ಸಾಕ್ಷಿಸ್ವರೂಪನಾದ ತನ್ನಲ್ಲಿ ಎಚ್ಚರದ ಅವಸ್ಥೆಯು ತೋರಿಕೊಂಡಾಗ ಮಾತ್ರ ಏಕಕಾಲಕ್ಕೆ ಗೋಚರವಾಗುವುದು ಎಂಬುದನ್ನು ಕಂಡುಕೊಳ್ಳಬೇಕು. ಅರ್ಥಾತ್ ಎಚ್ಚರದ ಅವಸ್ಥೆಯು ತೋರುವ ಮೊದಲು 'ತಾನು', ತನ್ನಲ್ಲಿ ಇಡೀ ಎಚ್ಚರದ ಅವಸ್ಥೆ, ಆ ಅವಸ್ಥೆಯಲ್ಲಿ 'ನಾನು' ಎಂಬ ಅಹಂಪ್ರತ್ಯಯ ಹಾಗೂ ಹೊರಗಿನ ಪ್ರಪಂಚ, ಎಂದು ಕಂಡುಕೊಳ್ಳಬೇಕು.

2. ಕನಸು ತೋರುವ ಮೊದಲು ನಿದ್ರೆಯಲ್ಲಿ ಬರೀ ತಾನೇ ಇರುವೆನು . ಆ ತನ್ನಲ್ಲಿಯೇ ಇಡೀ ಕನಸಿನ ಅವಸ್ಥೆ. ಆ ಅವಸ್ಥೆಯಲ್ಲಿ 'ನಾನು ಇಂಥವನು' ಎಂಬ ಅಹಂಪ್ರತ್ಯಯ, ಹಾಗೂ ಅನೇಕ ಜೀವರುಗಳಿಂದ ಕೂಡಿದ ಆಧಿಭೌತಿಕಪ್ರಪಂಚ, ಸೂರ್ಯಚಂದ್ರಾದಿ ಆಧಿದೈವಿಕಪ್ರಪಂಚ, ಕನಸಿಗೇ ಮೀಸಲಾದ ಅನಾದಿ ಅನಂತವಾದ ಕಾಲದೇಶಕಾರ್ಯಕಾರಣ ಭಾವಗಳು ಎಲ್ಲವೂ ಒಮ್ಮೆಗೇ ತೋರಿಕೊಳ್ಳುವುವು. ಕನಸಿನ ಅವಸ್ಥೆ ಹೋದೊಡನೆಯೇ ಎಲ್ಲವೂ ಒಟ್ಟಿಗೇ (ಇಡೀ ಕನಸೇ) ಹೋಗಿಬಿಡುವುದು ಎಲ್ಲರ ಅನುಭವವು. ಇದರಂತೆಯೇ ತಾನು ತನ್ನಲ್ಲಿ ಎಚ್ಚರದಲ್ಲಿ ಅಹಂಪ್ರತ್ಯಯ ಪ್ರಪಂಚ ಎಂದು ಇಡೀ ಎಚ್ಚರವನ್ನೇ ಉಂಡೆಯಾಗಿ ಲಕ್ಷಿಸಬೇಕು. ಹೀಗೆ ಲಕ್ಷಿಸಿದಾಗ ಜಿಜ್ಞಾಸುವು ಸಾಕ್ಷಿಸ್ವರೂಪನಾಗಿಯೇ ಉಳಿದಿರುತ್ತಾನೆ. ಇಲ್ಲಿ ಗಮನಿಸಬೇಕಾದ ಸಂಗತಿಗಳೇನೆಂದರೆ ನನಗೆ ಕನಸಾಯಿತು ಎಂಬುದು ಹೇಗೆ ಸಾಕ್ಷ್ಯನುಭವವೋ ಹಾಗೆಯೇ ನನಗೆ ಎಚ್ಚರವಾಯಿತು ಎಂಬುದೂ ಸಾಕ್ಷ್ಯನುಭವವೇ ಆಗಿದೆ. ಇಡೀ ಎಚ್ಚರವನ್ನು ಸಾಕ್ಷಿಸ್ವರೂಪನಾಗಿ ಉಳಿದು ನೋಡಲು ಸಾಧ್ಯ. 'ಅಹಂಪ್ರತ್ಯಯ' ಅಥವಾ 'ನಾನು' ಎಂದುಕೊಂಡರೆ ಅವಸ್ಥೆಯೊಳಗೆ ಸಿಕ್ಕಿಕೊಳ್ಳುತ್ತೇವೆ.

3. ಇನ್ನು ನಿದ್ರೆ (Sound sleep) ಅಥವಾ ಗಾಢನಿದ್ರೆ ಎಂಬುದನ್ನು ಈಗ ಲಕ್ಷಿಸಿ ಎಚ್ಚರಸ್ವಪ್ನಗಳಿಲ್ಲದ ಬರೀ 'ತಾನೇ' ಉಳಿದಿರುವುದನ್ನು ಗಮನಿಸಬೇಕು. ಎಚ್ಚರದ ಬುದ್ಧಿಯ ದೃಷ್ಟಿಯಿಂದ ನಿದ್ರೆಯ ಬಗ್ಗೆ ಗ್ರಹಿಕೆ ಗಳನ್ನು ಮಾಡಿಕೊಳ್ಳಬಾರದು. ಹೀಗೆ ಗಾಢನಿದ್ರೆಯನ್ನು ಲಕ್ಷಿಸಿದಾಗ ಅಲ್ಲಿಯ ಅನುಭವವು ಹೇಗಿದೆಯೋ ಹಾಗೆಯೇ ಗ್ರಹಿಸಬೇಕು. ಆಗ 'ನಾನು' ಚೆನ್ನಾಗಿ ನಿದ್ರಿಸಿದೆನು 'ಸುಖವಾಗಿ ನಿದ್ರೆಮಾಡಿದೆನು' ಎಂಬುದೂ ಸಹ ಸಾಕ್ಷ್ಯನುಭವವೇ ಆಗಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ನಿದ್ರೆಯ ಅನುಭವವನ್ನು ಬುದ್ಧಿಯಿಂದ ಅರಿಯುವಹಾಗಿಲ್ಲ. ಅಹಂಪ್ರತ್ಯಯ ಮೊದಲುಗೊಂಡು ಬುದ್ಧಿ, ಮನಸ್ಸು ಮುಂತಾದ

ಯಾವುದಕ್ಕೂ ನಿದ್ರೆಯಲ್ಲಿ ಪ್ರವೇಶವಿಲ್ಲ. ಅಲ್ಲಿ ಎಚ್ಚರಸ್ವಪ್ನಗಳಿಲ್ಲದ ಬರೀ ತಾನಾಗೇ ಉಳಿದಿರುತ್ತಾನೆ. ಈ ತನ್ನಲ್ಲಿಯೇ ಇಡೀ ಎಚ್ಚರ ಹಾಗೂ ಇಡೀ ಸ್ವಪ್ನಗಳು ತೋರಿ ಅಡಗುತ್ತವೆ. ಇವುಗಳ ಸೋಂಕು ಯಾವಾಗಲೂ ತನಗೆ ಇರುವುದೇ ಇಲ್ಲ. ಇದನ್ನು ಏಕಾಗ್ರತೆಯಿಂದ ಲಕ್ಷಿಸಿ ನಿಶ್ಚಯಿಸಿ ಈ ಕೆಳಗೆ ತೋರಿಸಿರುವಂತೆ ಯುಕ್ತಿಗಳನ್ನು ಅನುಭವಪೂರ್ವಕವಾಗಿ ಜೋಡಿಸಿ ನಿರ್ಣಯವನ್ನು ತೆಗೆಯಬೇಕು.

## ನಿರ್ಣಯಿಸುವ ಕ್ರಮ

ಎರಡು ಪಾಕ್ಷಿಕವಾದ ಅನುಭವಗಳನ್ನು ತೆಗೆದುಕೊಂಡು ಅನುಭವ ಪೂರ್ವಕವಾಗಿ ಅವುಗಳನ್ನು ಜೋಡಿಸಿ ನೋಡಿ ತನ್ನ ಸ್ವರೂಪದ ಬಗ್ಗೆ ನಿಶ್ಚಿತವಾದ ನಿರ್ಣಯಗಳನ್ನು ತೆಗೆಯಬೇಕು. ಹಾಗೆ ನಿರ್ಣಯಿಸಿದಾಗ ಈಗಲೇ ಕೇವಲ ತಾನಾಗಿ ಉಳಿದಿರುತ್ತಾನೆ. ಆ ಪ್ರಕಾರವು ಹೀಗಿದೆ –

ಕನಸು ಎಂಬುದು ತನ್ನಲ್ಲಿಯೇ ಅಡಗುವ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವು. ಅದರಂತೆ ಎಚ್ಚರ ಎಂಬುದೂ ಸಹ ತನ್ನಲ್ಲಿಯೇ ತೋರಿ ಅಡಗುವ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವು. ಇವೆರಡಕ್ಕೂ ಕೇವಲ ಅನುಭವಸ್ವರೂಪನಾದ ತಾನು ಆಧಾರನು. ಎಚ್ಚರದ ಅವಸ್ಥೆ ತೋರುವಾಗ ಕನಸು ಇರುವುದೇ ಇಲ್ಲ. ಹಾಗೆಯೇ ಕನಸು ತೋರುವಾಗ ಎಚ್ಚರವೂ ಇರುವುದಿಲ್ಲ. ಯಾವುದಾದರೊಂದು ಅವಸ್ಥೆಯು ತೋರಿದರೆ ಇನ್ನೊಂದನ್ನು ಸಂಪೂರ್ಣವಾಗಿ ಒರೆಸಿಹಾಕಿ ತೋರುತ್ತದೆ. ಅನುಭವವೂ ಹೀಗಿರುವುದರಿಂದ ಎರಡೂ ಅವಸ್ಥೆಗಳಿಗೆ ಆಧಾರವಾದ ಕೇವಲ ಅನುಭವಸ್ವರೂಪನಾದ ತಾನು ಈ ಎರಡರಲ್ಲಿ ಯಾವ ಅವಸ್ಥೆಗೂ ಸೇರಿದವನಲ್ಲ. ಈ ಅವಸ್ಥೆಗಳ ಅಂಟು ತನಗೆ ಯಾವಾಗಲೂ ಇಲ್ಲ. ತನ್ನ ಬೆಳಕಿನಲ್ಲಿಯೇ (ಅರಿವಿನ ಸ್ವರೂಪದಲ್ಲಿಯೇ) ಕನಸು ತೋರುತ್ತದೆ. ಹಾಗೆಯೇ ಇಡೀ ಎಚ್ಚರವೂ ಸಹ ತನ್ನ ಬೆಳಕಿನಲ್ಲಿಯೇ ತೋರಿ ಅಡಗುತ್ತದೆ. ಆದ್ದರಿಂದ ಈ 'ತಾನು' 'ಸ್ವಯಂಜ್ಯೋತಿಯು' ಎಂದರೆ ಬರೀ ಅರಿವಿನ ಅನುಭವಸ್ವರೂಪನು. ತಾನಿಲ್ಲದೆ ಈ ಅವಸ್ಥೆಗಳಿರುವವೆಂದು ಹೇಳುವುದು ಹಾಸ್ಯಾಸ್ಪದವು. ಕನಸನ್ನಾಗಲಿ ಎಚ್ಚರವನ್ನಾಗಲಿ ಇದೆ ಎಂದು ಹೇಳುವುಕ್ಕೆ ಆಧಾರವಾದ ತಾನು ಸತ್ತತ್ತ್ವವು. ಈ ಎರಡೂ ಅವಸ್ಥೆಗಳು ತನ್ನಲ್ಲಿ ತೋರಿ ಅಡಗುವ ಹುಸಿತೋರಿಕೆಗಳು. ಎಚ್ಚರವಾಗಲಿ ಕನಸಾಗಲಿ ತನ್ನಲ್ಲಿ ತೋರಿದಾಗ ಆ ಅವಸ್ಥೆಯನ್ನು ತಾನೇ ಪೂರ್ಣವಾಗಿ ವ್ಯಾಪಿಸಿರುತ್ತಾನೆ. ಆದ್ದರಿಂದ ಇಲ್ಲಿಯವರೆಗೆ ತಾನು ಇಲ್ಲಿಂದೀಚೆಗೆ ಅವಸ್ಥೆ ಎಂದು ಬೇರೆ ತೋರಿಸಲು ಸಾಧ್ಯವಿಲ್ಲ. ಈ ಕಾರಣದಿಂದ ತಾನೇತಾನಾಗಿರುವ ಸ್ವರೂಪಕ್ಕೆ ನಿಜವಾಗಲೂ ಎರಡನೆಯದಾಗಿರುವ ಪದಾರ್ಥಗಳು ಈ ಅವಸ್ಥೆಗಳಲ್ಲಿ

ನಿಜವಾಗಿಯೂ ತಾನಾಗಿ ಗುರುತಿಸದಿದ್ದಾಗ ತಾನೇ ಎಚ್ಚರದಂತೆ, ಕನಸಿನಂತೆ ಕಂಡಿದ್ದಾನೆ. ಹೀಗೆ ನೋಡಿದಾಗ ಅವಸ್ಥೆಗಳು ತೋರುತ್ತಿದ್ದರೂ ತೋರದಿದ್ದರೂ ತಾನು ಅದ್ವಿತೀಯನು ಎಂಬ ನಿರ್ಣಯವನ್ನು ತೆಗೆದಾಗ ಜಿಜ್ಞಾಸುವು ಕೇವಲಾತ್ಮಸ್ವರೂಪನಾಗಿಯೇ ಉಳಿದಿರುತ್ತಾನೆ. ಇದೇ ನಿರ್ಣಯಿಸುವ ಕ್ರಮವು.

## ನಿದ್ರೆಯ ಅನುಭವದಿಂದ ನಿರ್ಣಯಿಸುವಿಕೆ

1. ಗಾಢನಿದ್ರೆಯಲ್ಲಿ ಅನುಭವಸ್ವರೂಪನಾದ ತಾನೇ ಉಳಿದಿರುವುದರಿಂದ ತನ್ನ ಸಹಜಸ್ವಭಾವವು ಯಾವಾಗಲೂ, ಎಚ್ಚರಸ್ವಪ್ನಗಳಲ್ಲಿ ಪ್ರಪಂಚದ ಸೋಂಕು ಇರುವಂತೆ ತೋರುವಾಗಲೂ, ನಿಜವಾದ ತಾನು ಈ ತೋರಿಕೆಯ ಸೋಂಕಿಲ್ಲದವನಾಗಿದ್ದೇನೆ ಎಂದು ನಿರ್ಣಯಿಸಬೇಕು.

2. ಇಲ್ಲಿ 'ನಿದ್ರೆ' ಎಂಬ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವನ್ನೂ ಹಾಗೂ 'ಎಚ್ಚರ' ಎಂಬ ಒಂದು ಪಾಕ್ಷಿಕವಾದ ಸಾಕ್ಷ್ಯನುಭವವನ್ನೂ ತೆಗೆದುಕೊಂಡು ಎರಡನ್ನೂ ಯುಕ್ತಿಯಿಂದ ಹೊಂದಿಸಿನೋಡಲು ಅನುವು ಮಾಡಿಕೊಟ್ಟಿದೆ.

3. ಇಲ್ಲಿ ಎರಡನ್ನೂ ಹೊಂದಿಸುವುದು ಹೇಗೆಂದರೆ- ಎಚ್ಚರದಲ್ಲಿ 'ನಾನು ಇಂಥವನು' ಎಂಬ ಅಹಂಪ್ರತ್ಯಯವೇ ತನ್ನ ನಿಜವಾದ ಸ್ವಭಾವವು ಎಂದು ಅನಿಸುತ್ತದೆ. ಆದ್ದರಿಂದ ನಾನು ದೇಹೇಂದ್ರಿಯಗಳುಳ್ಳವನು, ಮನಸ್ಸುಬುದ್ಧಿಗಳುಳ್ಳವನು, ಸುಖದುಃಖಗಳನ್ನು ಅನುಭವಿಸುವವನು ಎಂದೇ ತನ್ನನ್ನು ಪ್ರತಿಯೊಬ್ಬನೂ ತಿಳಿದಿರುತ್ತಾನೆ. ಇದು ಎಚ್ಚರದ ಸಮಾಚಾರವು. ಹೀಗೆ ಶರೀರೇಂದ್ರಿಯಗಳಿಂದೊಡಗೂಡಿ ಸುಖದುಃಖಗಳನ್ನು ಅನುಭವಿಸುತ್ತಿರುವ ಸಂಸಾರಿಯಾಗಿರುವುದೇ ತನ್ನ ಸ್ವಭಾವವಾಗಿದ್ದರೆ ಕನಸಿನಲ್ಲಿ ಈ ಎಚ್ಚರದ ಶರೀರ ಅಥವಾ ಸುಖದುಃಖಗಳು ಏಕೆ ಬರುವುದಿಲ್ಲ? ಅಲ್ಲಿ ಬೇರೆ ಪ್ರಕಾರದ ಶರೀರ ಸುಖದುಃಖಗಳೇ ನಮಗೆ ಇರುವಂತೆ ತೋರುವುದು ಸಾರ್ವತ್ರಿಕ ಅನುಭವವು. ಇನ್ನು ಈ ಎರಡರುಗಳಲ್ಲಿನ ಯಾವುದೇ ಬಗೆಯ ಶರೀರಾದಿಗಳೂ ಸುಖದುಃಖಾದಿಗಳೂ ಸುಷುಪ್ತಿಯಲ್ಲಿ ತನಗೆ ಏಕೆ ಇರುವುದಿಲ್ಲ? ಎಂಬುದನ್ನು ವಿಚಾರಿಸಿದಾಗ ತನ್ನ ಸ್ವಭಾವವು ಸುಖದುಃಖಾದಿಗಳನ್ನು ಅನುಭವಿಸುವ ಸಂಸಾರಿಯಾಗಿರುವುದಲ್ಲವೇ ಅಲ್ಲ. ನಿತ್ಯನೂ, ನಿಷ್ಪ್ರಪಂಚನೂ, ಅನಂತಾನಾದಿಯೂ, ಸುಖದುಃಖಾದಿಗಳ ಸೋಂಕಿಲ್ಲದವನೂ ಆಗಿರುವೆನೆಂಬ ನಿರ್ಣಯವು ಹೊರಡುತ್ತದೆ. ಈ ನಿರ್ಣಯಕ್ಕೆ ಬಂದಾಗ ಜಿಜ್ಞಾಸುವು ಕೇವಲಾತ್ಮನಾಗಿ ನಿಂತಿರುತ್ತಾನೆ. ಹೀಗೆ ಅನುಭವಪೂರ್ವಕಯುಕ್ತಿಗಳನ್ನು ಉಪಯೋಗಿಸಿ ನಿರ್ಣಯವನ್ನು ತೆಗೆಯುವ ಕ್ರಮಕ್ಕೆ **ಮನನ** ಎನ್ನುತ್ತಾರೆ.

## ಶ್ರೌತ ತರ್ಕ

ಆಚಾರ್ಯರು "**ಮಂತವ್ಯಃ ತರ್ಕತಃ**" (ಬೃ. 2-4-5), ತರ್ಕದಿಂದ ಮನನ ಮಾಡಬೇಕು ಎಂದಿದ್ದಾರೆ. ಇಲ್ಲಿ ಕುತರ್ಕಗಳಾಗಲಿ ಪ್ರಮಾಣತರ್ಕಗಳಾಗಲಿ ಉಪಯೋಗಕ್ಕೆ ಬರುವುದಿಲ್ಲ, ಶ್ರೌತತರ್ಕಗಳನ್ನೇ ಉಪಯೋಗಿಸಬೇಕೆಂದು ಆಚಾರ್ಯರು ಸೂತ್ರಭಾಷ್ಯದಲ್ಲಿ ಅಪ್ಪಣೆ ಕೊಡಿಸಿದ್ದಾರೆ. "**ನಾನೇನ ಮಿಷೇಣ ಶುಷ್ಕತರ್ಕಸ್ಯ ಅತ್ರ ಆತ್ಮಲಾಭಃ ಸಂಭವತಿ। ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ ಅನುಭವಾಙ್ಗತ್ವೇನ ಆಶ್ರೀಯತೇ।**" (ಸೂ.ಭಾ.2-1-6 ಭಾ.ಭಾ. 418). ಮನನಕ್ಕೆ ತರ್ಕವು ಬೇಕೆಂಬ ನೆಪದಿಂದ ಇಲ್ಲಿ ಶುಷ್ಕತರ್ಕಗಳು ಕೆಲಸಕ್ಕೆ ಬರುವುದಿಲ್ಲ. ಶ್ರುತಿಗಳಲ್ಲಿ ಉಪದೇಶಿಸಿದ ತರ್ಕಗಳನ್ನೇ ಅನುಭವಾಂಗವಾಗಿ ತೆಗೆದುಕೊಳ್ಳಬೇಕು ಎಂಬುದು ಈ ವಾಕ್ಯದ ತಾತ್ಪರ್ಯವು. ಇನ್ನು ಶ್ರೌತಕ್ಕೆ ವಿರೋಧವಲ್ಲದ ಪ್ರಮಾಣತರ್ಕಗಳನ್ನು ತೆಗೆದುಕೊಳ್ಳಬಹುದೆಂದು ಶ್ರೀಶಂಕರರು ಸೂತ್ರಭಾಷ್ಯದಲ್ಲಿ ಹೇಳಿದ್ದಾರೆ. ಆದರೆ ಮುಖ್ಯವಾಗಿ ಶ್ರೌತ ತರ್ಕವೇ ಮನನಕ್ಕೆ ಬೇಕಾಗಿರುತ್ತದೆ. ಶ್ರೌತತರ್ಕದ ಸ್ವರೂಪವೇನೆಂದರೆ-

ಕಾಲದೇಶಕಾರ್ಯಕಾರಣಭಾವ, ಇಂದ್ರಿಯಗಳು, ಮನಸ್ಸು, ಬುದ್ಧಿ, ಕೊನೆಗೆ ಅಹಂಪ್ರತ್ಯಯವನ್ನೂ ಬೆಳಗುವ ಸಾಕ್ಷಿಸ್ವರೂಪವನ್ನೇ ಹಿಡಿದು ಸಾಕ್ಷ್ಯನುಭವಗಳನ್ನೇ ತೆಗೆದುಕೊಂಡು ಆತ್ಮನ ನಿಜಸ್ವರೂಪವನ್ನು ನಿಶ್ಚೈಸುವ ಕ್ರಮವೇ ಶ್ರೌತತರ್ಕದ ಸ್ವರೂಪವು. ಈವರೆಗೆ ಎಚ್ಚರಕನಸು ನಿದ್ರೆಗಳ ಸಾಕ್ಷ್ಯನುಭವವನ್ನವಲಂಬಿಸಿ ಆತ್ಮಸ್ವರೂಪನಾದ ತಾನು ನಿತ್ಯನು, ನಿಷ್ಪ್ರಪಂಚನು ಎಂದು ನಿರ್ಣಯಿಸುವ ಪ್ರಕಾರವೇ ಶ್ರೌತತರ್ಕವು. ಈ ರೀತಿಯ ಮನನದಿಂದ ಜಿಜ್ಞಾಸುವು ಮನನಸಮಕಾಲದಲ್ಲಿಯೇ ಕೇವಲಾತ್ಮ ಸ್ವರೂಪನಾಗಿ ನೆಲೆನಿಂತಿರುತ್ತಾನೆ.

## ವಿವಿಧ ಪ್ರಕ್ರಿಯೆಗಳು

ಶ್ರುತಿಗಳಲ್ಲಿ ಜಿಜ್ಞಾಸುವು ಮನನಮಾಡುವುದಕ್ಕೆ ವಿವಿಧ ಪ್ರಕ್ರಿಯೆ (ರೀತಿ ಖಥಿರಿಜಟಥ) ಗಳನ್ನು ಹೇಳಿದೆ. ಈವರೆಗೆ ತೋರಿಸಿದ ಅವಸ್ಥಾತ್ರಯವೇ ಅಲ್ಲದೆ 1. ಸಾಮಾನ್ಯವಿಶೇಷ ಪ್ರಕ್ರಿಯೆ, 2. ಕಾರ್ಯಕಾರಣ ಅನನ್ಯತ್ವಪ್ರಕ್ರಿಯೆ, 3. ಅನ್ವಯವ್ಯತಿರೀಕ ಪ್ರಕ್ರಿಯೆ ಮುಂತಾಗಿ ವಿವಿಧ ಪ್ರಕ್ರಿಯೆಗಳನ್ನು ಬೋಧಸೌಕರ್ಯಕ್ಕಾಗಿ ವೇದಾಂತದಲ್ಲಿ ಉಪಯೋಗಿಸಿರುತ್ತಾರೆ. ಅನುಭವಿಗಳಾದ ಬ್ರಹ್ಮನಿಷ್ಠರಿಂದ ಇವುಗಳನ್ನು ತಿಳಿದುಕೊಂಡು ಜಿಜ್ಞಾಸುಗಳು ಸ್ವರೂಪದಲ್ಲಿ ನೆಲೆನಿಲ್ಲಲು ಮನನಮಾಡಬೇಕು. (ಇಲ್ಲ ಯೋಚಿಸಿಕೊಳ್ಳಬೇಕು.)

## ಒಂದೇ ಪ್ರಕ್ರಿಯೆ

ಈವರೆಗೆ ಮನನಕ್ಕಾಗಿ ವಿವಿಧ ಪ್ರಕ್ರಿಯೆಗಳನ್ನು ವೇದಾಂತದಲ್ಲಿ ಹೇಳಿರುವುದಾಗಿ ತಿಳಿಸಿದೆಯಷ್ಟೇ? ಆದರೆ ಈ ಎಲ್ಲ ಬಗೆಯ ಪ್ರಕ್ರಿಯೆಗಳೂ ಒಂದೇ ಒಂದು ಪ್ರಕ್ರಿಯೆಯ ಒಳಭೇದಗಳಾಗಿರುತ್ತವೆ. ಅದು ಯಾವುದೆಂದರೆ ''**ಅಧ್ಯಾರೋಪ- ಅಪವಾದ**'' ಎಂಬ ಒಂದೇ ಪ್ರಕ್ರಿಯೆ. ''**ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ**'' (ಗೀ.ಭಾ. 13-13) ನಿಷ್ಪ್ರಪಂಚನಾದ ಆತ್ಮನನ್ನು ಅಧ್ಯಾರೋಪಗಳನ್ನು ಅಪವಾದ ಮಾಡುವ ಮೂಲಕ ಎಂದರೆ ಅಲ್ಲಗಳೆಯುವ ಮೂಲಕವೇ ತಿಳಿಸಿಕೊಡಲಾಗುತ್ತದೆ ಎಂಬುದೇ ಇದರ ಅರ್ಥವು. ಇದೇ '**ವೇದಾಂತ ಸಂಪ್ರದಾಯ**' ಎಂಬುದನ್ನು ಆಚಾರ್ಯರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಆತ್ಮಸ್ವರೂಪವು ನಿತ್ಯ-ನಿಷ್ಪ್ರಪಂಚ-ನಿರ್ಧರ್ಮಕ-ನಿರ್ಗುಣ- ಏಕಮೇವ -ಅದ್ವಿತೀಯವಾಗಿಯೇ ಇದೆ. ಹೀಗಿದ್ದರೂ ವ್ಯಾವಹಾರಿಕವಾಗಿ ನಮ್ಮ ಬುದ್ಧಿಗೆ ಸ್ವರೂಪದ ಬಗ್ಗೆ ಸರಿಯಾದ ಜ್ಞಾನವಿಲ್ಲದಿರುವುದರಿಂದ ಅದೇ ಆತ್ಮ ಸ್ವರೂಪವೇ ಅವಸ್ಥೆಗಳಂತೆ, ಪ್ರಪಂಚದಂತೆ ತೋರತೊಡಗುತ್ತದೆ. ಹೀಗೆ ಅವಿದ್ಯೆಯಿಂದ ಇದ್ದಂತೆ ತೋರುವ ಹುಸಿತೋರಿಕೆಗಳನ್ನು ವೇದಾಂತಶಾಸ್ತ್ರವು ಬೋಧಸೌಕರ್ಯಕ್ಕಾಗಿ ಮೊದಲು ಅವು ಇದ್ದು ಬಿಟ್ಟಿವೆ ಎಂದು ಒಪ್ಪಿಕೊಂಡು ಬೋಧವನ್ನು ಆರಂಭಿಸುತ್ತವೆ. ಇದನ್ನೇ '**ಅಧ್ಯಾರೋಪ**' ಎನ್ನುತ್ತಾರೆ. ಈ ಹುಸಿತೋರಿಕೆಗಳನ್ನಲ್ಲಗಳೆದು ಪರಮಾರ್ಥ ತತ್ತ್ವವನ್ನು ಬೋಧಿಸಿದಾಗ ಅಧ್ಯಾರೋಪದಲ್ಲಿ ಒಪ್ಪಿದ ಯಾವುದೂ ಯಾವಾಗಲೂ ಇರಲೇ ಇಲ್ಲವೆಂಬುದು ಜಿಜ್ಞಾಸುವಿನ ಅನುಭವಕ್ಕೇ ಗೋಚರವಾಗುವುದು. ಇದನ್ನೇ '**ಅಪವಾದ**' ಎನ್ನುತ್ತಾರೆ. ಇದೊಂದೇ ಪ್ರಕ್ರಿಯೆಯು ವೇದಾಂತದಲ್ಲಿ ಹಾಸುಹೊಕ್ಕಾಗಿ ಎಲ್ಲ ಪ್ರಕ್ರಿಯೆಗಳಲ್ಲಿಯೂ ಇರುತ್ತದೆ. ಆದ್ದರಿಂದಲೇ ಕೇವಲಾತ್ಮಸ್ವರೂಪವನ್ನೇ ತೋರಿಸುವಾಗ ಈ ಮೊದಲು ತೋರಿಸಿದ್ದನ್ನು '**ಇದಲ್ಲ - ಇದಲ್ಲ**' ಎಂದೇ ಹೇಳತೊಡಗುತ್ತದೆ. ಈ ಮಾತನ್ನು ಆಚಾರ್ಯರು ಹೀಗೆ ಹೇಳಿದ್ದಾರೆ. ''**ಯದಾ ಪುನಃ ಸ್ವರೂಪಮೇವ ನಿರ್ದಿದಿಕ್ಷಿತಂ ಭವತಿ ನಿರಸ್ತ ಸರ್ವೋಪಾಧಿ ವಿಶೇಷವ್ ತದಾ ನ ಶಕ್ಯತೇ ಕೇನಚಿದಪಿ ಪ್ರಕಾರೇಣ ನಿರ್ದೇಷ್ಟುಮ್। ತದಾ ಅಯಮೇವ ಅಭ್ಯುಪಾಯೋ ಯದುತ ಪ್ರಾಪ್ತನಿರ್ದೇಶ ಪ್ರತಿಷೇಧದ್ವಾರೇಣ 'ನೇತಿ ನೇತಿ' ಇತಿ ನಿರ್ದೇಶಃ**'' (ಬೃ. 2-3-6 ಭಾ.ಭಾ. 348). ಯಾವಾಗ ಸ್ವರೂಪವನ್ನೇ ತೋರಿಸಿಕೊಡಬೇಕೋ ಆಗ ಅದನ್ನು ಯಾವ ಪ್ರಕಾರದಿಂದಲೂ ತೋರಿಸಲಾಗುವುದಿಲ್ಲ. ಆಗ ಉಳಿದಿರುವ ಉಪಾಯವೇ ನೆಂದರೆ ಈ ಮೊದಲು

ಯಾವುದನ್ನು ಉಪಾಯವಾಗಿ ಒಪ್ಪಿಕೊಂಡಿತ್ತೋ ಅದನ್ನು 'ಇದಲ್ಲ - ಇದಲ್ಲ' ಎಂದು ಅಲ್ಲಗಳೆಯುವದೊಂದೇ ಉಪಾಯವು ಎಂಬುದು ಇದರ ಅರ್ಥವು. ಇದೇ ಅಧ್ಯಾರೋಪಾಪವಾದ ಪ್ರಕ್ರಿಯೆಯ ಸ್ವರೂಪವು.

## ಇಲ್ಲಿರುವ ರಹಸ್ಯ

ಆತ್ಮವಿಜ್ಞಾನವೆಂದರೆ ತಾನೇ ಆತ್ಮನಾಗಿ ಉಳಿಯುವದು - ಎಂಬ ಅನುಭವ. ತನ್ನಿಂದ ತಿಳಿಯಲ್ಪಡುವ ಅನ್ಯವಸ್ತುವು ಆತ್ಮನಲ್ಲ, ಆತ್ಮನೆಂದರೆ ತಾನೇ. ಹೀಗಿರುವುದರಿಂದ ತನ್ನ ನಿಜಸ್ವರೂಪವನ್ನರಿಯದಾಗ ತನ್ನಲ್ಲಿ ಇರುವಂತೆ ತೋರುವ (ಅವಿದ್ಯಾಕಲ್ಪಿತಗಳಾದ ಹುಸಿತೋರಿಕೆ) ದೃಶ್ಯಗಳಲ್ಲಿ ಉದಾಹರಣೆಗೆ -ಶರೀರ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಲ್ಲಿ 'ನಾನು' (ಅಥವಾ ನನ್ನದು) ಎಂಬ ತಪ್ಪುತಿಳಿವಳಿಕೆಯನ್ನು ಮಾಡಿಕೊಳ್ಳುತ್ತಾನೆ. ಆಗ ಆತ್ಮನಲ್ಲದವುಗಳು ನಿಜವಾಗಿರುವಂತೆ ಕಾಣುತ್ತವೆ. ಉದಾಹರಣೆಗೆ, ಪ್ರಪಂಚ, ಅವಸ್ಥೆ, ಮುಂತಾದವುಗಳು ನಿಜವಾಗಿರುವಂತೆ ಕಾಣುತ್ತವೆ. ಆದರೆ ಯಾವಾಗ ನಿಜವಾದ 'ತಾನು' ಅಂದರೆ ಅಹಂ ಪ್ರತ್ಯಯದವರೆಗಿನ ಯಾವದೂ ಅಲ್ಲ ಎಂದು ಅಲ್ಲಗಳೆದಾಗ ಜಿಜ್ಞಾಸುವು ಬರೀ ತಾನಾಗಿ ಉಳಿದುಕೊಳ್ಳುತ್ತಾನೆ. ಆಗ ಅವನ ಅಂತಃಕರಣವು ಆ ನಿಜಸ್ವರೂಪದಂತೆಯೇ ಭಾಸವಾಗತೊಡಗುತ್ತದೆ. ಇದನ್ನೇ ಆತ್ಮಪ್ರತ್ಯಯ, ಆತ್ಮಜ್ಞಾನ ಎನ್ನುತ್ತಾರೆ. ಆದ್ದರಿಂದ ಆತ್ಮನನ್ನು ವಿಷಯೀಕರಿಸಿ ಅರಿಯುವದು ಎಂಬರ್ಥದಲ್ಲಿ ಆತ್ಮಜ್ಞಾನ ಎಂಬ ಶಬ್ದವು ಬಂದಿಲ್ಲ, ಅನಾತ್ಮದಲ್ಲಿಯ ಆತ್ಮಬುದ್ಧಿಯನ್ನು ಬಿಟ್ಟಾಗ ತಾನೇ ಆತ್ಮನಾಗಿ ಉಳಿದಿರುತ್ತಾನೆ. ಇದೇ ಆತ್ಮಜ್ಞಾನದ ರಹಸ್ಯವು. ಈ ರಹಸ್ಯವನ್ನರಿಯುವುದಕ್ಕಾಗಿಯೇ ಅನುಭವಿಗಳಾದ ಗುರುಗಳ ಬೋಧನ ಸಹಾಯದಿಂದ ಮನನಮಾಡುವ ಪ್ರಕ್ರಿಯೆಗಳನ್ನು ತಿಳಿದುಕೊಂಡು ಜಿಜ್ಞಾಸುವು ತನ್ನಲ್ಲಿ ತಾನು ಅನುಭವ ಪೂರ್ವಕವಾಗಿ ''ಮನನ'' ವೆಂಬ ಸಾಧನೆಯನ್ನವಲಂಬಿಸಿ ಕೇವಲಾತ್ಮ ಸ್ವರೂಪನಾಗಿರುವುದನ್ನು ಲಕ್ಷಿಸಿ ಕೃತಕೃತ್ಯನಾಗಬೇಕು. ಇದೇ ''ಮನನ'' ಎಂಬ ಸಾಕ್ಷಾತ್ ಸಾಧನೆಯ ಸ್ವರೂಪವು. ಕೇವಲ ಶ್ರವಣಮಾತ್ರಕ್ಕೇ ಸ್ವರೂಪನಿಷ್ಠೆ ಬಾರದಿದ್ದಲ್ಲಿ ಶ್ರವಣವಾದ ಬಳಿಕ ಈವರೆಗೆ ತಿಳಿಸಿರುವ ಮನನವೆಂಬ ಸಾಧನೆಯನ್ನು ಉಪಯೋಗಿಸಿ ಸ್ವರೂಪನಿಷ್ಠನಾಗಬೇಕು.

## ನಿದಿಧ್ಯಾಸನದ ಅವಶ್ಯಕತೆ

ಈವರೆಗೆ ಸಾಕ್ಷಾತ್ ಸಾಧನೆಗಳಾದ ಶ್ರವಣ, ಮನನಗಳನ್ನು ಕುರಿತು ತಿಳಿಸಲಾಗಿದೆ. ಹೀಗೆ ಮನನದಿಂದಲೂ ಸ್ವರೂಪನಿಷ್ಠೆಯು ಬಾರದಿದ್ದಲ್ಲಿ 'ನಿದಿಧ್ಯಾಸನ' ಅಥವಾ

'ಅಧ್ಯಾತ್ಮಯೋಗ' ಎಂಬ ಸಾಧನೆಯನ್ನು ಅವಲಂಬಿಸಬೇಕು. 'ಸ್ವರೂಪನಿಷ್ಠೆ' ಎಂದರೆ ನಾನೆಂಬ ಅನಿಸುವಿಕೆ ಮೊದಲುಗೊಂಡು ಸಮಗ್ರ ಪ್ರಪಂಚವು ಅಂತಃಕರಣ, ಇಂದ್ರಿಯಗಳ ದೃಷ್ಟಿಯಿಂದ ತೋರುತ್ತಿದ್ದರೂ ಅದನ್ನೆಲ್ಲವನ್ನೂ ಆತ್ಮವ್ಯಾಪ್ತವಾಗಿಕಂಡು ದೃಶ್ಯವನ್ನೆಲ್ಲಾ ಬಾಧಿಸಿತೋರಿದರೂ ನಿಜವಾಗಿಲ್ಲವೆಂದು ನಿಶ್ಚಯಿಸಿ ಗಾಢನಿದ್ರೆಯಲ್ಲಿರು'ಂತೆ ಈಗಲೂ ನಿರ್ವಿಶೇಷ ಚಿನ್ಮಾತ್ರನಾಗಿ ನಿಂತಿರುವುದನ್ನು ಸಹಜವಾಗಿ ಅಂತಃಕರಣವು ಅಪ್ರಯತ್ನವಾಗಿ ತೋರುತ್ತಿರಬೇಕು. ಇದನ್ನೇ ''ಜ್ಞಾನನಿಷ್ಠೆ – ''ಸ್ವರೂಪನಿಷ್ಠೆ'' ಎನ್ನುತ್ತಾರೆ. ಈ ನಿಲುಮೆ ಮನನದಿಂದ ಬಾರದಿದ್ದಲ್ಲಿ ನಿದಿಧ್ಯಾಸನವನ್ನು ಉಪಯೋಗಿಸಬೇಕು.

ಈ ನಿದಿಧ್ಯಾಸನದ ಸ್ವರೂಪವನ್ನು ''ಅಧ್ಯಾತ್ಮಯೋಗ'' ಎಂಬ ಹೆಸರಿನಿಂದ ಈ ಮುಂದೆ ತೋರಿಸಿ ಕೊಡಲಾಗುತ್ತದೆ.

* * * * *

# ಅಧ್ಯಾತ್ಮಯೋಗ ಅಥವಾ ನಿದಿಧ್ಯಾಸನ

## ವಿಚಾರಿಸುವ ಅಂಶಗಳು

ಏಕಾಂತದಲ್ಲಿ ಕುಳಿತು ಈ ಕೆಳಗಿನ ಸಂಗತಿಗಳನ್ನು ನಿಮ್ಮ ಅನುಭವಕ್ಕೆ ಹೊಂದಿಸಿಕೊಂಡು ಹಾಗಿದೆಯೇ ಇಲ್ಲವೇ? ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಿರಿ. ಸಂಶಯ ಬಂದಲ್ಲಿ ಬಲ್ಲವರನ್ನು ಕೇಳಿ ತಿಳಿಯಲು ಯತ್ನಿಸಿರಿ.

1. ನಮಗೆ ಹೊರಗಿನ ವಿಷಯಗಳು (ಉ್ಡಿಟ್ಝಿಜ್ಝ ಟಚ್ಜಿಟ್ಝಿಠಿಠ) ಇವೆ ಎಂಬುದಕ್ಕೆ ನಮ್ಮ ಇಂದ್ರಿಯಗಳೇ ಪ್ರಮಾಣಗಳಾಗಿವೆ. ಇಂದ್ರಿಯಗಳಿಗೆ ವೇದ್ಯವಾಗದ ವಿಷಯಗಳು ಹೊರಗೆ ಇವೆ ಎಂಬ ಮಾತು ಅರ್ಥವಿಲ್ಲದ್ದು.

2. ಇಂದ್ರಿಯಗಳು ಒಳಗಿವೆ. ವಿಷಯಗಳು ಹೊರಗಿವೆ. ಇಂದ್ರಿಯಗಳು ವಿಷಯಗಳನ್ನು ಗ್ರಹಿಸುವಾಗ ಆಯಾ ವಿಷಯಗಳನ್ನು ವ್ಯಾಪಿಸಿ ದೇಶಕಾಲಕಾರ್ಯ ಕಾರಣಭಾವಗಳಿಂದೊಡಗೂಡಿ ಜ್ಞಾನಮಾಡಿಕೊಳ್ಳುತ್ತವೆ. ಏಕೆಂದರೆ ವಿಷಯಗಳೆಲ್ಲಾ ಈ ಸಂಬಂಧದಿಂದಲೇ ಇರುವವಾದ್ದರಿಂದ ಹಾಗೆಯೇ ತಿಳಿಯಬೇಕಾಗುವುದು. ಆದರೆ ವಿಷಯಗಳು ಮಾತ್ರ ಇಂದ್ರಿಯಗಳನ್ನು ಎಂದೂ ತಿಳಿಯಲಾರವು.

3. ಮನಸ್ಸು ಇಂದ್ರಿಯಗಳೆಲ್ಲವನ್ನೂ ಒಟ್ಟಾರೆ ತಿಳಿಯಬಲ್ಲದು. ಇಂದ್ರಿಯಗಳಿರುವುದಕ್ಕೆ ಮನಸ್ಸೇ ಪ್ರಮಾಣವು. ಮನಸ್ಸು ಒಳಗಿದೆ. ಇಂದ್ರಿಯಗಳು ಹೊರಗಿವೆ.

4. ಮನಸ್ಸು ಇಂದ್ರಿಯಗಳನ್ನು ವ್ಯಾಪಿಸುತ್ತದೆ. ಇಂದ್ರಿಯಗಳು ಮನಸ್ಸನ್ನು ವ್ಯಾಪಿಸಲಾರವು. ಮನಸ್ಸು ಆಲೋಚಿಸಬಲ್ಲದು, ಇಂದ್ರಿಯಗಳು ಈ ಕೆಲಸ ಮಾಡಲಾರವು.

5. ಮನಸ್ಸನ್ನು ಬಿಟ್ಟರೆ ಇಂದ್ರಿಯಗಳಿಗೆ ಅಸ್ತಿತ್ವವೇ ಇಲ್ಲ. ಮನಸ್ಸೇ ಗೋಳಕಗಳಲ್ಲಿ ಬಂದಾಗ ಇಂದ್ರಿಯವೆನಿಸುತ್ತದೆ. ಆದ್ದರಿಂದ ವಿಷಯ ಹಾಗೂ ಇಂದ್ರಿಯಗಳಿಗೆ ಮನಸ್ಸೇ ''ಆತ್ಮವು''.

6. ನಿಶ್ಚಯಮಾಡುವ ಬುದ್ಧಿಯನ್ನುಳಿದು ಮನಸ್ಸೆಂಬುದಿಲ್ಲ. ಬುದ್ಧಿ ಒಳಗಿದೆ. ಮನಸ್ಸು ಹೊರಗಿದೆ. ಬುದ್ಧಿಯು ನಿಶ್ಚಯಿಸಬಲ್ಲದು. ಮನಸ್ಸಿಗೆ ಈ ಶಕ್ತಿ ಇಲ್ಲ. ಬುದ್ಧಿಯು ತನ್ನ ಮುಂದಿರುವ ಮೂರನ್ನೂ ಏಕಕಾಲಕ್ಕೆ ವಿಷಯೀಕರಿಸುತ್ತದೆ. ಆದ್ದರಿಂದ ಮನಸ್ಸು ಮೊದಲಾದ ಮೂರಕ್ಕೂ ಬುದ್ಧಿಯೇ ''ಆತ್ಮ''.

7. ''ನಾನು'' ಎಂಬುದಿಲ್ಲದೆ ಬುದ್ಧಿಗೆ ಅಸ್ತಿತ್ವವಿಲ್ಲ. ನಾನೇ ಬುದ್ಧಿಯಾಗಿ ನಿಶ್ಚಯಿಸುವೆನು. ಮನಸ್ಸಾಗಿ ಆಲೋಚಿಸುವೆನು, ಇಂದ್ರಿಯಗಳಾಗಿ ನೋಡುವೆನು.

8. ''ನಾನು'' ಭೋಕ್ತೃವು. ಬುದ್ಧಿಗೆ ಭೋಗಮಾಡಲುಬಾರದು. ಬುದ್ಧ್ಯಾದಿ ಮುಂದಿನ ಎಲ್ಲವುಗಳನ್ನೂ ''ನಾನು'' ವಿಷಯೀಕರಿಸುತ್ತೇನೆ. ಇವು ಯಾವುದರಿಂದಲೂ ''ನಾನು'' ಎಂಬುದನ್ನು ವಿಷಯೀಕರಿಸಲಾಗುವುದಿಲ್ಲ.

9. ಪ್ರಮಾಣವ್ಯವಹಾರವೆಲ್ಲಕ್ಕೂ ''ನಾನು'' ಎಂಬುದೇ (ಪ್ರಮಾತೃವೇ) ಆಧಾರ. ಪ್ರಮಾಣಗಳಿಂದ 'ನಾನು' ಸಿದ್ಧವಾಗಿಲ್ಲ. ''ನಾನು''ವಿನಿಂದಲೇ ಪ್ರಮಾಣಗಳೆಲ್ಲಾ ಸಿದ್ಧವಾಗಿವೆ. ಎಂತಲೇ ''ನಾನಿದೇನೆ'' ಎಂಬ ಬಗ್ಗೆ ಯಾರಿಗೂ ಸಂಶಯವು ಎಂದೂ ಬರುವದೇ ಇಲ್ಲ. ಅಂತೂ ಸರ್ವವ್ಯವಹಾರಕ್ಕೂ ಈ ''ನಾನು'' ಎಂಬುದೇ ಆಧಾರ – ''ಆತ್ಮ''ವಾಗಿದೆ. ಯಾವುದೇ ''ಇದೆ'' ಎನ್ನಬೇಕಾದರೆ ಮೊದಲು ''ನಾನು'' ಇದ್ದೇ ತೀರಬೇಕು. ಇದಿಲ್ಲದೆ ಇನ್ನೊಂದೆಂಬುದಿರಲೇ ಆರದು.

10. ನಮಗೆ ಎಚ್ಚರದಲ್ಲಿ ''ನಾನು'' ಹಾಗೂ ಇದಕ್ಕೆ ಹೊಂದಿಕೊಂಡಿರುವ ಸಮಗ್ರ ಪ್ರಪಂಚವೆಲ್ಲವೂ (1) ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ, ಮೊದಲಾದ **ಆಧ್ಯಾತ್ಮಿಕಪ್ರಪಂಚ** (2) ಆಕಾಶ, ವಾಯು, ಅಗ್ನಿ, ಜಲ, ಭೂಮಿ, ಅನೇಕ ಜನಗಳು ವಿಷಯಗಳು ಮೊದಲಾದ **ಆಧಿಭೌತಿಕಪ್ರಪಂಚ** (3) ಸೂರ್ಯ, ಚಂದ್ರ, ಗ್ರಹ,

ನಕ್ಷತ್ರಲೋಕ ಲೋಕಾಂತರಗಳಾದ **ಆಧಿದೈವಿಕಪ್ರಪಂಚ,** (4) ನಿನ್ನೆ ಮೊನ್ನೆ ಇಂದು ನಾಳೆ ವರ್ಷ ಯುಗ ಎಂಬ ಅನಂತ **ಕಾಲವೂ** (Time) (5) ಮೇಲೆ ಕೆಳಗೆ ಹಿಂದೆ ಮುಂದೆ ಅಲ್ಲಿ ಇಲ್ಲಿ ಎಂಬ ಅನಂತವಾದ **ದೇಶವೂ** (Space) (6) ಇವುಗಳಿಗನುಸರಿಸಿದ ಕಾರ್ಯಕಾರಣ ಭಾವಗಳೂ ಕಾಣುತ್ತಿರುತ್ತವೆ.

11. ಕನಸ್ಸಿನಲ್ಲಿಯೂ ಮೇಲೆ ವರ್ಣಿಸಿದ ರೀತಿಯಲ್ಲಿ ಅಲ್ಲಿದ್ದ ''ನಾನು'' ವನ್ನನುಸರಿಸಿ ಎಚ್ಚರದಂತೆಯೇ ಸರ್ವವೂ ತೋರಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಎಂದರೆ ಎಚ್ಚರಕನಸುಗಳಲ್ಲಿ ಒಂದು ತೋರುವಾಗ ಇನ್ನೊಂದು ತೋರಲಾರದು. ಇಷ್ಟೇ ಅಲ್ಲ ಎಲ್ಲಿಯೂ ಇರಲೇ ಆರದು.

12. ಇನ್ನು ಗಾಢನಿದ್ರೆಯಲ್ಲಿ ಈ 'ನಾನು' ಮೊದಲುಗೊಂಡು ಇದರ ಈ ಯಾವಪರಿವಾರವೂ ಇರುವುದಿಲ್ಲ ಎಂಬುದು ಸರ್ವರಿಗೂ ಅನುಭವಗಮ್ಯವಾದದ್ದು.

13. ಈ ಅನುಭವವನ್ನು ನಾನು ಈಗಿನ ಎಚ್ಚರದ ನಾನಿನಿಂದ ಇದರ ಸಾಧನೆಗಳಾದ ಬುದ್ಧಿ ಮನಸ್ಸು ಮಾತುಗಳ ಮುಖಾಂತರ ಹೊರಪಡಿಸುವೆವಾದರೂ ಈ ಅನುಭವವು ಮಾತ್ರ ಈ ನಾನಿನ ಕ್ಷೇತ್ರಕ್ಕೆ ಸೇರಿದ್ದಲ್ಲ. ಏಕೆಂದರೆ ''ನಾನು'' ಎಂಬುದಿದ್ದಿಲ್ಲ ಎಂಬುದೇ ಆ ಅನುಭವವಾಗಿದೆ. ಆದ್ದರಿಂದ ಇದು ಈಗಿನ ನಾನಿಗೆ ಸೇರಿದ್ದಲ್ಲವೆಂಬುದು ಸ್ಪಷ್ಟವೇ ಇದೆ.

14. ಎಚ್ಚರಕನಸುಗಳಲ್ಲಿ ಒಂದೊಂದು ಬಗೆಯ ''ನಾನು'' ಇರುವುದನ್ನೂ ನಿದ್ರೆಯಲ್ಲಿ ಅದಾವುದೂ ಇಲ್ಲದ್ದನ್ನೂ ಹೇಳುವ ಈ ಅನುಭವವು ಇಂದ್ರಿಯ ಬುದ್ಧಿ ಮನಸ್ಸು ನಾನು ಮುಂತಾದವುಗಳಲ್ಲಿ ಏತಕ್ಕೂ ಒಳ ಪಟ್ಟದ್ದಲ್ಲ. ಈ ಅನುಭವಕ್ಕೆ ''ತಾನು'' ಎಂಬ ಹೆಸರನ್ನು ಸದ್ಯಕ್ಕೆ ವಿಷಯವನ್ನು ತಿಳಿಯುವ ಸೌಲಭ್ಯಕ್ಕೋಸ್ಕರ ಇಟ್ಟುಕೊಳ್ಳೋಣ.

ಈಗ ನೀವು ನಿಮ್ಮ ಬುದ್ಧಿಯಿಂದ ಹೊರಗಿನ ವಿಷಯಗಳ ಬಗ್ಗೆ ಹಾಗೂ ನಾನಿನ ಬಗ್ಗೆ ವಿಚಾರಿಸುವುದನ್ನು ನಿಲ್ಲಿಸಿ ಸದ್ಯ ಸ್ವಲ್ಪ ಸಮಯವಾದರೂ ಈ 'ತಾನು' ಎಂಬ ಅನುಭವದ ಸ್ಮರಣೆಮಾಡಿಕೊಂಡು ಅತ್ತ ಗಮನಿಸಿರಿ.

15. ನಿದ್ರೆಯಲ್ಲಿ ನೀವಿರುವ ಬಗೆಯನ್ನು ಕುರಿತು ವಿಚಾರಿಸಲು ಹೊರಡಿರಿ ಹಾಗೂ ಅಲ್ಲಿದ್ದ ಅನುಭವವನ್ನು ಸರಿಯಾಗಿ ಈ ಬುದ್ಧಿಯಲ್ಲಿ ಇಳಿಸಿಕೊಳ್ಳಿರಿ.

16. ಈಗ ನಿಮ್ಮಲ್ಲಿ ಮೊದಲಿಲ್ಲದ ಹೊಸದೊಂದು ವೃತ್ತಿಯು ಹುಟ್ಟುತ್ತದೆ. ಅದೇನೆಂದರೆ 'ನಾನು' ಹಾಗೂ ಅದರ ಪರಿವಾರವಿಲ್ಲದೆಯೇ 'ತಾನು' ಇದೇನೆ. ಇದಕ್ಕೆ ನಿದ್ರೆಯೆ ಪ್ರಮಾಣ. ಆ 'ತಾನು' ಇದ್ದರೆ ಎಚ್ಚರವಾಗಲಿ ಕನಸಾಗಲಿ ಇರುತ್ತದೆ. ಆದರೆ

ಎಚ್ಚರವಿಲ್ಲದಿದ್ದರೂ ಕನಸಿಲ್ಲದಿದ್ದರೂ ಸ್ವತಂತ್ರವಾಗಿ ''ತಾನು'' ಇದ್ದೇ ಇದೆ ಎಂಬ ವೃತ್ತಿಯನ್ನು ಗಟ್ಟಿಯಾಗಿ ಪಟ್ಟು ಹಿಡಿಯಿರಿ.

17. ಈ ಹಿಂದೆ 'ನಾನು' ಎಂಬುದು ನ್ಯಾಯಾಧೀಶನಾಗಿ ತನ್ನೆದುರಿನ ಎಲ್ಲಕ್ಕೂ ನಿರ್ಣಯಕೊಡುತ್ತಿತ್ತಲ್ಲವೇ ? ಈಗ ಈ ''ತಾನು'' ಎಂಬ ಅನುಭವವನ್ನನುಸರಿಸಿದ ವೃತ್ತಿಯನ್ನು ನ್ಯಾಯಾಧೀಶನ ಸ್ಥಾನಕ್ಕೆ ಕೂಡಿಸಿ ಈ ''ನಾನು'' ವನ್ನು ಕೆಳಗೆ (ಗಜಿಶ್ಚಿಭಿಠಿಂ ಆಟ್ಟ) ಆರೋಪಿಸ್ಥಾನದಲ್ಲಿ ನಿಲ್ಲಿಸಿ. ಈ ಕೆಳಗಿನ ನಿರ್ಣಯಗಳು ಬರುವವರೆಗೂ ಮತ್ತೆ ಮತ್ತೆ ವಿಚಾರ ಮಾಡುತ್ತಲೂ ಅನುಭವದಲ್ಲಿ ನಿಂತು ನಿಂತು ನೋಡುತ್ತಲೂ ಮೊದಲು ಸಾಕಿಕೊಂಡ ಗಟ್ಟಿಯಾಗಿರುವ ಪೂರ್ವಾಗ್ರಹಗಳನ್ನು ಸಡಿಲಿಸುತ್ತಲೂ ಇದಕ್ಕೆ ಪೋಷಕ ವಾಗಿ ಈ ಕ್ರಮವನ್ನರಿತವರ ಸಂಗಶ್ರವಣಾದಿಗಳನ್ನು ಮಾಡುತ್ತಲೂ ''ನಾನು'' ಹಾಗೂ ಅದಕ್ಕೆ ಸಂಬಂಧಪಟ್ಟ ವಿಚಾರಗಳ ಚಿಂತೆಯಿಂದ ಈ ಪ್ರಸ್ತುತ ವಿಚಾರವು ಕೆಡದಂತೆ ಬಲ್ಲವರ ಸಲಹೆಯೊಂದಿಗೆ ಕರ್ಮಯೋಗ, ನಾಮ ಸ್ಮರಣೆ ಭಗವದ್ಭಾವನೆ, ಸರ್ವಕರ್ಮಸಮರ್ಪಣೆ, ವಿಷಯಭೋಗದಲ್ಲಿ ದೋಷದರ್ಶನ-ಮುಂತಾದ ಸಾಧನೆಗಳನ್ನು ಮಾಡುತ್ತಲೂ ಎಚ್ಚರದಿಂದಿರಿ. ಸಂತತ ಪ್ರಯತ್ನಿಸಿರಿ. ಧೈರ್ಯಗೆಡದಿರಿ. ಕೊನೆಗೆ ಈ ನಿರ್ಣಯಗಳು ಬಂದು ಅಲ್ಲಿಯೇ ನಿಶ್ಚಿತವಾಗಿ ನೆಲೆನಿಲ್ಲುವಿರಿ. ಯಾರು ಕರ್ಮಯೋಗ ಉಪಾಸನಾದಿಗಳನ್ನು ಈ ಜನ್ಮದಲ್ಲಿಯಾಗಲಿ ಜನ್ಮಾಂತರದಲ್ಲಾಗಲಿ ಮಾಡಿಕೊಂಡು ಅಮಾನಿತ್ವಾದಿಗುಣಗಳನ್ನೂ ಶಮದಮಾದಿಸಾಧನೆಗಳನ್ನೂ ಹೊಂದಿದವರಾಗಿರುವರೋ ಅವರಿಗೆ ಈ ಯೋಗದಲ್ಲಿ ಸುಲಭವಾಗಿ ಪ್ರವೇಶವು ದೊರೆಯುತ್ತದೆ. ಯಾರಿಗೆ ಪ್ರಯತ್ನಿಸಿದರೂ ಈ ಯೋಗದಲ್ಲಿ ಗತಿಯು ಬರುವುದಿಲ್ಲವೋ ಅಂಥವರು ಪೂರ್ವಸಾಧನೆಗಳಲ್ಲಿ ಉಂಟಾಗಿರುವ ಕೊರತೆಯನ್ನು ಪೂರೈಸಿಕೊಳ್ಳಲು ಅವುಗಳನ್ನು ಬಲ್ಲವರ ಸಲಹೆಯೊಂದಿಗೆ ಆಚರಿಸುತ್ತಿರಬೇಕು. ಹಾಗೂ ಆತ್ಮವಿಚಾರದ ಶ್ರವಣಮನನಗಳನ್ನೂ ನಡೆಸುತ್ತಿರಬೇಕು. ಮನಸ್ಸು ಒಳಕ್ಕೆ ಬಂದಾಗ ಶ್ರವಣಾದಿಗಳನ್ನೂ ಮನಸ್ಸು ಬಾಹ್ಯಕ್ಕೆ ಬಂದರೆ ಕರ್ಮಯೋಗಾದಿಗಳನ್ನೂ ಆಚರಿಸುತ್ತಾ ಪ್ರಯತ್ನ ಮಾಡುತ್ತಿರಬೇಕು.

## ಅನುಭವಪೂರ್ವಕ ನಿರ್ಣಯಗಳು

1. 'ನಾನು' ಹೊರಗಿದೆ. 'ತಾನು' ಒಳಗಿದೆ ಎಂದರೆ ಎರಡು ಭಾಗ (ಟಟಇಾಂ) ಗಳಿದ್ದು ಒಂದು ಒಳಗಿದೆ ಇನ್ನೊಂದು ಹೊರಗಿದೆ ಎಂದರ್ಥವಲ್ಲ. ರಜತಪರದೆಯ ಮೇಲೆ ಚಲನಚಿತ್ರವೂ ಚಿತ್ರದ ಒಳಗೆ ಪರದೆಯೂ ಇದೆ ಎಂಬಂತೆಯೇ ಇವು ಇವೆ.

2. 'ತಾನು' ನಾನನ್ನು ವ್ಯಾಪಿಸಿದೆ. 'ನಾನು'ವನ್ನು ವಿಷಯೀಕರಿಸುತ್ತದೆ. ನಾನು

ಇದ್ದದ್ದನ್ನೂ ಇಲ್ಲದ್ದನ್ನೂ ಅರಿಯುತ್ತದೆ. ಈ ನಾನು ಮಾತ್ರ ತಾನನ್ನು ಎಂದೂ ವಿಷಯೀಕರಿಸಲಾರದು. ಸೀಮೆಎಣ್ಣೆಯ ದೀಪದಮೇಲಿರುವ ಗಾಜು ದೀಪದಿಂದ ಬೆಳಗಲ್ಪಡುವದೇ ಹೊರತು ಗಾಜು ದೀಪವನ್ನು ಬೆಳಗಲಾರದೆಂಬಂತೆಯೇ ಇದೂ ಆಗಿದೆ.

3. ಎಚ್ಚರದಲ್ಲಿ ಸಿಕ್ಕು ಒದ್ದಾಡುವಂತಿರುವ 'ನಾನು' ಒಂದು ವಿಧ. ಸ್ವಪ್ನದಲ್ಲಿ ಸಿಕ್ಕುಬಿದ್ದಂತಿರುವ 'ನಾನು' ಇನ್ನೊಂದು ವಿಧ. ನಿದ್ರೆಯಲ್ಲಿ ಈ ಎರಡರಲ್ಲಿ ಯಾವುದೊಂದೂ ತೋರುವುದಿಲ್ಲ. ಈ ನಾನುಗಳು ಬಂದರೂ ಹೋದರೂ 'ತಾನು' ಮಾತ್ರ ತೋರದೆ ಅಡಗದೆ ಹೆಚ್ಚುಕಡಿಮೆಯಾಗದೆ ಇದ್ದೇ ಇದೆ.

4. 'ನಾನು' ಇರಬೇಕಿದ್ದರೆ ಇನ್ನೊಂದನ್ನವಲಂಬಿಸಿಯೇ ಇರಬೇಕು. ಉದಾ. ನಾವು, 'ನಾನು' ಎಂದಾಗ 'ಇಂಥವನು' ಎಂದು ಹೇಳಬೇಕಾಗುವುದು. ಆಗ ದೇಹ ಇಂದ್ರಿಯ ದೇಶ ಕಾಲ ಮನಸ್ಸು ಪ್ರಾಣ ಬುದ್ಧಿ ಮುಂತಾದವುಗಳಿಂದಲೇ ಇಂಥವನು ಎಂದಾಗಬೇಕು. ಆದ್ದರಿಂದ ಇನ್ನೊಂದಿರದೆ ನಾನು ಇರಲಾರದು. 'ತಾನು' ಮಾತ್ರ ಇವುಗಳಾವುದರ ಹಂಗೂ ಇಲ್ಲದೆ ಇವುಗಳಿಗೆಲ್ಲ ಆಶ್ರಯವಾಗಿ ಇರತಕ್ಕದ್ದು. ಆದ್ದರಿಂದ ಇದು ಬರಿ ಇರವು. ಇರವೇ ಇದರ ಸ್ವಭಾವ, ಸ್ವರೂಪ.

5. 'ನಾನು' ಏನನ್ನಾದರೂ ಅರಿಯಬೇಕಿದ್ದರೆ ಇಂದ್ರಿಯವೇ ಮುಂತಾದ ಸಾಧನೆಗಳಿಂದಲೂ ದೇಶಕಾಲಾದಿಗಳ ಮೂಲಕವೂ ಕಾರ್ಯಕಾರಣಾದಿ ಭಾವಸಮೇತವಾಗಿಯೂ ಮಾರ್ಪಾಡಾಗುತ್ತ ಅರಿತುಕೊಳ್ಳುತ್ತೇನೆ. ಆದರೆ 'ತಾನು' ನಾನನ್ನರಿಯುತ್ತದೆ ಎಂದಾಗ ಯಾವ ಸಾಧನೆಯೂ ಇಲ್ಲದೆ ನೇರಾಗಿ ಅರಿಯುವದಲ್ಲದೆ ತನ್ನಲ್ಲಿ ಯಾವ ವಿಕಾರವನ್ನೂ ಹೊಂದದೆ ಅರಿಯುತ್ತಿರುತ್ತದೆ. ನಾನು ಇಲ್ಲದಾಗಲೂ ಹಾಗೇ ಅರಿವಿನ ರೂಪವಾಗಿರುತ್ತದೆ. ಇದು ಅರಿಯವ ಕ್ರಿಯೆಯಲ್ಲ, ಸ್ವಭಾವ, ಸ್ವರೂಪ. 'ಬೆಟ್ಟವು ನಿಂತಿದೆ', 'ಸೂರ್ಯನು ಬೆಳಗುತ್ತಾನೆ' ಎಂಬುದು ಹೇಗೆ ಕ್ರಿಯೆಯಲ್ಲವೋ ಹಾಗೆಯೇ ಇದೂ ಕ್ರಿಯೆಯಲ್ಲ.

6. ನಾನು ತಿಳಿದಿಲ್ಲ. ನನಗೆಸಂಶಯವಿದೆ. ನಾನು ತಪ್ಪಾಗಿ ತಿಳಿದೆ. ನಾನು ಸರಿಯಾಗಿ ತಿಳಿಯತೊಡಗಿದ್ದೇನೆ. ಈಗ ಸರಿಯಾಗಿ ತಿಳಿದೆ. ಮೊದಲಿನ ಅಜ್ಞಾನ ಸಂಶಯಗಳು ಹೋದವು –ಎಂಬ ವಿಕಾರಗಳು ಈ ನಾನಿನಲ್ಲಿ ಆಗೇ ಆಗುತ್ತಿರುತ್ತವೆ. ಆದರೆ ತಾನಿಗೆ ಮಾತ್ರ ಇವಾವುವೂ ಯಾವಾಗಲೂ ಇಲ್ಲ. ಭೂಮಿಯ ಮೇಲಿನವರಿಗೆ ಕತ್ತಲು, ಮಂದಪ್ರಕಾಶ, ಅರುಣೋದಯ, ಸಂಧ್ಯಾಕಾಲ, ಮಧ್ಯಾಹ್ನ, ರಾತ್ರಿಗಳಿವೆ. ಸೂರ್ಯನಲ್ಲಿ ಮಾತ್ರ ಇವಾವುವೂ ಇಲ್ಲವೆಂಬಂತೆಯೇ ಇದನ್ನೂ ತಿಳಿಯಬೇಕು.

7. ''ನಾನು'' ಏನಾದರೊಂದಾಗಬೇಕಿದ್ದರೆ ದೇಶ ಕಾಲ ಕಾರ್ಯ-ಕಾರಣ ಭಾವಗಳ ನಿಯಮಗಳಿಗನುಸಾರವಾಗಿಯೇ ಸಾಧನೆಮಾಡಿ ತನ್ನಲ್ಲಿ ಹೆಚ್ಚು ಅಥವಾ ಕಡಿಮೆ ಮಾಡಿಕೊಂಡು ಆಗಬೇಕು. ಆದರೆ ''ತಾನು'' ಮಾತ್ರ ಇದಾವುದರ ಅವಶ್ಯಕತೆ ಇಲ್ಲದೆ ಏಕಕಾಲದಲ್ಲಿಯೇ ಎಲ್ಲವೂ ಆಗಿ ನಿಲ್ಲಬಲ್ಲದಲ್ಲದೆ ತನ್ನಲ್ಲಿ ಮಾರ್ಪಾಡಾಗದೆಯೇ ಎಲ್ಲವೂ ಆಗಿ ನಿಂತು ಹಾಗಾದಾಗಲೂ ''ತಾನು'' ಮೊದಲಿದ್ದಂತೆಯೇ ಇರಬಲ್ಲದಾಗಿದೆ.

8. ಕನಸೆಲ್ಲವೂ ತಾನೇ ಆಗಿದ್ದು ತನ್ನಲ್ಲಿ ಏನೂ ಮಾರ್ಪಾಡಿಲ್ಲದೆ ಅದೆಲ್ಲಾ ಆಗಿ ಆಗಲೂ ''ತಾನು'' ತಾನೇ ಆಗಿದ್ದು ಆ ತೋರಿಕೆ ಅಡಗಿದಾಗಲೂ ತಾನೇ ಆಗಿದ್ದಾನೆ. ಇದರಂತೆಯೇ ತಾನೇ ಎಚ್ಚರವೆಲ್ಲಾ ಆಗಿದ್ದು ಆಗಲೂ ''ತಾನು'' ತಾನೇ ಆಗಿದ್ದು ಯಾವಾಗಲೂ ಯಾವ ಮಾರ್ಪಾಡೂ ಆಗದೆಯೇ ಇದ್ದಾನೆ.

9. ಎಲ್ಲಿಯವರೆಗೆ ಈ ತಾನೆಂಬ ತತ್ತ್ವದ ಕಡೆ ನಾವು ಸರಿಯಾಗಿ ನೋಡುವದಿಲ್ಲವೋ ಅಲ್ಲಿಯವರೆಗೆ ಈ ''ತಾನೇ'' ಎಚ್ಚರಕನಸುನಿದ್ರೆಗಳಾಗಿರುವಂತೆ ಭಾಸವಾಗುತ್ತದೆ. ಇಲ್ಲಿ ಹೇಳಿರುವ ಪ್ರಕಾರ ತಾನೆಂಬ ಸ್ವರೂಪವನ್ನು ಲಕ್ಷಿಸಿದೊಡನೆಯೇ ಅವಸ್ಥೆಗಳಿಲ್ಲ, ಇರುವದೆಲ್ಲವೂ ''ತಾನೇ'' ಎಂಬ ಅರಿವು ಮಿಂಚುವದು.

10. ಈ ಮಿಂಚುವ ಅರಿವು ನಾನಿಗೇ ಸೇರಿದ್ದಾದರೂ ತಾನೆಂಬ ಅನುಭವ ವನ್ನಾಧರಿಸಿರುವ ವೃತ್ತಿಯಾದ್ದರಿಂದ ಇದು ಆತ್ಮಜ್ಞಾನ ಎನಿಸಿಕೊಳ್ಳುತ್ತದೆ (ಇದು ವೇದನ ಪ್ರತ್ಯಯಗಳಿಗೆ ಸೇರಿದ್ದಲ್ಲ). ಅಣ್ಣ ತಮ್ಮಂದಿರಿಬ್ಬರು ಭೀಮದುರ್ಯೋಧನರ ಪಾತ್ರವಹಿಸಿದಾಗ ವೇಷಹಾಕಿ ರಂಗಭೂಮಿಯ ಮೇಲೆಬಂದಾಗ ಒಬ್ಬರನ್ನೊಬ್ಬರು ದ್ವೇಷಿಸುವರು. ಒಳಗೆ ಹೋದಾಗ ವೇಷವಿದ್ದೂ ತಮ್ಮ ಸಂಸಾರದ ಮಾತುಗಳನ್ನಾಡುವಾಗ ವೇಷವು ಹೇಗೆ ಲೆಕ್ಕಕ್ಕಿಲ್ಲವೋ ಹಾಗೆಯೇ ಇಲ್ಲಿ ವೃತ್ತಿಯೂ ಲೆಕ್ಕಕ್ಕಿಲ್ಲ.

11. ತನ್ನನ್ನರಿಯದಿದ್ದುದೇ ''ನಿದ್ರೆ'', ತನ್ನನ್ನು ಅವಸ್ಥೆಗಳೆಂದು ತಪ್ಪಾಗಿ ತಿಳಿದದ್ದೇ ''ಕನಸು'', ತನ್ನನ್ನು ವಿಚಾರಿಸಿ ಇದೆಲ್ಲವೂ ತಾನೇ ಹೊರತು ಇನ್ನೊಂದಿಲ್ಲ ಎಂಬ ನಿರ್ಣಯವು ಮಿಂಚುವ ಅರಿವೇ ''ಎಚ್ಚರ''.

12. ಇವು ಮೂರು ನಾನಿನಲ್ಲೇ ಬರತಕ್ಕದಾದ್ದರಿಂದಲೂ ತಾನಿಗೆ ಇದೇನೂ ಇಲ್ಲದ್ದರಿಂದಲೂ ಈ ಜ್ಞಾನವನ್ನು ಪಡೆದವನಿಗೆ 'ನಾನು' ಎಂಬುದು ಹೊರಟೇ ಹೋಗುವದು. ಎಂದರೆ 'ಇದೂ ಹುಸಿತೋರಿಕೆಯೇ ಆಗಿದೆ' ಎಂದು ಗೊತ್ತಾಗುವದು. ಕಾರಣ – ವೃತ್ತಿಯಲ್ಲಿಯ ಜ್ಞಾನಾಜ್ಞಾನಗಳೆರಡೂ ಅವಿದ್ಯೆಯ ಭೂಮಿಕೆಗೆ ಸೇರಿವೆ. ತಾನುವಿನಲ್ಲಿ

ನಿಂತಾಗ ಇದೊಂದೂ ಇಲ್ಲ. ಹೀಗೆ ನೆಲೆನಿಂತಿರುವದನ್ನು ಜ್ಞಾನನಿಷ್ಠೆ, ಪರಾಭಕ್ತಿ ಎಂದು ಕರೆಯುತ್ತಾರೆ. ಈಚೆಗೆ ಇದನ್ನು ಬ್ರಹ್ಮಾಕಾರವೃತ್ತಿ ಎಂದು ಕರೆಯುವ ರೂಢಿಯಿದೆ. ಆದರೆ ಇದು ವೃತ್ಯಾಕಾರಬ್ರಹ್ಮವೇ ಹೊರತು ಬ್ರಹ್ಮಾಕಾರ ವೃತ್ತಿಯಲ್ಲ. ಏಕೆಂದರೆ ವೃತ್ತಿಯು ಬ್ರಹ್ಮವನ್ನು ಎಂದೂ ವಿಷಯೀಕರಿಸಲಾರದು.

14. ತಾನು ತನ್ನನ್ನರಿಯದಿದ್ದುದಿಲ್ಲ, ಅರಿತದ್ದಿಲ್ಲ. ಅವುಗಳ ಫಲವಾದ ಸಂಸಾರ ಮೋಕ್ಷಗಳೆರಡೂ ತನಗಿಲ್ಲ. ಇಲ್ಲಿಗೆ ಮಾತುವಿಚಾರಗಳೆರಡೂ ನಿಂತಿರುವ ತಾನೇ ತುರೀಯನು. ಉಳಿದದ್ದೆಲ್ಲವೂ ಹುಸಿತೋರಿಕೆ.

ಈ ಮೇರೆಗೆ 'ನಾನು'ವಿನ ಸತ್ಯತತ್ವವು ತಾನೇ ಎಂದು ತಿಳಿದಾಗ (ತಾನೇ ನಿಜವಾದ 'ನಾನು' ಎಂದರಿತಾಗ) ಕಾಮಾದಿಭಾವಗಳಿಂದ ಸಂಪೂರ್ಣ ಬಿಡುಗಡೆ ಹೊಂದಿರುತ್ತೇವೆ. ಇದನ್ನೇ ಮೋಕ್ಷವೆಂದು ವ್ಯವಹರಿಸುತ್ತಾರೆ. (ಕರೆಯುತ್ತಾರೆ.)

ಆಗ ತನ್ನನ್ನು ತಿಳಿಯದಿರುವದೆಂಬ ಅವಿದ್ಯೆಯು ತಂದೊಡ್ಡಿದ ಜನ್ಮ, ಮರಣ, ಕರ್ಮ, ಫಲ ಮುಂತಾದ ಪ್ರಪಂಚವೆಲ್ಲವೂ ಹುಸಿಯಾಗಿ ಬಿಡುವದರಿಂದ ಇವುಗಳಿಂದ ಬಿಡುಗಡೆಹೊಂದುತ್ತಾನೆಂಬುದು ಸಹಜವಾಗಿದೆ. ಇದೇ ಈ ಯೋಗದ ಫಲವು.

ಆದ್ದರಿಂದ ಮುಮುಕ್ಷುಗಳು ಇದನ್ನು ಸತತವೂ ಪ್ರಯತ್ನಪೂರ್ವಕವಾಗಿ ಸಾಧಿಸತಕ್ಕದ್ದು. ಈ ಅರಿವಿನಲ್ಲಿ ಸಹಜವಾಗಿ ನೆಲೆನಿಂತಿರುವದೇ ಜ್ಞಾನನಿಷ್ಠೆಯು. ಈ ಜ್ಞಾನನಿಷ್ಠೆಯು ಬರುವವರೆಗೂ ಸತತಪ್ರತಯತ್ನವು ಅತ್ಯವಶ್ಯ.

## ಪರಮಾರ್ಥದರ್ಶನಯೋಗ

ಯೋಗವೆಂದರೆ ಸಾಮಾನ್ಯವಾಗಿ ಪಾತಂಜಲಯೋಗವೆಂದೇ ಥಟ್ಟನೆ ಕೆಲವರಿಗೆ ಕಲ್ಪನೆಯಾಗುವ ಸಂಭವವಿದೆ. ಆದರೆ ಇಲ್ಲಿ ಹೇಳಿರುವ ಈ ಯೋಗವು ಅದಕ್ಕೆ ಸಂಬಂಧಿಸಿದ್ದಲ್ಲ. ಶ್ರೀಶಂಕರಾಚಾರ್ಯರು ಈ ಸಾಧನೆಯನ್ನು '**ಸಮಾಧಿಯೋಗ**' ಎಂದು ಕರೆದು ಇದರ ಪರಿಪೂರ್ಣತೆಯನ್ನು '**ಪರಮಾರ್ಥದರ್ಶನಯೋಗ**' ಎಂದೂ ಹೇಳಿದ್ದಾರೆ. ವೇದಾಂತದರ್ಶನದ ಸರಿಯಾದ ಕಲ್ಪನೆಯಿಲ್ಲದಿರುವ ಕೆಲವು ಜನರು ಇಲ್ಲಿ ಮೇಲೆ ಹೇಳಿದ ಸಮಾಧಿಯೋಗ ಎಂಬ ಶಬ್ದಕ್ಕೆ ಪಾತಂಜಲಯೋಗದಲ್ಲಿ ಹೇಳಿರುವ ಶಬ್ದಾನುವಿದ್ಧ, ದೃಶ್ಯಾನುವಿದ್ಧ, ಸಂಪ್ರಜ್ಞಾತ, ಸವಿಕಲ್ಪ, ನಿರ್ವಿಕಲ್ಪ ಮುಂತಾದ ಸಮಾಧಿಗಳೆಂದೇ ತಪ್ಪಾಗಿತಿಳಿದುಕೊಳ್ಳುವ ಸಂಭವವಿರುತ್ತದೆ. ಅಲ್ಲದೆ ಈಚೆಗೆ ವೇದಾಂತದಲ್ಲಿ ಸಪ್ತಭೂಮಿಕೆ, ಷಟ್‌ಚಕ್ರ, ನಾದಬಿಂದುಕಲಾ ಮೊದಲಾದ ಹಠಯೋಗ ರಾಜಯೋಗಾದಿಗಳ ಸಾಧನೆಗಳನ್ನು

ಸೇರಿಸಿಕೊಂಡು ಬೋಧಿಸುವ ಪದ್ಧತಿಗಳು ಬಂದಿರುವುದರಿಂದಲೂ ವೇದಾಂತಜ್ಞಾನದ ಪ್ರಾಪ್ತಿಗೆ ಇವೆಲ್ಲವೂ ಸಾಧನೆಗಳಾಗಿವೆ ಎಂದೇ ಅನೇಕ ಸಾಧಕರು ಭ್ರಮಿಸುತ್ತಾರೆ. ಆದರೆ ಅವೈದಿಕವೂ ಕರ್ತೃತಂತ್ರವೂ ಆಗಿರುವ ಪಾತಂಜಲಯೋಗಕ್ಕೂ, ವೈದಿಕವೂ ವಸ್ತುತಂತ್ರವೂ ಆಗಿರುವ ಈ ಯೋಗಕ್ಕೂ ಯಾವ ಸಂಬಧವೂ ಇರುವದಿಲ್ಲ. ಹೀಗಿದ್ದರೂ ಆಸನ ಪ್ರಾಣಾಯಾಮಪ್ರತ್ಯಾಹಾರಗಳು ಈ ಯೋಗಕ್ಕೂ ಪೋಷಕವಾಗಿರುತ್ತವೆ. ಆದ್ದರಿಂದಲೇ ಗೀತೆಯ 6ನೆಯ ಅಧ್ಯಾಯದಲ್ಲಿ ಅವುಗಳನ್ನು ಯೋಗಕ್ಕೆ ಸಹಾಯಕವಾಗಿ ಹೇಳಿದೆ. ಈ ಯೋಗದಲ್ಲಿ ಶ್ರವಣಮನನಗಳ ನಂತರ ಮಾಡಬೇಕಾಗಿರುವ ಏಕಾಗ್ರತೆಯ ವಿಚಾರವೇ ಮುಖ್ಯವಾಗಿದೆಯೇ ಹೊರತು ಮಿಕ್ಕಿದ್ದೆಲ್ಲವೂ ಈ ಏಕಾಗ್ರತೆಗೆ ಸಹಾಯಕವಾಗಿರುವ ಮಟ್ಟಿಗೇ ಉಪಯುಕ್ತವಾಗಿವೆ.

ಶ್ರೀಗೌಡಪಾದರು ಮಾಂಡೂಕ್ಯಕಾರಿಕೆಗಳಲ್ಲಿ ಈ ಯೋಗದ ವಿಚಾರದ ಬಗ್ಗೆ ಹೇಳುವಾಗ ಇದಕ್ಕೊದಗುವ ಪ್ರತಿಬಂಧಗಳನ್ನೂ ಅವುಗಳ ಪರಿಹಾರೋಪಾಯಗಳನ್ನೂ ತಿಳಿಸಿದ್ದಾರೆ. ಈ ಯೋಗವನ್ನಾಚರಿಸತಕ್ಕವರು ಅವುಗಳನ್ನು ತಿಳಿದಿರುವದು ಅವಶ್ಯ.

**1. ವಿಕ್ಷೇಪ-** ತತ್ತ್ವವನ್ನು ಏಕಾಗ್ರತೆಯಿಂದ ಲಕ್ಷಿಸುವಾಗ ಈ ಹಿಂದೆ ಹೇಳಿದ 'ತಾನು' ಎಂಬ ಅನುಭವವನ್ನು ಪಟ್ಟಾಗಿ ಹಿಡಿದುಕೊಳ್ಳದೆ ನಮ್ಮ ಮನಸ್ಸು 'ನಾನು' ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳ ಕಡೆಗೆ ಧಾವಿಸುವದೇ ವಿಕ್ಷೇಪ, ವಿಷಯಗಳಲ್ಲಿ ದೋಷದರ್ಶನ ವನ್ನೂ ಪ್ರಪಂಚದ ಹುಸಿತೋರಿಕೆಯನ್ನೂ ಮತ್ತೆಮತ್ತೆ ಮನಸ್ಸಿನಲ್ಲಿ ಹೊರಳಾಡಿಸುವದರಿಂದ ಇದನ್ನು ಕಳೆದುಕೊಳ್ಳಬೇಕು.

**2. ಲಯ-** ಈ ಯೋಗವನ್ನಾಚರಿಸುವಾಗ ನಿದ್ರೆ ಬರುವದನ್ನೇ 'ಲಯ' ಎನ್ನುತ್ತಾರೆ. ಇದನ್ನು ಮಿತಾಹಾರವಿಹಾರಗಳಿಂದಲೂ ಮನಸ್ಸನ್ನು ಮತ್ತೆ ಮತ್ತೆ ಎಚ್ಚರಿಸಿ ಸಾಧನೆಯಲ್ಲಿ ತೊಡಗಿಸುವದರಿಂದಲೂ ಪರಿಹರಿಸಿಕೊಳ್ಳಬೇಕು.

**3. ಕಷಾಯ-** ಏಕಾಗ್ರತೆಯಿಂದ ತತ್ತ್ವನಿರೀಕ್ಷಣೆಮಾಡುವಾಗ ಒಂದೊಂದು ಸಲ ನಮ್ಮ ಮನಸ್ಸು ಅನುಭವದಲ್ಲಿಯೂ ನಿಲ್ಲದೆ ವಿಷಯಗಳಲ್ಲಿಯೂ ತೊಡಗದೆ ತೆಪ್ಪಗೆ ನಿಂತಿರುತ್ತದೆ. ಇದು ವಿಕ್ಷೇಪಕ್ಕೆ ಬೀಜವಾಗಿದೆ. ಮನಸ್ಸನ್ನು ಮತ್ತೆಮತ್ತೆ ಎಚ್ಚರಿಸಿ ವಿಚಾರಕ್ಕೆ ತೊಡಗಿಸುವದೇ ಇದಕ್ಕೆ ಪರಿಹಾರ.

**4. ರಸಾಸ್ವಾದ-** ವಿವೇಕಪೂರ್ವಕವಾದ ವಿಚಾರಮಾಡುವಾಗ ಏಕಾಗ್ರತೆಯಿಂದ ಒಂದು ವಿಧವಾದ (ಇದೆಂಥ ದಿವ್ಯವಾದ ಅನುಭವ ಎಂದೀಬಗೆಯ) ಆನಂದವು ಮನಸ್ಸಿನಲ್ಲಿ

ಮಿಂಚತೊಡಗುವುದು. ಇದೇ ರಸಾಸ್ವಾದವು. ಇದನ್ನೂ ಸಹ ಮೀರಿ ಹೋದಾಗಲೇ ತತ್ತ್ವದಲ್ಲಿ ಸರಿಯಾಗಿ ನೆಲೆನಿಲ್ಲುವೆವು. ತಾನು ಎಂಬ ಸ್ವರೂಪದಲ್ಲಿ 'ತಿಳಿದೆ' 'ತಿಳಿಯಲಿಲ್ಲ' ಎಂಬ ಯಾವ ವೃತ್ತಿಗಳೂ ಇಲ್ಲವೆಂಬುದನ್ನು ಜ್ಞಾಪಿಸಿಕೊಂಡು ವೃತ್ತಿಯಲ್ಲಿ ಉಂಟಾಗುವ ಈ ಆನಂದವೂ ಸಹ ನಾನಿಗೇ (ಅಹಂಕಾರಕ್ಕೇ) ಸಂಬಂಧಿಸಿದ ಹುಸಿತೋರಿಕೆಯು ಎಂದು ನಿಶ್ಚಯಿಸುವದೇ ಇದರಿಂದ ಪಾರಾಗಲು ಉಪಾಯವು. ಹೀಗೆ ಈ ನಾಲ್ಕು ಪ್ರತಿಬಂಧಗಳನ್ನು ದಾಟಿ ಕೇವಲ ತಾನಾಗಿ ನಿಂತಾಗ ಈ ಯೋಗವು ಪೂರ್ತಿಯಾಯಿತು.

## ಅನುಭವವೂ ನೆಲೆನಿಲ್ಲುವಿಕೆಯೂ

ಅಧ್ಯಾತ್ಮಯೋಗದಲ್ಲಿ ''ಅನುಭವ'' ಎಂದರೆ –

1. ವಿಷಯಗಳನ್ನು ಇಂದ್ರಿಯಗಳಿಂದ ಮುಟ್ಟಿದಾಗ ಉಂಟಾಗುವ ಪ್ರತ್ಯಯವಲ್ಲ. 2. ಮನಸ್ಸಿನಲ್ಲುಂಟಾಗುವ ಕಾಮ, ಶಾಂತಿ, ಕ್ರೋಧ, ದಯೆ ಮುಂತಾದ ನಾನಾ ಬಗೆಯ ವೇದನೆಗಳಲ್ಲ. 3. ಏನಾದರೊಂದು ವಿಧದಿಂದ ಇದನ್ನು ಭಾವಿಸಲು, ಕಲ್ಪಿಸಲು ಬರುವ ವಸ್ತು ವಿಶೇಷವೂ ಇದಲ್ಲ. ಆದ್ದರಿಂದ ಈ ಅನುಭವಸ್ವರೂಪವನ್ನು ಭಾವಿಸಿಕೊಳ್ಳಲು ಹೊರಡಬಾರದು. ಇದು ಭಾವಾತೀತವು. ಇದು ಏತಕ್ಕೂ ವಿಷಯವಲ್ಲ. 4. ಸಾಧನೆಗಳನ್ನು ಮಾಡಿದ ನಂತರ ಕಾಲಾಂತರದಲ್ಲಿ ಬರುವ ಅಥವಾ ಉಪಾಸನಾದಿ ಗಳಿಂದ ಲೋಕಾಂತರಗಳಲ್ಲಿ ಬರುವ ನವೀನಾನುಭವಗಳಲ್ಲ. 5. ರಾಜಯೋಗ ಹಠಯೋಗಾದಿಗಳಲ್ಲಿ ಹೇಳಿದಂತೆ ಸಾಧಿಸಿದರೆ ಬರುವ ಹೊಸ ಅನುಭವಗಳಾದ ಸಿದ್ಧಿಗಳೇ ಮುಂತಾದವುಗಳ ಜಾತಿಗೆ ಇದು ಸೇರಿದ್ದಲ್ಲ. ಇದು ಯಾವುದೇ ಒಂದು ಅವಸ್ಥೆಗೆ ಒಳಪಟ್ಟಿದ್ದಲ್ಲ.

2.ಇದು ಎಲ್ಲರಲ್ಲಿಯೂ ಮೊದಲೇ ಇರುತ್ತಿದ್ದು ಇದರ ಬೆಳಕಿನಲ್ಲಿಯೇ ಎಲ್ಲ ಅವಸ್ಥೆಗಳೂ ವೇದನಪ್ರತ್ಯಯಗಳೂ ಬರುತ್ತಿರುವುದನ್ನೂ ಹೋಗುತ್ತಿರುವದನ್ನೂ ತಿಳಿಯುತ್ತೇವೆ. ಹಾಗೂ ಈ ಎಲ್ಲ ಭಾವಗಳೂ ಇಲ್ಲದಿರುವದೂ ಸಹ ಈ ಅನುಭವದಿಂದಲೇ ತಿಳಿದುಬರುತ್ತದೆ. ಇದೇ ಅನುಭವದ ಸ್ವರೂಪ. ಇದನ್ನೇ ''ಸಾಕ್ಷಿ'' ''ತಾನು'' ಎಂದು ವೇದಾಂತದಲ್ಲಿ ಕರೆದಿರುತ್ತದೆ. ಆತ್ಮ ಎಂದರೆ ''ತಾನು'' ಎಂದು ಅರ್ಥ. ಅನುಭವಸ್ವರೂಪನೇ ''ತಾನು.''

3. ಜ್ಞೇಯವೆಲ್ಲವನ್ನೂ (ಹಿಂದೆ ಹೇಳಿದಂತೆ 'ನಾನು' ಎಂಬುದನ್ನೂ ಸಹ) ವಿಷಯೀಕರಿಸಿ ನೋಡುವಾಗ ಈ ಅನುಭವದಲ್ಲಿಯೇ ನಾವು ನಿಂತಿರುತ್ತೇವೆ. ಅದೇ ನಾವಾಗಿರುತ್ತೇವೆ. ಹಾಗೂ ಈಗಿನ ಈ ಬುದ್ಧಿವೃತ್ತಿಗಳ ಮುಖಾಂತರ ಅದನ್ನು

ಹೊರಪಡಿಸುತ್ತವೆ. ಹೀಗಾದಾಗಲೂ ಅದೇನೂ ವೃತ್ತಿಗೆ ವಿಷಯವಾಗಿರುವದಿಲ್ಲ. ತಾನು ತಾನೇ ಆಗಿದ್ದು ವೃತ್ತಿಯಲ್ಲಿ ಬಂದು ತಾನಿರುವ ಬಗೆಯನ್ನು ವಿವರಿಸುತ್ತಾನೆ. ಹೀಗೇ ಮಾಡುವಾಗ ತನ್ನಲ್ಲಿ ಯಾವ ವಿಕಾರವೂ ಆಗಿರುವದಿಲ್ಲ. ಇದೇ ಅನುಭವದ ಸ್ವರೂಪ.

4. ಗಾಢನಿದ್ರೆಯಲ್ಲಿ 'ನಾನು' ಎಂಬ ಅಹಂಕಾರ ಮೊದಲುಗೊಂಡು ಯಾವುದೂ ಇಲ್ಲ ಎಂಬುದು ವೇದನೆಯಲ್ಲ – ಪ್ರತ್ಯಯವಲ್ಲ – ಭಾವನೆಯಲ್ಲ – ಸಾಧನೆಯಿಂದ ಬಂದ ಹೊಸದಾದ ವಿಲಕ್ಷಣಾನುಭವವಲ್ಲ. ಇದೇ ಸಾಕ್ಷ್ಯನುಭವವು. ಕನಸು ಹೀಗಿತ್ತು ಎಂಬುದೂ ಈ ಅನುಭವಕ್ಕೇ ಸೇರಿದ್ದು. ಎಚ್ಚರವನ್ನು ಉಂಡೆಯಾಗಿ ಅರಿಯುವದೂ ಇದೇ ಅನುಭವವೇ.

5. ಗಾಢನಿದ್ರೆಯಲ್ಲಿದ್ದ ನಿಮ್ಮ ಇರುವಿಕೆಯನ್ನು ಲಕ್ಷಿಸಿ ಎಚ್ಚರದ ಕಣ್ಣಿನಿಂದ ಅದರಲ್ಲಿ ಆರೋಪಿಸಿದ ನಿದ್ರೆ, ತಮ, ಅಜ್ಞಾನ, ಕಾರಣಶರೀರ ಅವ್ಯಕ್ತ ಮೊದಲಾದ ಎಲ್ಲ ಗ್ರಹಿಕೆಗಳನ್ನೂ ಕಿತ್ತೊಗೆದು ಈಗಲೂ ಆಗಿನಂತೆಯೇ ಇರುವ 'ತಾನು'ವನ್ನು ಮಾತ್ರವೇ ನಿರೀಕ್ಷಿಸಿರಿ. ಆಗ ನೀವೇ ಆ ಅನುಭವಸ್ವರೂಪವಾಗಿರುತ್ತೀರಿ. ಆ ನಿಮ್ಮ ಇರವನ್ನು ಈ ವೃತ್ತಿಗಳ ಮುಖಾಂತರ ನೀವೇ ಹೊರಪಡಿಸುವವರಾಗಿರುತ್ತೀರಿ.

6. ಈ ಕೆಳಗಿನ ಗ್ರಹಿಕೆಗಳನ್ನು ಇಟ್ಟುಕೊಳ್ಳಬೇಡಿರಿ – 1) ವೃತ್ತಿಗಳಿಂದ ಸ್ವರೂಪವನ್ನು ವಿಷಯೀಕರಿಸಿ ಸ್ವರೂಪಾನುಭವವನ್ನು ಹೊಂದಬೇಕು. 2) ವಿಶೇಷಸಾಧನೆಯ ಮೂಲಕ ಒಂದು ಸಮಯದಲ್ಲಿ ಈ ವೃತ್ತಿಗಳು ಒಂದಾನೊಂದು ಸ್ಥಿತಿಯಲ್ಲಿ ಮುಳುಗಿ ಕೆಲಕ್ಷಣ ಹಾಗೇ ಇದ್ದು 'ಅನಂತರ ಹೊರಗೆ ಬಂದು' ಅದೇ ತಾನು ಎಂಬ ಜ್ಞಾನವಾಗುತ್ತದೆ. 3) ಯೋಗ ಮಾಡುವಾಗ ಯೋಗ ಮುಗಿದಾಗ ತೀರಾ ವಿಲಕ್ಷಣವಾದ ಆನಂದಾ ವಿರ್ಭಾವವು ಉಂಟಾಗುವದು. 4) ನಿರ್ವಿಕಲ್ಪಸಮಾಧಿಯಂಥ ಅವಸ್ಥೆ ಬರುವದು. 5) ಅವ್ಯಕ್ತ, ತಮಸ್ಸು, ಅಂಧಕಾರ, ಶೂನ್ಯ ಇವು ಅಡ್ಡಬರುವವು ಎಂಬ ರೂಪದ ಪೂರ್ವಾಗ್ರಹಗಳನ್ನು ಎಂದೂ ಇಟ್ಟುಕೊಳ್ಳಬೇಡಿರಿ. ಮತ್ತು ಹೀಗೇ ವಿಚಾರಿಸಿರಿ. 1) ವೃತ್ತಿಗಳಿರುವದನ್ನೂ ಇಲ್ಲದನ್ನೂ ಅರಿಯುವ ಚೈತನ್ಯವೇ ತಾನಾಗಿದ್ದರಿಂದ ಈ 'ತಾನು' ವಿಷಯವಲ್ಲ 2) ಒಂದು ಸಮಯ, ಕ್ಷಣಗಳೆಲ್ಲವೂ ವೃತ್ತಿಯ ಈಚೆಗಿವೆ. ನೀವು ನಿಮ್ಮ ಸ್ವರೂಪವನ್ನು ಬಿಟ್ಟಿರುವ ಕ್ಷಣವಿಲ್ಲವೇ ಇಲ್ಲ. ಹೊಸದಾಗಿ ಸೇರುವ ಕ್ಷಣವು ಬರುವದಿಲ್ಲ. ಅದೇ ನಿಮ್ಮ **ಸ್ವರೂಪ ಸ್ವಭಾವ** 3) ವೃತ್ತಿಯಲ್ಲಿ ಬರುವ ಆನಂದವು ಮಿಥ್ಯಾಭಾಸವು. ಅದು ಬಂದರೂ ಅದನ್ನು ದಾಟಿ ಹೋಗಿರಿ. ವಿಚಾರದಿಂದ ತಳ್ಳಿಹಾಕಿರಿ. 4) ತಾನು ಯಾವ ಅವಸ್ಥೆಗೂ ಸೇರಿದವನಲ್ಲ. ತನ್ನಲ್ಲಿ ಎಲ್ಲ ಅವಸ್ಥೆಗಳೂ ಕಲ್ಪಿತವಾಗಿವೆ ಎಂದು ವಿಚಾರಿಸಿರಿ. 5) ಈ ಯೋಗದಲ್ಲಿ ಎಚ್ಚರದಿಂದಲೂ ವಿವೇಕಪೂರ್ವಕವಾಗಿಯೂ ಅಲ್ಲಲ್ಲಿ ನಿಂತು ಸ್ವರೂಪವನ್ನು ಅನುಭವ ಪೂರ್ವಕವಾಗಿ

ಗೊತ್ತುಪಡಿಸುತ್ತ ಹೋಗುವದರಿಂದ ತಮಸ್ಸೇ ಮೊದಲಾದ್ದಕ್ಕೆ ಅವಕಾಶವೇ ಇಲ್ಲ. ಹಾಗೇನೇದರೂ ನಿದ್ರಾದಿದೋಷಗಳು ಕಂಡುಬಂದರೆ ಕೂಡಲೇ ಜಾಗ್ರತರಾಗಿ ಮತ್ತೆ ವಿವೇಕ ಮಾಡಿರಿ.

8. ಹೀಗೆ ವಿವೇಕದ ಬಲದಿಂದಲೇ ಏಕಾಗ್ರತೆಯನ್ನು ಸಾಧಿಸಿ ಹಿಂದೆ ಹೇಳಿದಂತೆ ಶ್ರವಣಮನನಗಳಲ್ಲಿ ನಿಶ್ಚಯವಾದ ಅನುಭವಸ್ವರೂಪನಾದ 'ತಾನು' ಎಂಬ ಸ್ವರೂಪವನ್ನೇ ಲಕ್ಷಿಸಿದಾಗ ಕೊನೆಗೆ ತಾನಾಗಿಯೇ ನಿಲ್ಲುವಿರಿ. ಅದು ನಿದ್ರೆಯಲ್ಲ, ಎಚ್ಚರವಲ್ಲ, ಕನಸಲ್ಲ, ನಿರ್ವಿಕಲ್ಪಸಮಾಧಿಯಲ್ಲ. ಎಲ್ಲ ಅವಸ್ಥೆಗಳಿಗೂ ಆಧಾರವಾದ 'ತಾನೇ' ಅದು. ಇದೇ ನನ್ನ ಸ್ವರೂಪ. ಇದನ್ನುಳಿದು ಇನ್ನೊಂದಿಲ್ಲ. ಇನ್ನೊಂದೆಂಬುದು ''ಹುಸಿತೋರಿಕೆ'' ಎಂಬ ನಿಶ್ಚಯವು ನಿಮ್ಮಲ್ಲಿ ಹೊಸದಾಗಿ ಮಿಂಚುವದು. ಇದೂ ''ವೃತ್ತಿಜ್ಞಾನವೇ ಆದರೂ ಆ ನಿಶ್ಚಯವೃತ್ತಿ ಮಿಂಚುವುದೇ ಅಧ್ಯಾತ್ಮಯೋಗದ ಪರ್ಯವಸಾನ.'' ಈ ವ್ಯವಹಾರದೃಷ್ಟಿಯಿಂದ ಇದು ಒಂದು ಸಮಯದಲ್ಲಾದ ಘಟನೆ. ಈ ಘಟನೆಯಾಗಬೇಕಾದರೆ ತತ್ತ್ವತಃ ಆತ್ಮಸ್ವರೂಪದ ವಿಚಾರವೆಂಬ ಸಾಧನೆಯಿಂದ ಅನಾತ್ಮಗಳೊಂದೊಂದನ್ನೂ ಕೈಬಿಡುತ್ತಾ ಹೋಗಿ ಕೊನೆಗೆ ಆತ್ಮನಲ್ಲಿ ಮುಳುಗಿ – ಎಂದರೆ ವೃತ್ತಿಯು ತನ್ನ ವೃತ್ತಿತ್ವವನ್ನು ಕಳೆದುಕೊಂಡು (ವಿಷಯ –ವಿಷಯಿ–ಕಟ್ಟಿಭಿಜಿಡಭಿಛಟಟ್ಟಿಭಿಜಿಡಟ್ಟಿ ಎಂಬೆರಡೂ ಹುಸಿ ಎಂದು ನಿಶ್ಚಯಿಸಿ ಇದರ ತತ್ತ್ವವು ಈ ಆತ್ಮನೇ ಎಂದಾಗ ಸಹಜವಾಗಿಯೇ ಆತ್ಮನಾಗಿ ನಿಂತು) ಮತ್ತೆ ವೃತ್ತಿರೂಪದಿಂದ ಹೊರಬಿದ್ದೇ ಈ ಘಟನಾ ರೂಪವನ್ನು ತಾಳುತ್ತದೆ ಎಂದೇ ಹೇಳಬೇಕು. ಇದನ್ನೆ 'ಆತ್ಮಪ್ರತ್ಯಯ' ಎಂದು ಕರೆದಿದೆ. ಇದೆಲ್ಲವೂ ವ್ಯಾವಹಾರಿಕದೃಷ್ಟಿಯಿಂದ ಆಡಿದ ಮಾತೇ ಹೊರತು ನಿಜವಾಗಲೂ ಕಾಲದಲ್ಲಿ ಕಾರ್ಯಕಾರಣಭಾವಗಳಿಗೊಳಪಟ್ಟು ಉಂಟಾಗುವ ಘಟನಾ ವಿಶೇಷದಂತೆ ಇದಲ್ಲ ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಕೆಲವರಿಗೆ ಇದಾದಾಗ ಆನಂದಾದಿಗಳ ಆವಿರ್ಭಾವವೂ ಅವರವರ ಪೂರ್ವಸಾಧನಾದಿಗಳನ್ನವಲಂಬಿಸಿ ಹೆಚ್ಚು ಕಡಿಮೆ ಪ್ರಮಾಣದಿಂದ ಆಗಬಹುದಾದರೂ ಇವೆಲ್ಲವೂ ವೃತ್ತಿಯಾದ ಹುಸಿ ತೋರಿಕೆಯೇ ಆಗಿದೆ. ತನ್ನಲ್ಲಿ ಇದೂ ಇಲ್ಲ ಎಂದು ಸಹಜವಾಗಿ ನಿಂತಿರುವುದೇ ನೆಲೆನಿಲ್ಲುವಿಕೆಯು. ಆತ್ಮನನ್ನುಳಿದು ಇನ್ನೊಂದೆಂಬುದಿಲ್ಲವೇ ಇಲ್ಲವೆಂಬ ನಿರ್ಧಾರದಲ್ಲಿ ನಿಂತಾಗ ವಿಚಾರಿಸುವದಕ್ಕೆ ಏನೂ ಉಳಿಯುವದಿಲ್ಲವಾದ್ದರಿಂದ ಈ ನೆಲೆನಿಲ್ಲುವಿಕೆಯನ್ನು ''ನಿರ್ವಿಕಲ್ಪ'' ಎಂದು ವೇದಾಂತಿಗಳು ಕರೆಯುತ್ತಾರೆ. ಇದೇ ಸಹಜಸಮಾಧಿಯು. ಇದು ಒಂದು ಅವಸ್ಥಾ ವಿಶೇಷಕ್ಕೆ ಸೇರಿದ್ದಲ್ಲ. ಆತ್ಮವಿಚಾರದ ಪರ್ಯವಸಾನವಾದಾಗ ಸಹಜವಾಗಿರುವ ತಾನೆಂಬ ಸ್ವರೂಪವೇ ಇದು.

* * * * *

# ವೇದಾಂತದ ಒಳಗಣ್ಣು

# ಪೀಠಿಕೆ

ಸಾರ್ವತ್ರಿಕ ಪೂರ್ಣಾನುಭವದ ಆಧಾರದಿಂದ ಪರಮಾರ್ಥತತ್ತ್ವವನ್ನು ಅನುಭವ ಪರ್ಯಂತವಾಗುವಂತೆ ತೋರಿಸಿಕೊಡುವ ಯೋಗ್ಯತೆಯು ವೇದಾಂತ ಶಾಸ್ತ್ರಕ್ಕೆ ಮಾತ್ರವೇ ಇರುತ್ತದೆ. ಆದ್ದರಿಂದಲೇ **"ತಾವತ್ ಗರ್ಜಂತಿ ಶಾಸ್ತ್ರಾಣಿ! ಜಂಬುಕಾ ವಿಪಿನೇ ಯಥಾ । ನ ಗರ್ಜತಿ ಮಹಾಶಕ್ತಿಃ ಯಾವತ್ ವೇದಾಂತ ಕೇಸರಿ ॥** ಎಂದು ಈ ಶಾಸ್ತ್ರದ ಘನತೆಯನ್ನು ಬಣ್ಣಿಸಿರುತ್ತಾರೆ. ಇದರ ಅರ್ಥವೇನೆಂದರೆ – ಮಹಾಶಕ್ತಿಯಾದ ಸಿಂಹವು ಗರ್ಜನೆ ಮಾಡುವದಕ್ಕೆ ಮೊದಲು ಅಡವಿಯಲ್ಲಿ ನರಿಗಳು ಜೋರಾಗಿ ಕೂಗುತ್ತಿರುತ್ತವೆ. ಸಿಂಹಗರ್ಜನೆ ಯಾದೊಡನೆಯೇ ಎಲ್ಲವೂ ಸ್ತಬ್ಧವಾಗುವಂತೆ ವೇದಾಂತವಿಜ್ಞಾನವು ಬರುವವರೆಗೆ ಸಕಲ ಶಾಸ್ತ್ರಗಳ ಸದ್ದುಗದ್ದಲವಿದ್ದೇ ಇರುತ್ತದೆ. ಯಾವಾಗ ವೇದಾಂತ ಸಿಂಹದ ಗುಡುಗು ಕೇಳಿಸಿತೋ ಆಗ ಮಿಕ್ಕ ಶಾಸ್ತ್ರಗಳೆಲ್ಲ ಸದ್ದು ಮಾಡದೆ ಸುಮ್ಮನಾಗುತ್ತವೆ, ಎಂಬುದು ಮೇಲಿನ ಶ್ಲೋಕದ ಅಭಿಪ್ರಾಯ.

ನಮಗೆ ಈ ತೋರುತ್ತಿರುವ ಎಚ್ಚರದ ಅವಸ್ಥೆಗೆ ಮಾತ್ರ ಕಟ್ಟುಬಿದ್ದು ಈ ಪ್ರಪಂಚವನ್ನೇ ಮುಖ್ಯವಾಗಿ ನಂಬಿ ಬುದ್ಧಿಯನ್ನು ಈ ಪ್ರಪಂಚಕ್ಕೆ ಮಾತ್ರವೇ ಅಡವಿಟ್ಟು (ವತ್ತೆ ಇಟ್ಟು) ಈ ಅವಸ್ಥೆಯ ಪಕ್ಷಪಾತಕ್ಕೊಳಗಾಗಿಯೇ ವೇದಾಂತೇತರ ಶಾಸ್ತ್ರಗಳು ತಮ್ಮ ವಿಚಾರ ಕ್ರಮವನ್ನು ಆರಂಭಿಸುತ್ತವೆ. ವೇದಾಂತವು ಮಾತ್ರ ಜೀವನವನ್ನು ಪರಿಪೂರ್ಣವಾಗಿ ನೋಡಿ ಜೀವನದ ಎಲ್ಲಾ ಭಾಗಗಳನ್ನೂ ನಿಷ್ಪಕ್ಷಪಾತವಾಗಿ ತೂಗಿ ತತ್ತ್ವ ನಿರ್ಣಯವನ್ನು ಮಾಡಿ ಅದನ್ನು ಸಾರ್ವತ್ರಿಕಾನುಭವದ ಆಧಾರದಿಂದ ತೋರಿಸಿ ಅನುಭವ ಪರ್ಯವಸಾಯಿಯನ್ನಾಗಿಸುವ ಶ್ರೇಷ್ಠ ಶಾಸ್ತ್ರವಾಗಿದೆ.

ಇಂಥ ವೇದಾಂತ ಶಾಸ್ತ್ರದಲ್ಲಿ ಉಪಯೋಗಿಸಿದ ಸಾಂಪ್ರದಾಯಕವಾದ ಪ್ರಕ್ರಿಯೆಯು "ಅಧ್ಯಾರೋಪ ಅಪವಾದ" ಎಂಬ ಒಂದೇ ಪ್ರಕ್ರಿಯೆಯನ್ನು ಉಪಯೋಗಿಸಿರುತ್ತದೆ. ಈ ಪ್ರಕ್ರಿಯೆಯಲ್ಲಿ ಪಂಚಕೋಶ, ದೃಗ್‌ದೃಶ್ಯ, ಅನ್ವಯವ್ಯತಿರೇಕ, ಸಾಮಾನ್ಯ ವಿಶೇಷ ಮೊದಲಾದ ಅನೇಕ ಪ್ರಕಾರಗಳಿರುತ್ತವೆ. ಈ ಎಲ್ಲವೂಗಳಲ್ಲಿ "ಅವಸ್ಥಾತ್ರಯ ವಿವೇಕ"ಎಂಬ ಪ್ರಕ್ರಿಯೆಯು ಒಂದು

ಅಸಾಧಾರಣ ಪ್ರಕ್ರಿಯೆಯು. ಬಲ್ಲವರ ಬೋಧನೆಯ ಸಹಾಯದಿಂದ ಪ್ರಕ್ರಿಯೆಯನ್ನನುಸರಿಸಿ ಜಿಜ್ಞಾಸುವು ತನ್ನ ಸ್ವಂತದ ಅನುಭವದ ಕಡೆಗೆ ಲಕ್ಷ್ಯವನ್ನು ಹರಿಸಿದ್ದಾದರೆ ನೇರವಾಗಿಯೂ ಶೀಘ್ರವಾಗಿಯೂ ತನ್ನ ನಿಜಸ್ವರೂಪವಾದ ಅದ್ವಿತೀಯ ಆತ್ಮ ಸ್ವರೂಪದಲ್ಲಿಯೇ ನೆಲೆ ನಿಲ್ಲುತ್ತಾನೆ. ಆದ್ದರಿಂದ ಈ ಅವಸ್ಥಾತ್ರಯ ಪ್ರಕ್ರಿಯೆಗೆ ಒಂದು ವೈಶಿಷ್ಟ್ಯವಿದೆ. ಈ ಕಾರಣದಿಂದಲೇ ಈ ಗ್ರಂಥದಲ್ಲಿ ಅವಸ್ಥಾತ್ರಯ ವಿಚಾರದ ಕ್ರಮವನ್ನು ಉಪನಿಷತ್ತುಗಳ ದಿಗ್ದರ್ಶನದಲ್ಲಿ ತೋರಿಸಿಕೊಟ್ಟಿದೆ. ಅವಸ್ಥಾತ್ರಯ ವಿವೇಕವೆಂದರೆ ಅವಸ್ಥೆಗಳನ್ನು ಕುರಿತು ವಿಚಾರವಲ್ಲ. ಮತ್ತೇನೆಂದರೆ ಅವಸ್ಥಾತ್ರಯ ರೂಪದಲ್ಲಿ ತೋರುವ ಪರಮಾರ್ಥತತ್ತ್ವದ ವಿಚಾರವೇ ಇಲ್ಲಿ ಪ್ರಧಾನವಾಗಿರುತ್ತದೆ, ಎಂಬುದನ್ನು ಮರೆಯದೆ ಇರಬೇಕು.

ಈ ವಿಚಾರ ವಿವೇಕಗಳಿಂದ ಸರ್ವವ್ಯವಹಾರವನ್ನೂ ಮೀರಿರುವ ಪರಮಾರ್ಥತತ್ತ್ವದಲ್ಲಿಯೇ ನೆಲೆ ನಿಲ್ಲುವಿಕೆಯು ಬರುವಂತೆಯೇ ವ್ಯವಹಾರದಲ್ಲಿ ಅತ್ಯಂತ ಉಪಯುಕ್ತವಾದ ಮೂಲಭೂತ ತತ್ತ್ವಗಳಿಗೆ (ಸತ್ಯ, ಅಹಿಂಸೆ, ಧರ್ಮ, ಆಸ್ತಿಕ್ಯ ಮುಂತಾದವುಗಳಿಗೆ) ವೇದಾಂತಶಾಸ್ತ್ರವು ಭದ್ರವಾದ ತಳಹದಿಯನ್ನು ತೋರಿಸಿ ಅವುಗಳಿಗೆ ವತ್ತಾಸರೆಯುನ್ನೊದಗಿಸುತ್ತದೆ. ಆದ್ದರಿಂದಲೇ ವೇದಾಂತಶಾಸ್ತ್ರದ ಸ್ವಭಾವವನ್ನು ಈ ಮೂರು ಮಾತುಗಳಲ್ಲಿ ವರ್ಣಿಸಬಹುದು: (1) ಜೀವನವೆಲ್ಲವನ್ನೂ ವ್ಯಾಪಿಸಿಕೊಂಡು ತನ್ನೊಳಗಿಟ್ಟುಕೊಳ್ಳುತ್ತದೆ. ಯಾವದನ್ನೂ ಹೊರಹಾಕುವದಿಲ್ಲ. (2) ಎಲ್ಲದರಲ್ಲಿಯ ಸಾರವನ್ನು ಹೀರಿಕೊಂಡು ಜೀವನದ ಪ್ರತಿಯೊಂದು ಭಾಗಕ್ಕೂ ಅದನ್ನು ವದಗಿಸಿಕೊಟ್ಟು ಪೋಷಿಸುತ್ತದೆ. (3) ವ್ಯವಹಾರವನ್ನೆಲ್ಲಾ ಮೀರಿರುವ ಪರಮಾರ್ಥತತ್ತ್ವದಲ್ಲಿ ಕೊನೆಗೆ ಪರಿಸಮಾಪ್ತಿಗೊಳಿಸುತ್ತದೆ. ಈ ಮೂರು ಮಾತುಗಳ ಸತ್ಯತೆಯನ್ನು ವಾಚಕರು ಈ ಚಿಕ್ಕ ಗ್ರಂಥದಲ್ಲಿ ನೋಡಬಹುದಾಗಿದೆ.

ರೌದ್ರಿ ಸಂವತ್ಸರದ
ಮಾಘ ಶುದ್ಧ ಚತುರ್ಥೀ
ಭಾನುವಾರ, 8–2–1981

ಸದ್ಗುರು ಪಾದರೇಣು
**ದೇವರಾಯ ಕುಲಕರ್ಣಿ**

# ವೇದಾಂತದ ಒಳಗಣ್ಣು

## ಅಧ್ಯಾಯ – 1

## ಹೊರನೋಟ – ಒಳನೋಟ

ಅಮೇರಿಕದಿಂದ ಬಂದ ಒಬ್ಬರು ಅಲ್ಲಿ ಸೈಕಾಲಜಿಯಲ್ಲಿ ಪದವಿಯನ್ನು ಪಡೆದು ಭಾರತಕ್ಕೆ ಹಿಂದಿರುಗಿದಾಗ ಕೆಲವು ಅದ್ಭುತ ಸಂಶೋಧನೆಗಳ ಬಗ್ಗೆ ಹೇಳಿದರು. ಈಗ್ಗೆ ವಿಜ್ಞಾನಿಗಳು ಮನುಷ್ಯನು ಮಲಗಿದಾಗ ಅವನಿಗೆ ಕನಸುಗಳು ಹೇಗೆ ಬೀಳುವವು? ಆಗ ಮೆದಳು ಹಾಗೂ ನರಮಂಡಲಗಳಲ್ಲಿ ಯಾವ ಯಾವ ಪರಿಣಾಮಗಳಾಗುವವು? ಎಂಬುದನ್ನು ಗುರುತಿಸಿ ತೋರಿಸುವ ಯಂತ್ರಗಳನ್ನು ತಯಾರಿಸಿರುತ್ತಾರಂತೆ. ಇಷ್ಟೇ ಅಲ್ಲದೆ ಇನ್ನೂ ಸೂಕ್ಷ್ಮ ಯಂತ್ರಗಳ ಸಹಾಯದಿಂದ ಒಬ್ಬನಿಗೆ ಮಲಗಿದಾಗ ಆಗುತ್ತಿರುವ ಕನಸುಗಳ ದೃಶ್ಯಗಳನ್ನೆಲ್ಲವನ್ನೂ ಚಿತ್ರೀಕರಿಸಿ ಒಂದಾನೊಂದು ಬಗೆಯ ರಜತಪರದೆಯ ಮೇಲೆ (ಸ್ಕ್ರೀನ್) ಆ ಚಿತ್ರಗಳು ಮೂಡುವಂತೆ ಮಾಡುವ ಅದ್ಭುತ ಶೋಧನೆಯಲ್ಲಿ ತೊಡಗಿದ್ದಾರಂತೆ. ಆಗ ಮಲಗಿದವನೊಬ್ಬ ಎದ್ದಮೇಲೆ "ನನಗೆ ಇಂತಹ ಕನಸಾಗಿತ್ತು" ಎಂದು ಹೇಳುವದಕ್ಕೆ ಮುಂಚೆಯೇ ಅವನ ಪಕ್ಕದಲ್ಲಿದ್ದವರು ಆ ದೃಶ್ಯಗಳನ್ನು ನೋಡಿಯೇಬಿಟ್ಟಿರ ಬಹುದಾಗುತ್ತದೆ. ಇದು ಇನ್ನೂ ಸಿದ್ಧವಾಗಿಲ್ಲ. ಸಂಶೋಧನೆಯಲ್ಲಿದೆಯಂತೆ. ಸಧ್ಯಕ್ಕೆ ಯಾವ ಬಗೆಯ ಕನಸು ಬಿದ್ದಿದೆ – ಹಾಗೂ ನರಮಂಡಲ ಮೆದುಳುಗಳ ಮೇಲೆ ಅದರ ಪರಿಣಾಮವೇನಾಗಿದೆ – ಎಂಬುದನ್ನು ಗೆರೆಗಳ ಮೂಲಕ – ಇಲೆಕ್ಟ್ರಿಕ್ ಕಾರ್ಡಿಯೋಗ್ರಾಫ್ (ವಿದ್ಯುಚ್ಛಕ್ತಿಯ, ಹೃದಯ ಸ್ಪಂಧನವನ್ನು ಗೆರೆಗಳಿಂದ ತೋರಿಸುವ) ಯಂತ್ರದಂತೆ ತೋರಿಸುವದನ್ನು ಮಾತ್ರ ತಯಾರಿಸಿದ್ದಾರಂತೆ.

ಇದರಂತೆಯೇ ಗಾಢ ನಿದ್ರೆಯಲ್ಲಿರುವವರಿಗೆ ಒಂದು ಬಗೆಯ ಯಂತ್ರವನ್ನು ಜೋಡಿಸಿ ಆ ಯಂತ್ರದ ಮುಖಾಂತರ ಎಚ್ಚರವಿದ್ದ ಒಬ್ಬರು ಯಾವುದಾದರೊಂದು ಭಾಷೆಯ ಕೆಲವು ಶಬ್ದಗಳನ್ನು ಹೇಳಿದರೆ ಆ ಶಬ್ದಗಳು ನಿದ್ರಿಸುವವನ ಮೆದುಳಿನ ಒಂದು ಭಾಗದಲ್ಲಿ ಪ್ರವೇಶಿಸಿ ಅಲ್ಲಿ ಸಂಗ್ರಹಿಸಲ್ಪಡುತ್ತವೆ. ನಿದ್ರೆಯಿಂದ ಎಚ್ಚೆತ್ತ ಬಳಿಕ ಆ ವ್ಯಕ್ತಿಗೆ ತಾನು ನಿದ್ರೆಯಲ್ಲಿದ್ದಾಗ ಇನ್ನೊಬ್ಬರು ಯಂತ್ರಗಳ ದ್ವಾರವಾಗಿ

ಹೇಳಿದ ಎರಡನೆಯ ಭಾಷೆಯ – ಹಿಂದೆ ಎಂದೂ ಕಲಿಯದಿರುವ – ಶಬ್ದಗಳು ನೆನಪಿಗೆ ಬರತೊಡಗುವವಂತೆ. ಇದರಿಂದ ಗಾಢ ನಿದ್ರೆಯಲ್ಲಿರುವಾಗಲೂ ಸಹ ಮೆದುಳಿನಲ್ಲಿ ಒಂದು ಪ್ರಕಾರದ ತರಂಗ ಪ್ರಸರಣೆ (ಸೂಕ್ಷ್ಮ ಅಸ್ಪಷ್ಟ) ಇದ್ದೇ ಇರುವದೆಂದೂ ಕನಸು ಹಾಗೂ ಎಚ್ಚರಗಳಲ್ಲಿ ಆ ಪ್ರಸರಣವು ತುಂಬಾ ಸ್ಥೂಲವೂ ಸ್ಪಷ್ಟವೂ ಆಗುವದೆಂದೂ ಸಿದ್ಧವಾಗಿರುವದಂತೆ. ಇದಲ್ಲದೆ ಮೇಲೆ ಹೇಳಿದ ಮೆದುಳಿನ ತರಂಗಗಳನ್ನು ರೇಖೆಯಿಂದ ತೋರಿಸುವ ಯಂತ್ರದಿಂದಲೂ ಸಹ ಗಾಢನಿದ್ರೆಯಲ್ಲಿರುವವನ ಬಗ್ಗೆ ಸೂಕ್ಷ್ಮ ಅಸ್ಪಷ್ಟ ತರಂಗಗಳೆದ್ದಿರುವದನ್ನು ಆ ಬಗೆಯ ರೇಖೆಯಲ್ಲಿ ಕಾಣಬಹುದಾಗಿದೆಯಂತೆ, ಇದರಿಂದ ವ್ಯಕ್ತಿಯೊಬ್ಬನು ಮಲಗಿದಾಗ ಅವನು ಗಾಢನಿದ್ರೆಯಲ್ಲಿರುವನೇ? ಅಥವಾ ಕನಸು ಕಾಣುತ್ತಿರುವನೆ? ಕಾಣುತ್ತಿದ್ದರೆ ಯಾವ ಬಗೆಯ ಕನಸನ್ನು ಕಾಣುತ್ತಿದ್ದಾನೆ? ಎಂಬುದನ್ನು ಕೊನೆಗೆ ಸಂಪೂರ್ಣ ಎಚ್ಚರವಾಗಿದ್ದರೂ ಸಹ ನಿದ್ರೆ ಹತ್ತಿದವನಂತೆ – ಅಥವಾ ಕನಸು ಕಂಡು ಬಡಬಡಿಸುವವನಂತೆ ನಟಿಸುತ್ತಿದ್ದಾನೆಯೇ? ಎಂಬುದನ್ನು ಕಂಡುಹಿಡಿಯ ಬಹುದಾಗಿದೆಯಂತೆ. ಇದರಿಂದ ರೋಗಿಗಳ (ವಿಶೇಷತಃ ಮನೋರೋಗ) ಹಾಗೂ ಎಚ್ಚರದಪ್ಪಿದವರ ಬಗ್ಗೆ ತಿಳಿದುಕೊಳ್ಳಲು ತುಂಬಾ ಸಹಾಯ ವಾಗುವದೆಂದೂ ಸಿದ್ಧವಾಗಿದೆಯಂತೆ. ಒಟ್ಟಿನಲ್ಲಿ ಈ ಶೋಧದ ಪ್ರಕಾರ ಮೆದುಳು – ಅಥವಾ – ಬುದ್ಧಿಯು ಕೆಲಸ ಮಾಡದೇ ಇರುವ ಗಾಢನಿದ್ರೆ ಎಂಬ ಅವಸ್ಥೆಯೇ ನಿಜವಾಗಿಲ್ಲವೆಂದೂ ಅಲ್ಲಿಯೂ ಸಹ ಅಸ್ಪಷ್ಟ–ಸೂಕ್ಷ್ಮಗಳಾದ ಮೆದುಳಿನ ತರಂಗಗಳಿದ್ದೇ ಇರುವವೆಂದೂ ಸಿದ್ಧಾಂತವಾಗಿರುತ್ತದೆ. ಅಂತೂ ವಿಜ್ಞಾನಿಗಳು ಎಚ್ಚರವನ್ನೇ ಅಲ್ಲದೆ ಕನಸು ಹಾಗೂ ಗಾಢನಿದ್ರೆಗಳ ಬಗೆಗೂ ಅದ್ಭುತ ಸಂಶೋಧನೆಗಳನ್ನು ನಡೆಸುತ್ತಿದ್ದು ಆಶ್ಚರ್ಯಕರ ಸಂಗತಿಗಳನ್ನು ಹೊರ ತೆಗೆಯುತ್ತಿದ್ದಾರೆ – ಎಂದು ವಿವರಿಸಿದರು.

ಈ ಸಂಶೋಧನೆಗಳ ಬಗ್ಗೆ ಕೇಳಿದಾಗ ಯಾರಾದರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳಬೇಕಾದದ್ದೇ ಸರಿ. ಆದರೆ – ಇನ್ನೊಂದು ಬಗೆ ವಿಚಾರ ಸರಣಿಗೆ ಇದನ್ನು ವರೆಹಚ್ಚಿ ನೋಡಿದಾಗ ಈ ಅದ್ಭುತ ಸಂಶೋಧನೆಯ ಎಲ್ಲೆಕಟ್ಟು ಎಷ್ಟು? ಎಂಬುದು ಗೊತ್ತಾಗುತ್ತದೆ. ಅದು ನಮ್ಮ ಭರತಭೂಮಿಯ ಸಂಪತ್ತಾದ ಉಪನಿಷತ್ತುಗಳಲ್ಲಿ ನಿರೂಪಿತವಾದ ಒಳದೃಷ್ಟಿಯ ವಿಚಾರಸರಣಿಯಾಗಿರುತ್ತದೆ. ಅದನ್ನು ಇಲ್ಲಿ ಸ್ವಲ್ಪದರಲ್ಲಿ ನೋಡೋಣ.

ಭೌತಿಕ ವಿಜ್ಞಾನಿಯೊಬ್ಬನು ಸೂಕ್ಷ್ಮಗ್ರಾಹಿ ಯಂತ್ರಗಳನ್ನು ತಯಾರಿಸಿ ಗಾಢ ನಿದ್ರೆಯಲ್ಲಿರುವವರ ಮೇಲೆ ಪ್ರಯೋಗಿಸಿ ಈ ಹಿಂದಿನ ನಿರ್ಣಯಗಳನ್ನು ಪ್ರತ್ಯಕ್ಷವಾಗಿ ತೋರಿಸಿ ಕೊಡುತ್ತಾನೆಂಬುದೇನೋ ಒಪ್ಪತಕ್ಕದ್ದೇ ಆಗಿದೆ. ಈತನು ಪ್ರಯೋಗ ಮಾಡುವದೆಲ್ಲವೂ ಈತನ ಎಚ್ಚರದ ಅವಸ್ಥೆಯಲ್ಲಿ – (ಎಚ್ಚರದ ಅವಸ್ಥೆಗೆ ಸೇರಿದ ಪ್ರಪಂಚದಲ್ಲಿಯ ತನಗೆ ವಿಷಯವಾಗಿ ಕಾಣುವ ಇತರರ ಬಗ್ಗೆ) ಮಾಡಿದ್ದಾಗಿದೆ. ಆದರೆ ಈ ಸಂಶೋಧಕನು ತಾನು ಸ್ವತಃ ತನ್ನ ಕನಸನ್ನು ಹೇಗೆ ಕಾಣುತ್ತಾನೆ? ಎಚ್ಚರದ ದೇಹ, ಮೆದುಳು, ಯಂತ್ರಗಳು ಕೊನೆಗೆ ಕಣ್ಣೇ ಮುಂತಾದ ಯಾವದೊಂದನ್ನಾದರೂ ತನ್ನ ಎಚ್ಚರದಿಂದ ತನ್ನ ಕನಸಿಗೆ ತೆಗೆದುಕೊಂಡು ಹೋಗಬಲ್ಲನೇ? ಅಥವಾ ಕನಸಿನ ವಸ್ತುಗಳನ್ನು ಜಾಗ್ರತ್ತಿಗೆ ತರಬಲ್ಲನೇ? ಕನಸಿಗೂ ಎಚ್ಚರಕ್ಕೂ ಜೋಡಣೆಯಾಗುವಂತೆ ಹೇಗೆ ಟೆಲಿಫೋನ್ ಮೂಲಕ ಊರಿಂದೂರಿಗೆ ಜೋಡಣೆ ಮಾಡುವರೋ ಹಾಗೆ – ಯಾವುದಾದರೊಂದು ಯಂತ್ರದಿಂದ ಸಂಪರ್ಕವನ್ನು ಕಲ್ಪಿಸಲಾದೀತೆ? ತನ್ನ ಕನಸಿನಲ್ಲಿ ಕಂಡ ಅನೇಕ ಜನಗಳ ಬಗ್ಗೆ ಅಲ್ಲಿಯೂ ಅನೇಕ ಜನಗಳನ್ನು ಪುನಃ ಹೋಗಿ ನೋಡಿ ಬರಲು ಸಾಧ್ಯವೇ? ಜಾಗ್ರತ್ತಿನ 'ನಾನು' ಹಾಗೂ ಅನೇಕ ಜನಗಳೂ ಸೇರಿ ಒಟ್ಟಿಗೆ ಎಚ್ಚರದ ಅವಸ್ಥೆ ಎನಿಸಿರುವರಲ್ಲವೇ? ಹೇಗೆ ಕನಸಿನಲ್ಲಿ ತೋರಿದ 'ನಾನು' ಹಾಗೂ ಇತರ ಜನಗಳು ಎಲ್ಲಾ ಸೇರಿ (ಕಾಲ – ದೇಶ – ಕಾರ್ಯಕಾರಣಭಾವಾದಿಗಳೆಲ್ಲವೂ ಸೇರಿ) ಕನಸಾಗಿತ್ತೋ ಹಾಗೆಯೇ ಇದೂ ತನ್ನ ಜಾಗ್ರತ್ತೆಂದಾಗುವದಿಲ್ಲವೇ? ಎಂಬುದು ಇನ್ನೊಂದು ಬಗೆಯ ವಿಚಾರ ಸರಣಿ – ಇದು ಅನುಭವ ಪ್ರಧಾನವಾದ (Subjective) ವಿಚಾರ ಸರಣಿ. ಮೊದಲಿನದು (Objective) ವಿಷಯ ಪ್ರಧಾನ ವಿಚಾರ ಸರಣಿ, ಹೊರದೃಷ್ಟಿ – ಎರಡನೆಯದು ಒಳದೃಷ್ಟಿ. 'ತಾನು' ತನ್ನಲ್ಲಿ ಕನಸು – ಕನಸಿನಲ್ಲಿ ಒಂದು ಬಗೆಯ 'ನಾನು ಇಂಥವನು' ಎಂಬ ಗ್ರಹಿಕೆ – ಬುದ್ಧಿ ಮನಸ್ಸು ಇಂದ್ರಿಯ ಪ್ರಾಣ ದೇಹ – ಹೊರಗಿನ ಪಂಚಭೂತದಿಂದಾದ ಪ್ರಪಂಚ, ಅದರಲ್ಲಿ ಅನೇಕ ಮನುಷ್ಯರು ಪ್ರಾಣಿಗಳು – ಸೂರ್ಯಚಂದ್ರಾದಿಗಳು – ನಿನ್ನೆ ಇವತ್ತು ನಾಳೆ ಎಂಬ ಅನಂತವಾದ ಕಾಲಭಾವನೆ – ಮೇಲೆ ಕೆಳಗೆ ಅತ್ತ ಇತ್ತ ಎಂಬ ದೇಶಭಾವನೆ – ಕಾರ್ಯಕಾರಣ ಭಾವನೆ ಎಲ್ಲವೂ ತತ್ಕಾಲಕ್ಕೆ ಎಚ್ಚರದಷ್ಟೇ ಸತ್ಯವೆಂಬ – ಅಥವಾ ಆಗ ಅದೇ ನಿಜವಾದ ಎಚ್ಚರವೆಂಬ ಭಾವನೆ – ಇದಲ್ಲೆವೂ ತನ್ನಲ್ಲಿ ತೋರಿ ಅಡಗಿದ ಒಂದು ದೃಶ್ಯರಾಶಿ. ಇದರಂತೆಯೇ

'ತಾನು' –ತನ್ನಲ್ಲಿ ಎಚ್ಚರ – ಎಚ್ಚರದಲ್ಲಿ 'ನಾನು ಇಂಥವನು' ಎಂಬ ಗ್ರಹಿಕೆ – ಬುದ್ಧಿ – ಮನಸ್ಸು ದೇಹ – ಜೀವರುಗಳು ಕಾಲ ದೇಹಾದಿ ಎಲ್ಲವೂ ಹಿಂದೆ ವರ್ಣಿಸಿದಂತೆ ತೋರಿ ಅಡಗುವ ದೃಶ್ಯರಾಶಿ, ಹೀಗೆ ಇಡಿಯಾದ ಎಚ್ಚರ – ಕನಸುಗಳನ್ನು ಇವುಗಳ ತೋರುವಿಕೆ ಅಡಗುವಿಕೆಗಳನ್ನು ಉಂಡೆಯಾಗಿ ನೇರಾಗಿ ಇವೆರಡನ್ನೂ ವ್ಯಾಪಿಸಿ – (ಇವೆರಡೂ ತಾನೇ ಆಗಿ) – ಇವುಗಳ ಅಸ್ತಿತ್ವವು ತನ್ನಿಂದಲೇ ಬಂದಿರುವದೆಂಬುದನ್ನು ಕಂಡಾಗ – ಇವೆರಡನ್ನೂ ಬಾಧಿಸಿ ಇವುಗಳ ಸೋಂಕು ಸ್ವಲ್ಪವೂ ಇಲ್ಲದ ತನ್ನ ಸತ್ಯ ಸ್ವಭಾವವನ್ನು ಗುರುತಿಸಿಕೊಳ್ಳಲು ವೇದಾಂತಶಾಸ್ತ್ರವು ತಿಳಿಸುತ್ತದೆ. **"ಸ್ವಪ್ನಾಂತಂ ಜಾಗರಿತಾಂತಂ ಚ ಉಭೌ ಯೇನಾನು ಪಶ್ಯತಿ ॥ ಮಹಾಂತಂ ವಿಭುಂ ಆತ್ಮಾನಂ ಮತ್ವಾಧೀರೋ ನ ಶೋಚತಿ ॥** (ಕಠ 2–1–4) ಎಂಬುದರ ಸಾರಾಂಶವನ್ನೇ ಈವರೆಗೆ ಹೇಳಿದಂತಾಗಿದೆ. ಹೀಗೆ ವೇದಾಂತಗಳ (ಉಪನಿಷತ್ತುಗಳ) ದಿಗ್ದರ್ಶನದಿಂದಲೂ ಈ ಒಳದೃಷ್ಟಿಯ ರಹಸ್ಯವನ್ನು ಬಲ್ಲ ಅನುಭಾವಿಗಳ ಬೋಧಕ್ಕನುಸರಿಸಿ ತನ್ನೆಡೆಗೆ ಹಿಂದಿರುಗಿ ನೋಡಿಕೊಳ್ಳುವದರಿಂದಲೂ ಪ್ರಾಪ್ತವಾಗುವ ಒಳನೋಟದ ಸುಳಿವು ಸಹ ಈ ಭೌತಿಕ ವಿಜ್ಞಾನಕ್ಕೆ ಗೊತ್ತಾಗಲಾರದು. ನಾನು ಈ ಜಗತ್ತಿನಲ್ಲಿ ಇಂಥ ಕಾಲ ಇಂಥ ದೇಶದಲ್ಲಿ ಇಂಥ ತಾಯಿ ತಂದೆಗಳಿಂದ ಹುಟ್ಟಿ ಹೀಗೆ ಬೆಳೆದಿರುವೆನು. ನನಗಿಂತ ಮೊದಲು ಇಲ್ಲಿ ಅನೇಕರಿದ್ದರು. ಈಗಲೂ ಅನೇಕರಿದ್ದಾರೆ. ಅವರೆಲ್ಲರಲ್ಲಿ ನಾನೊಬ್ಬ. ನಾನು ಸತ್ತಮೇಲೂ ಈ ಜಗತ್ತಿನಲ್ಲಿ ಹೀಗೆ ಅನೇಕರಿದ್ದೇ ಇರುವರು – ಇಂಥ ನಾನು ಹಾಗೂ ಈ ಇತರರೂ ಈ ಪ್ರಪಂಚಕ್ಕೆ (ಎಚ್ಚರದ ಪ್ರಪಂಚಕ್ಕೆ) ಸೇರಿದ್ದೇವೆ. ನಮಗೆ ಎಲ್ಲರಿಗೂ ಮಲಗಿದಾಗ ದೇಹದೊಳಗೆ ಕನಸು ನಿದ್ದೆಗಳು (ಎಲ್ಲರಿಗೂ ಬೇರೆ ಬೇರೆಯಾಗಿ) ಆಗುವವು ಎಂಬ ನಂಬಿಕೆಯನ್ನೇ ಸತ್ಯವೆಂದು ಇಟ್ಟುಕೊಂಡು ಹೊರಟು ಪರಿಶೋಧನೆಗೆ ತೊಡಗುವ ದೃಷ್ಟಿಯೇ ಬಾಹ್ಯದೃಷ್ಟಿ – ಹೊರನೋಟ. 'ತಾನು' ತನ್ನಲ್ಲಿ ಎಚ್ಚರ – ತನ್ನಲ್ಲಿ ಕನಸು – ಇವೆರಡೂ ತೋರಿದರೂ ಅಡಗಿದರೂ ಯಾವ ಮಾರ್ಪಾಡೂ ಇಲ್ಲದ ಕೇವಲ 'ತಾನು' ಎಂಬುದನ್ನು ಅನುಭವದಿಂದ ಕಂಡುಕೊಳ್ಳುವ ದೃಷ್ಟಿಯೇ ಪ್ರತ್ಯಕ್ ದೃಷ್ಟಿ, ಒಳನೋಟ. ಹೊರನೋಟವು ಸ್ವಾಭಾವಿಕ. ಅದನ್ನಾಧರಿಸಿದ ಭೌತಿಕ ವಿಜ್ಞಾನಕ್ಕೆ ° ÉgÀÉPÀt Ä À«µÀiÀÄUÀ¼É (Ojects) ಅದರ ಕ್ಷೇತ್ರ – ಒಳಗಿರುವ ಅನುಭವ (Intution) ದೃಷ್ಟಿಯ ಸೀಮೆಯಲ್ಲಿ ಇದಕ್ಕೆ ಪ್ರವೇಶವೇ ಇಲ್ಲ. ಈಗ

ತೋರಿಸಿರುವ ಅನುಭವಪ್ರಧಾನವಾದ ಒಳದೃಷ್ಟಿಯನ್ನು ತಿಳಿಸುವ ಕೆಲವು ಉಪನಿಷತ್ತಿನ ಉಪದೇಶಗಳನ್ನೂ ಶ್ರೀ ಶಂಕರರ ಭಾಷ್ಯದಲ್ಲಿಯ ಅನುಭವ ಪೂರ್ಣವಾದ ನಿರೂಪಣೆಗಳನ್ನೂ ಮುಂದಿನ ಅಧ್ಯಾಯದಲ್ಲಿ ವಿವರಿಸೋಣ.

* * * * *

# ಅಧ್ಯಾಯ – 2

# ಶ್ರುತಿಗಳ ಒಳದೃಷ್ಟಿಯ ಉಪದೇಶ ಕ್ರಮ

ಹಿಂದಿನ ಅಧ್ಯಾಯದಲ್ಲಿ ಭೌತಿಕ ಶಾಸ್ತ್ರದ ಹೊರನೋಟದ ಕ್ರಮಕ್ಕೂ ವೇದಾಂತದ ಒಳನೋಟದ ಕ್ರಮಕ್ಕೂ ಇರುವ ಅಂತರವನ್ನು ತೋರಿಸುವದಕ್ಕಾಗಿ ಎಚ್ಚರ–ಕನಸು–ನಿದ್ರೆಗಳ ಬಗೆಗೆ ಭಿನ್ನ ಭಿನ್ನ ವಿಚಾರ ಸರಣಿಯನ್ನು ಎತ್ತಿ ತೋರಿಸಲಾಗಿತ್ತು. ಅದರ ಸಾರಾಂಶವೇನೆಂದರೆ :–

(1) ನಾನು ಜಗತ್ತಿನಲ್ಲಿ ಹುಟ್ಟಿರುವ ಮನುಷ್ಯನು – ನನ್ನಂತೆಯೇ ಅನೇಕರು ಇಲ್ಲಿ ಇದ್ದಾರೆ. ನಾವೆಲ್ಲರೂ ಇಲ್ಲಿಯ ಕಾಲ ದೇಶ ಕಾರ್ಯಕಾರಣ ಭಾವಗಳಿಗೆ ಒಳಪಟ್ಟು ಕೆಲದಿನ ಇದ್ದು ಒಂದು ದಿನ ಸತ್ತು ಹೋಗುವೆವು. ಮುಂದೆ ಮತ್ತೆ ಪ್ರಪಂಚವು ಹೀಗೆಯೇ ಮುಂದುವರೆದು ಕೊಂಡಿರುತ್ತದೆ. ಇಂಥ ನಾನು ಈ ಜಗತ್ತಿನ ಒಂದು ಭಾಗದಲ್ಲಿ ಮಲಗಿದಾಗ ನನ್ನ ದೇಹದೊಳಗೆ ಕನಸು, ನಿದ್ರೆಗಳಾಗುವವು. ಹೀಗೆಯೇ ಇತರರಿಗೂ ಆಗುವವು ಎಂಬ ದೃಷ್ಟಿಯನ್ನಿಟ್ಟುಕೊಂಡು ವಿಚಾರಿಸುವ ಕ್ರಮವೇ ಬಾಹ್ಯದೃಷ್ಟಿ. ಭೌತಿಕ ವಿಜ್ಞಾನ–ಮನೋವಿಜ್ಞಾನ (Psychology) ಮುಂತಾದ ಶಾಸ್ತ್ರಗಳಿಗೆಲ್ಲ ಇದೇ ದೃಷ್ಟಿ ಇರುತ್ತದೆ.

(2) ಕನಸಿಗಿಂತ ಮೊದಲು ತಾನು–ತನ್ನಲ್ಲಿ ಕನಸು. ಆ ಕನಸಿನ ಜಗತ್ತಿಗೆ ಸೇರಿದಂತೆ ತೋರುವ 'ನಾನು' ಎಂಬ ಅನಿಸುವಿಕೆ ಹಾಗೂ ಅಲ್ಲಿಯ ಜಗತ್ತು ಅನೇಕ ಜನರು ಕಾಲ ದೇಹಾದಿ ಸರ್ವವೂ ತನ್ನಲ್ಲಿ ತೋರಿ ಅಡಗುವ ದೃಶ್ಯರಾಶಿಯು. ಇದರಂತೆಯೇ ಎಚ್ಚರದ ಅವಸ್ಥೆಗಿಂತ ಮೊದಲು ಬರೀ 'ತಾನು' ತನ್ನಲ್ಲಿ ಈ ಎಚ್ಚರದ ಅವಸ್ಥೆ. ಈ ಅವಸ್ಥೆಯಲ್ಲಿ ಈಗಿನ 'ನಾನು' ಹಾಗೂ ಇತರ ಜನಗಳೇ ಮುಂತಾದ ಕಾಲ ದೇಶಾದಿ ಭಾವ ಸಮೇತವಾದ ಪ್ರಪಂಚ ಎಂಬ

ಅನುಭವ ಪ್ರಧಾನ ದೃಷ್ಟಿಯಿಂದ ವಿಚಾರಿಸುವ ಕ್ರಮವು ಒಳದೃಷ್ಟಿ. ಮೊದಲಿನದು ಪ್ರಮಾಣ ಪ್ರಧಾನವಾದ ದೃಷ್ಟಿ. ಎರಡನೆಯದು ಅನುಭವ ಪ್ರಧಾನವಾದ ದೃಷ್ಟಿ. ಇಷ್ಟನ್ನು ಹಿಂದೆ ಹೇಳಿತ್ತು.

ಈಗ ಈ ಅನುಭವ ಪ್ರಧ್ಯಾನವಾದ ದೃಷ್ಟಿಯನ್ನು ಉಪನಿಷತ್ತುಗಳಲ್ಲಿ ಹಾಗೂ ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಹೇಗೆ ನಿರೂಪಿಸಿರುವರೆಂಬ ಬಗ್ಗೆ – ಎಚ್ಚರ ಕನಸುಗಳನ್ನು ಕುರಿತು – ಕೆಲವು ಉಪನಿಷತ್ತು ಮತ್ತು ಭಾಷ್ಯ ವಾಕ್ಯಗಳನ್ನು ಇಲ್ಲಿ ಅನುಸಂಧಾನ ಮಾಡೋಣ. ಅದಕ್ಕೆ ಮೊದಲು ಒಂದು ಸೂಚನೆ. ಶ್ರುತಿಯಾಗಲಿ ಶ್ರೀಶಂಕರರಾಗಲಿ ಈ ಬಗ್ಗೆ ಯಾವ ವಿಚಾರಗಳನ್ನು ಹೇಳುವರೋ ಅವುಗಳನ್ನು ಕೇವಲ ಶ್ರದ್ಧಾ ಭಕ್ತಿಗಳಿಂದ ನಂಬಿ ಒಪ್ಪಬೇಕಾದ ಪ್ರಮೇಯವೇನೂ ಇಲ್ಲಿ ಇಲ್ಲ. ಆ ಮಾತುಗಳನ್ನು ಕೇಳಿ (ಅಥವಾ ಓದಿ)ದ ಅನಂತರ ಪ್ರತಿಯೊಬ್ಬರೂ – ಅವರು ಯಾವುದೇ ಜಾತಿ – ಮತ – ಧರ್ಮ – ಲಿಂಗ – ವಯ – ದೇಶದವರಾಗಿರಲಿ, ಯಾವ ಭೇದವೂ ಇಲ್ಲದೆ ಎಲ್ಲಾ ಕಾಲದ ಎಲ್ಲಾ ಜನರೂ – ತಮ್ಮೊಳಗೇ ಹಿಂದಿರುಗಿ ನೋಡಿ ಶ್ರುತಿಯು ಹೇಳುವಂತೆಯೇ ಆಚಾರ್ಯರು ತೋರಿಸುವಂತೆಯೇ ಈಗಲೇ ಅನುಭವಕ್ಕೆ ಸಮ್ಮತವಾಗುತ್ತಿದೆಯೇ ? ವಸ್ತು ಸ್ಥಿತಿಯು ಹಾಗಿದೆಯೇ ? ಎಂಬುದನ್ನು ಪರೀಕ್ಷಿಸಿ ನೋಡಿ–ಯೋಗ್ಯ ಅಧಿಕಾರಿಗಳಾಗಿದ್ದರೆ – ಉಪದೇಶ ಸಮಕಾಲದಲ್ಲಿಯೇ ತತ್ತ್ವವನ್ನು ಕಂಡು ಅಲ್ಲಿಯೇ ನಿಲ್ಲಬಹುದಾಗಿರುವ ತತ್ತ್ವ ವಿಚಾರವಿದಾದ್ದರಿಂದ ಆ ರೀತಿಯಲ್ಲಿಯೇ ಈ ವಾಕ್ಯಗಳ ಅಭಿಪ್ರಾಯವನ್ನು ತಮ್ಮೊಳಗೇ ಕಂಡುಕೊಳ್ಳಬೇಕು. ಇದನ್ನೇ ಇಲ್ಲಿ **'ಅನುಸಂಧಾನ'** ಎಂಬ ಮಾತಿನಿಂದ ಕರೆದಿರುತ್ತದೆ. **"ಭೂತವಸ್ತು ವಿಷಯತ್ವಾಚ್ಚ ಬ್ರಹ್ಮ ವಿಜ್ಞಾನಸ್ಯ" "ಅನುಭವಾವಸಾನಂತು ಬ್ರಹ್ಮ ವಿಜ್ಞಾನಂ"** (ಸೂ–ಭಾ–1–1–2) ಬ್ರಹ್ಮ ಮೊದಲೇ ಸಿದ್ಧವಾಗಿರುವ ತತ್ತ್ವವಾದ್ದರಿಂದಲೂ ವಿಚಾರವು ಈಗಲೇ ಅನುಭವದಲ್ಲಿ ಪರ್ಯವಸಾನವಾಗಿಬಿಡುವದರಿಂದಲೂ ಇಲ್ಲಿ ಧರ್ಮಜಿಜ್ಞಾಸೆ ಯಂತೆ ಬರೀ ಶ್ರದ್ಧೆಯಿಂದ ಶ್ರುತಿ ವಾಕ್ಯಗಳನ್ನು ನಂಬಬೇಕಾದ ಪ್ರಸಂಗವೇನಿಲ್ಲ, ಎಂದೇ ಶ್ರೀ ಶಂಕರರು ಸಾರಿರುತ್ತಾರೆ. ಈಗ ಆ ಉಪದೇಶಗಳನ್ನು ಒಂದೊಂದಾಗಿ ಪರೀಕ್ಷಿಸೋಣ. ಮಾಂಡೂಕ್ಯದಲ್ಲಿ **"ಅಯಮಾತ್ಮಾ ಬ್ರಹ್ಮ – ಸೋಽಯಮಾತ್ಮಾ ಚತುಷ್ಪಾತ್"** (ಮಾಂ–2)–ಈ ತಾನು ಬ್ರಹ್ಮವು, ಬ್ರಹ್ಮವಾಗಿರುವ ತಾನು, ನಾಲ್ಕು ಬಗೆಯಾಗಿದ್ದಾನೆ, ಎಂದು ಹೇಳಿ ಮೊದಲನೆಯ ಬಗೆಯನ್ನು ವರ್ಣಿಸುವಾಗ

**"ಜಾಗರಿತಸ್ಥಾನೋ"** (ಮಾಂ–3) ಮುಂದಿನ ಈ ಬ್ರಹ್ಮವಾಗಿರುವ ತಾನು ಇಡೀ ಎಚ್ಚರದ ಅವಸ್ಥೆಯುಳ್ಳವನಾಗಿ ತೋರುವದೇ ಮೊದಲನೆಯ ಬಗೆಯು ಎಂದು ವರ್ಣಿಸಿದೆ. ಇಲ್ಲಿ ದೇಹದೊಳಗೆ 'ನಾನು' 'ನಾನು' ಎಂದು ಕೊಳ್ಳುವದಕ್ಕಿಂತಲೂ ಹಿಂದೆ ಇರುವ ಪ್ರತ್ಯಗಾತ್ಮ (ತೀರ ಒಳಗಿರುವ ತಾನು) ಎಂದು ವರ್ಣಿಸಿ ಹೇಳಿದ್ದು, ಅವನಲ್ಲಿ ಇಡೀ ಜಾಗ್ರತ್ಪ್ರಪಂಚವು ಇದೆ ಎಂದು ಹೇಳಿದ್ದು ಹೇಗೆ ಸಮಂಜಸವಾಗುತ್ತದೆ? ಏಕೆಂದರೆ ನೀವು ಹೇಳುವ ಆತ್ಮನು – 'ತಾನು' ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಅಹಂಕಾರಗಳಿಗೂ ಹಿಂದಿರುವನಾದ್ದರಿಂದ ಈ ದೇಹಾದಿಗಳ ಆಶ್ರಯದಲ್ಲಿಯೇ ಇವನಿರಬೇಕು. ದೇಹಾದಿಗಳು ಜಗತ್ತಿನೊಳಗೆ ಎಚ್ಚರದ ಪ್ರಪಂಚದೊಳಗೆ ಇರಬೇಕು–ಹೀಗಿರುವಾಗ ಈ ಇಡೀ ಪ್ರಪಂಚವೇ ಆತ್ಮನಲ್ಲಿ ಇದೆ ಎಂಬುದನ್ನು ಹೇಗೆ ನಂಬಬೇಕು? ಎಂಬುದೀಗೆ ಪ್ರಶ್ನೆ. ಇದಕ್ಕೆ ಉತ್ತರವನ್ನು ಶ್ರೀ ಶಂಕರರು ಈ ಸಂದರ್ಭದಲ್ಲಿ ಬರೆದು ಭಾಷ್ಯದಲ್ಲಿ ಹೇಳಿದ್ದಾರೆ. **"ಸರ್ವಸ್ಯ ಪ್ರಪಂಚಸ್ಯ ಸಾಧಿ ದೈವಿಕಸ್ಯ ಅನೇನಾತ್ಮನಾ ಚತುಷ್ಪಾತ್ವೇನ ವಿವಕ್ಷಿತತ್ವಾತ್"** ಅಧಿದೈವ ಸಮೇತವಾಗಿ– (ಸೂರ್ಯಚಂದ್ರನಕ್ಷತ್ರ ಸ್ವರ್ಗಾದಿ ಲೋಕಲೋಕಾಂತರ ಸಮೇತವಾಗಿ)–ಎಲ್ಲಾ ಪ್ರಪಂಚವೂ–ಎಂದರೆ ಪಂಚಮಹಾಭೂತದಿಂದಾದ ಸಕಲ ಸೃಷ್ಟಿ (ಇಡೀ ಅಧಿಭೂತ ಪ್ರಪಂಚ) ಇಲ್ಲಿರುವ ಸರ್ವಜೀವರು, ದೇಹದಿಂದ ನಾನು (ಅಹಂಕಾರ) ಎಂಬವರೆಗಿನ ಅಧ್ಯಾತ್ಮಪ್ರಪಂಚ, ಇದರಲ್ಲಿರುವ ಕಾಲ ದೇಶ ಕಾರ್ಯಕಾರಣಭಾವಸಮೇತ (ಈ ಬಗ್ಗೆ ಸೂ–ಭಾ–1–1–2 ರಲ್ಲಿ **ಅಸ್ಯಜಗತಃ** ಎಂಬ ವಾಕ್ಯದ ವಿವರಣೆಯನ್ನು ನೋಡಿರಿ)ವಾದ ಇಡೀ ಎಚ್ಚರದ ಅವಸ್ಥೆಯು ಈ ಪ್ರತ್ಯಗಾತ್ಮನಿಗೆ (ಎಂದರೆ ಈಗಿನ 'ನಾನು' ಎಂಬ ಅನಿಸುವಿಕೆಗೆ ಅರ್ಥಾತ್ ಎಚ್ಚರದ ಅವಸ್ಥೆಯು ತೋರುವದಕ್ಕೆ ಮುಂಚೆ ಇದ್ದ 'ತಾನು' ಎಂಬ ನಮ್ಮ ನಿಜ ಸ್ವರೂಪಕ್ಕೆ)–ಉಪಾಧಿಯಾಗಿರುತ್ತದೆ. ಎಂದರೆ ತನ್ನಲ್ಲಿ ಇಡೀ ಎಚ್ಚರದ ಪ್ರಚಂಚವು ಎದ್ದುಕೊಂಡು ತೋರುತ್ತಿರುವದು. ಆದ್ದರಿಂದ 'ತಾನು' ಎಂಬ ನಮ್ಮ ನಿಜ ಸ್ವರೂಪವು ಈಗಿನ 'ನಾನು' ಇಂಥವನು ಎಂಬ ಅನಿಸುವಿಕೆಯಂತೆ ಪ್ರಪಂಚದಲ್ಲಿ ಕಟ್ಟುಬಿದ್ದದ್ದಲ್ಲ. ಮತ್ತೇನೆಂದರೆ ಇಡೀ ಎಚ್ಚರದ ಪ್ರಪಂಚವೇ ಈ ತನ್ನಲ್ಲಿ ಕಟ್ಟುಬಿದ್ದಿದೆ.. ತಾನೇ ಇಡೀ ಎಚ್ಚರವನ್ನೆಲ್ಲಾ ವ್ಯಾಪಿಸಿದ್ದಾನೆ. ತಾನೇ ಇಡೀ ಎಚ್ಚರವಾಗಿರುವಂತೆ ತೋರುತ್ತಿದ್ದಾನೆ. ಸರಿಯಾಗಿ ನೋಡಿದರೆ ಹೀಗೆ ತೋರುವಾಗಲೂ ಈ ಎಚ್ಚರದ ಪ್ರಪಂಚದ ಸೋಂಕಿಲ್ಲದವನಾಗಿದ್ದಾನೆ. **ಅಂಥ**

**ತನ್ನ ಸ್ವರೂಪದ ದೃಷ್ಟಿಯಿಂದ ನೋಡಿದರೆ 'ಎಚ್ಚರದವಸ್ಥೆ' 'ತಾನು' ಎಂಬ ಎರಡಿಲ್ಲ. ಎಲ್ಲವೂ ಬರೀತಾನೇ ತಾನಾಗಿದೆ – ಎಂಬವರೆಗೂ ಅನುಭವಾನುಸಾರಿಯಾಗಿ ನಿರ್ಣಯಿಸಬಹುದಾಗಿದೆ.** ಇದೇ ಉಪನಿಷತ್ತುಗಳ ಬೋಧದ ವೈಶಿಷ್ಟ್ಯ – ಎಂಬುದು ಇಲ್ಲಿಯ ಭಾಷ್ಯಭಾಗದ ಒಟ್ಟು ಅಭಿಪ್ರಾಯವಾಗಿದೆ.

ದೇಹ ಇಂದ್ರಿಯಗಳು ಮನಸ್ಸು ಹೊರಗಿನ ಯಂತ್ರ ಸಾಮಗ್ರಿಗಳು ಮುಂತಾದ ಕಾಲ ದೇಶ ಕಾರ್ಯಕಾರಣ ಭಾವಗಳಿಗೊಳಪಟ್ಟು ಪ್ರಮಾಣಗಳಿಂದ ಹೊರಗೆ ನಮಗೆ ವಿಷಯವಾಗಿ ಕಾಣುವ ವಸ್ತುಗಳ ಹಾಗೂ ಜನಗಳ, ಪ್ರಾಣಿಗಳ ಬಗೆಗೆ ಸಂಶೋಧನೆ ನಡೆಸಲು ಹೊರಟಿರುವ ಭೌತಶಾಸ್ತ್ರಕ್ಕೂ ಇದೆಲ್ಲವನ್ನೂ ತನ್ನೊಳಗಿಟ್ಟುಕೊಂಡು ಉಂಡೆಯಾಗಿ ವಿಷಯೀಕರಿಸುವ 'ತಾನು' ಎಂಬ ದೇಶ ಕಾಲಾತೀತವಾದ, ಇಂದ್ರಿಯ ಮನಸ್ಸು ಬುದ್ಧಿ ಕೊನೆಗೆ 'ನಾನು' ಎಂಬ ಅನಿಸುವಿಕೆಗೂ ಆಚೆಗಿರುವ ಅನುಭವ ಸ್ವರೂಪವನ್ನಾಧರಿಸಿ ವಿಚಾರಿಸಿ ನಿರ್ಣಯಿಸುವ ವೇದಾಂತ ಶಾಸ್ತ್ರದ ಕ್ರಮಕ್ಕೂ ಭೂವ್ಯಾಕಾಶಗಳಷ್ಟು ಅಂತರವಾಯಿತು. ಈ ಅನುಭವ ಪ್ರಧಾನವಾದ ವಿಚಾರ ಕ್ರಮವನ್ನು, ಅದನ್ನು ಬಲ್ಲವರ ಉಪದೇಶವನ್ನನುಸರಿಸಿ ಅರಿತುಕೊಂಡಾಗ ಇಲ್ಲಿ ಹೇಳಿದ ಸಂಗತಿಗಳು ಕೂಡಲೇ ಅನುಭವಕ್ಕೆ ಬರುತ್ತವೆ. ಇದೆಲ್ಲವೂ ಎಚ್ಚರದ ಬಗೆಗಿನ ವಿಚಾರ ಕ್ರಮ.

ಇದರಂತೆಯೇ ಕನಸಿನ ಅನುಭವವೂ ಇದೆ. ವೇದಾಂತದ ವಿಚಾರ ಸರಣಿಯು ವಿಶಿಷ್ಟವಾಗಿಯೇ ಇದೆ. ಇಲ್ಲಿ ಎಚ್ಚರದ ದೃಷ್ಟಿಯಿಂದ ಕನಸನ್ನು ನೋಡಿದರೆ ಹೇಗೆ ಕಾಣುವದು? ಎಂಬುದು ಒಂದು ಕ್ರಮ–ಕನಸನ್ನು ಕನಸಿನ ಅನುಭವದ ಕಣ್ಣಿನಿಂದಲೇ ನೋಡಿದರೆ ಹೇಗೆ ಕಾಣುವದು? ಎಂಬುದು ಎರಡನೆಯ ಕ್ರಮ. ಉಪನಿಷತ್ತಿನಲ್ಲಿ ಮೊದಲು ಒಂದನೆಯ ಕ್ರಮದಂತೆಯೇ ಕನಸನ್ನು ವರ್ಣಿಸಿ ಆಮೇಲೆ ಎರಡನೆಯ ಕ್ರಮವನ್ನು ತೋರಿಸಿರುತ್ತದೆ. ಅರ್ಥಾತ್ 'ನಾನು ಇಂಥವನು' ಎಂಬುದನ್ನಿಟ್ಟುಕೊಂಡು ಕನಸನ್ನು ನೋಡುವ ಕಣ್ಣು, ಹಾಗೂ ತಾನು ತನ್ನಲ್ಲಿ ಕನಸು ಎಂಬ ಅನುಭವವನ್ನಿಟುಕೊಂಡು ನೋಡುವ ಕಣ್ಣು. ಇದನ್ನು ಶ್ರೀ ಗೌಡಪಾದರೂ ಶ್ರೀ ಶಂಕರರೂ ಶ್ರುತಿಯ ದಿಗ್ದರ್ಶನವನ್ನನುಸರಿಸಿ ಅದ್ಭುತವಾಗಿ ನಿರೂಪಿಸಿದ್ದಾರೆ. ಈ ಬಗೆಗಿನ ಶ್ರುತಿ ಹಾಗೂ ಭಾಷ್ಯವಾಕ್ಯಗಳ ಅನುಸಂಧಾನವನ್ನು ಮುಂದಿನ ಅಧ್ಯಾಯದಲ್ಲಿ ಮಾಡೋಣ. ವಾಕ್ಯಗಳ

ಅನುಸಂಧಾನಕ್ಕೆ ಮೊದಲು ಮುಂದಿನ ಲೇಖನಗಳಲ್ಲಿ ಕನಸು ಎಚ್ಚರಗಳ ವಿವೇಚನೆಯ ಮೇಲೆ ಹೇಳಿದ ಎರಡೂ ಬಗೆಯ ದೃಷ್ಟಿಯ ವಿಚಾರ ಕ್ರಮ, ಹಾಗೂ ಅವುಗಳಲ್ಲಿ ಹೊರಡುವ ನಿರ್ಣಯಗಳು, ಅದರಿಂದಾಗುವ ಲಾಭ ಇವುಗಳನ್ನು ಸಂಕ್ಷೇಪವಾಗಿ ತಿಳಿಸಲಾಗಿದೆ.

*****

## ಅಧ್ಯಾಯ – 3

# ಸ್ವಪ್ನವಿಜ್ಞಾನ

ಹಿಂದಿನ ಎರಡು ಲೇಖನಗಳಲ್ಲಿ ಭೌತಿಕ ವಿಜ್ಞಾನದ ಹೊರದೃಷ್ಟಿ ಹಾಗೂ ಶ್ರುತಿಗಳ ಉಪದೇಶದ ಒಳದೃಷ್ಟಿಗಳನ್ನು ವಿವರಿಸುತ್ತಾ ಎಚ್ಚರಕನಸುನಿದ್ರೆ ಎಂಬ ಅವಸ್ಥೆಗಳ ಬಗೆಗಿನ ವಿಚಾರದಲ್ಲಿ ಎಚ್ಚರದ ಅವಸ್ಥೆಯನ್ನು ನೋಡುವ ಒಳ ದೃಷ್ಟಿಯು ಉಪನಿಷತ್ತಿನ ಪ್ರಕಾರ ಹೇಗಿದೆ? ಎಂಬುದನ್ನು ಹೇಳಿತ್ತು. ಈಗ ಕನಸನ್ನು ನೋಡುವ ಒಳದೃಷ್ಟಿಯನ್ನು ಹೇಗೆ ಶ್ರುತಿಯಲ್ಲಿ ವಿವರಿಸಿದೆ? ಎಂಬುದನ್ನು ನೋಡೋಣ. ಎಲ್ಲಕ್ಕೂ ಮೊದಲು ತಾನು, ತನ್ನಲ್ಲಿ ಎಚ್ಚರ – ಎಚ್ಚರದಲ್ಲಿ 'ನಾನು' ಹಾಗೂ ಇತರರು ಎಂದೂ 'ತಾನು', ತನ್ನಲ್ಲಿ ಕನಸು, ಆ ಕನಸಿಗೆ ಸೇರಿದಂತೆ ತೋರಿದ 'ನಾನು' ಹಾಗೂ ಇತರರು ಮೊದಲಾದ ಎಲ್ಲ ಜಗತ್ತು. ಇದನ್ನಂತೂ ಲಕ್ಷ್ಯದಲ್ಲಿಟ್ಟೇ ವಿಚಾರಿಸಬೇಕೆಂಬ ಹಿಂದಿನ ಸೂಚನೆಯನ್ನು ಮನದಂದುಕೊಳ್ಳಬೇಕು. ಆಗಲೂ (1) ಎಚ್ಚರದ ದೃಷ್ಟಿಯಿಂದ ತನ್ನ ಕನಸನ್ನು ನೋಡಿದರೆ ಹೇಗೆ ಕಾಣುವದೆಂಬುದನ್ನೂ ಅದರಿಂದ ನಮಗೆ ಆಗುವ ಲಾಭಗಳೇನು? ಎಂಬುದನ್ನೂ ಮೊದಲು ವಿಚಾರಿಸಬೇಕು. (2) ಆಮೇಲೆ ಕನಸಿನಲ್ಲಿಯೇ ಕನಸು ಹೇಗೆ ಅನಿಸುತ್ತಿತ್ತು? ಎಂಬ ಅನುಭವದ ಆಧಾರದಿಂದ ಈ ಕನಸು ಎಚ್ಚರಗಳೆರಡಕ್ಕೂ ಸಮಾನನಾದ 'ತಾನು' ಎಂಬ ಸ್ವರೂಪದ ಕಣ್ಣಿನಿಂದ ವಿಚಾರಿಸಿದರೆ ಬರುವ ನಿರ್ಣಯಗಳೇನು, ಆಗುವ ಲಾಭವೇನು? ಎಂಬುದನ್ನೂ ವಿಚಾರಿಸಬೇಕು. ಈಗ ಮೊದಲು ಒಂದನೆಯ ಪ್ರಕಾರವನ್ನು ನೋಡೋಣ.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಎಚ್ಚರದ ಕಣ್ಣಿನಿಂದ ಕನಸನ್ನು ನೋಡಿದರೆ ಹೊರಡುವ ಕೆಲವು ನಿರ್ಣಯಗಳನ್ನು ತೆಗೆದಿರುತ್ತದೆ. ಅವುಗಳನ್ನು ಒಂದೊಂದಾಗಿ ಇಲ್ಲಿ ನೋಡೋಣ. ಇದರಿಂದ ಎಷ್ಟೋ ಕ್ಲಿಷ್ಟ ಪ್ರಶ್ನೆಗಳಿಗೆ ಸುಲಭದಲ್ಲಿಯೇ ಉತ್ತರವನ್ನು ಕಂಡುಕೊಳ್ಳಬಹುದಲ್ಲದೆ ಇಹಜೀವನದಲ್ಲಿ ಕೆಲವು ಪ್ರಯೋಜನ ಗಳನ್ನೂ ಪಡೆಯಬಹುದಾಗಿದೆ.

(1) **'ಜೀವ'**ನೆಂಬುವವನು ಈ ಜಡದೇಹಕ್ಕಿಂತಲೂ ಬೇರೆಯಾಗಿರುವ ಚೇತನನಾಗಿದ್ದು ಸತ್ತ ಬಳಿಕ ಇಲ್ಲಿ ಮಾಡಿದ ಒಳ್ಳೆಯ ಕೆಟ್ಟ ಕರ್ಮಗಳ ಫಲವನ್ನು ಲೋಕಾಂತರ ಅಥವಾ ಜನ್ಮಾಂತರವನ್ನು ಹೊಂದಿ ಅಲ್ಲಿ ಅನುಭವಿಸುವನು ಎಂದು ಸಾಮಾನ್ಯವಾಗಿ ಸರ್ವ ಧರ್ಮೀಯರೂ ಹೇಳುತ್ತಾರೆ. ಇದಕ್ಕೆ ಧರ್ಮಗ್ರಂಥದ ಅಥವಾ ಧರ್ಮ ಸ್ಥಾಪಕನಾದವನ ವಚನದ ಪ್ರಮಾಣವನ್ನೇ ಕೊಟ್ಟು ಕೇವಲ ಶ್ರದ್ಧೆಯಿಂದ ಇದನ್ನು ನಂಬಲು ಎಲ್ಲರೂ ಹೇಳುತ್ತಾರೆ. ಕೆಲವು ಪಾಶ್ಚಾತ್ಯರು ಸಂಶೋಧನೆ ನಡೆಸಿ ಹಿಂದಿನ ಜನ್ಮದ ಸ್ಮರಣೆಯುಳ್ಳವರನ್ನು ಭೇಟಿ ಮಾಡಿ ಅನೇಕ ಯುಕ್ತಿಗಳನ್ನು ಜೋಡಿಸಿ ಪುನರ್ಜನ್ಮವಿದೆ ಎಂದು ಒಪ್ಪಿ ಒಂದು ಪುಸ್ತಕವನ್ನೇ ಬರೆದು ಪ್ರಕಟಿಸಿದರು. ಅದಕ್ಕೆ ನಮ್ಮ ಹಿಂದಿನ ರಾಷ್ಟ್ರಾಧ್ಯಕ್ಷರಾದ ಶ್ರೀ ಎಸ್. ರಾಧಾಕೃಷ್ಣನ್‌ರವರು ಒಂದು ಮುನ್ನುಡಿಯನ್ನು ಬರೆದು ಈ ವಿಚಾರವನ್ನು ಪುಷ್ಟಿಗೊಳಿಸಿದ್ದಾರೆ.

ಇಷ್ಟೆಲ್ಲಾ ಇದ್ದರೂ ಕೇವಲ ಭೌತಿಕ ವಿಜ್ಞಾನವನ್ನೇ ನಂಬಿ ಭ್ರಾಂತರಾಗಿರುವ ಕೆಲವರು "ಚೈತನ್ಯವು ಭೂತಗಳ ಸಂಯೋಗದಿಂದ ಹುಟ್ಟುವದೆಂದೂ ಜನ್ಮಾಂತರ ಸ್ಮೃತಿ ಮುಂತಾದವುಗಳು ಮಾನಸಿಕ ದೋಷ ವಿಶೇಷಗಳೆಂದೂ ಹೇಳುತ್ತಾ ಸತ್ತ ಬಳಿಕ ಶರೀರದಿಂದ ಬೇರಾಗಿರುವ ಜೀವನೆಂಬುವವನಿಲ್ಲವೇ ಇಲ್ಲ." ಎಂದೇ ಹಠ ಹಿಡಿಯುತ್ತಿದ್ದಾರೆ. ಈ ಜಟಿಲವಾದ ವಾದಕ್ಕೆ ಈ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಸಾರ್ವತ್ರಿಕಾನುಭವದ ಆಧಾರದಿಂದ ಪರಿಹಾರವನ್ನು ಹೇಳಿರುತ್ತದೆ. ಅದೇನೆಂದರೆ ಆಸ್ತಿಕನಾಗಲಿ ನಾಸ್ತಿಕನಾಗಲಿ ಪ್ರತಿಯೊಬ್ಬರಿಗೂ ಕನಸುಗಳಾಗುತ್ತವೆ. ಕನಸಿನಲ್ಲಿ ನಾನು ಇದ್ದೇನೆ. ವ್ಯವಹಾರಮಾಡಿ ಸುಖದುಃಖಗಳನ್ನುಭವಿಸುವೆನು ಎಂಬುದು ಸರ್ವರಿಗೂ ಸಮ್ಮತವೇ ಆಗಿದೆ. ಇಷ್ಟಿದ್ದರೂ ಈಗಿನ ಶರೀರವೇನೂ ಕನಸಿಗೆ ಬರುವಂತಿಲ್ಲವೆಂಬುದೂ ಎಲ್ಲರಿಗೂ ಒಪ್ಪಿತವೇ ಆಗಿದೆ. ಅಂತೂ ಈಗಿನ

ಸ್ಥೂಲ ಈ ದೇಹವಿಲ್ಲದೆ 'ನಾನು' ಇರಬಲ್ಲೆ ಎಂಬುದು ಇಲ್ಲಿ ಸಹಜವಾಗಿ ಸಿದ್ಧವಾಗುತ್ತದೆ. ಇದರಿಂದ ದೇಹಕ್ಕಿಂತ ಜೀವನು ಬೇರೆಯಾಗಿರುವನೆಂಬುದನ್ನು ಬರೀ ಕುರುಡು ನಂಬಿಗೆಯಿಂದ ನಂಬಬೇಕಾಗಿಲ್ಲ. ಎಲ್ಲರ ಅನುಭವದಲ್ಲಿದೆ – ಎಂದು ಪ್ರತಿಪಾದಿಸಿರುತ್ತದೆ. ಹೀಗೆ ಸಾರ್ವತ್ರಿಕವಾದ ಅನುಭವದ ಆಧಾರದಿಂದ ದೇಹಕ್ಕಿಂತ ಭಿನ್ನನಾಗಿರುವ ಜೀವನ ಅಸ್ತಿತ್ವವನ್ನು ತೋರಿಸಿಕೊಟ್ಟಿರುವದು ಉಪನಿಷತ್ತಿಲ್ಲಿ ಮಾತ್ರವೇ ಕಂಡುಬರುತ್ತದೆ. ಎಲ್ಲ ಧರ್ಮೀಯರಿಗೂ ಈ ಉಪದೇಶವು ಅನುಭವಕ್ಕೆ ಬರತಕ್ಕದ್ದಾದ್ದರಿಂದ ಸರ್ವರೂ ಉಪನಿಷತ್ತಿನಿಂದ ಈ ಬಗ್ಗೆ ಪೂರ್ಣ ಬೆಂಬಲವನ್ನು ಪಡೆಯಬಹುದಾಗಿದೆ. ಹೀಗೆ ಅತಿ ವಾದಗ್ರಸ್ತ ಜಟಿಲ ಸಮಸ್ಯೆಗಳನ್ನು ಅತಿ ಸುಲಭವಾಗಿ ಸಾರ್ವತ್ರಿಕಾನುಭವದಿಂದ ಬಿಡಿಸಿ ತೋರಿಸುವ ಕಲೆ ಉಪನಿಷತ್ತುಗಳಲ್ಲಿದೆ.

(2) ಕನಸುಗಳಲ್ಲಿ – ಬಹಳವಾಗಿ ನಾವು ಎಚ್ಚರದಲ್ಲಿ ಯಾವ ಯಾವ ವ್ಯವಹಾರ ಮಾಡುವೆವೋ ಹೇಗೆ ಹೇಗೆ ಯೋಚಿಸುವೆವೋ ಆ ಪ್ರಕಾರಕ್ಕನುಸರಿಸಿದ ವಾಸನೆಗಳೇ ರೂಪತಾಳಿ ನಾನಾ ಬಗೆಯಾಗಿ ಕಾಣಿಸಿಕೊಳ್ಳುತ್ತಿರುತ್ತವೆ. ಚಿಕ್ಕಮಕ್ಕಳು ಹಗಲು ಆಟವಾಡಿ ರಾತ್ರಿ ಮಲಗಿದಾಗ ಬಡಬಡಿಸುವದನ್ನು (ಕನವರಿಸುವದನ್ನು) ಲಕ್ಷಿಸಿದರೆ ಆ ಹುಡುಗನು ಆ ರೀತಿಯ ಕನಸು ಕಾಣುತ್ತಿದ್ದಾನೆಂಬುದು ಗೊತ್ತಾಗುತ್ತದೆ. ಇದರಂತೆಯೇ ದೊಡ್ಡವರಿಗೂ ಇದು ಅನುಭವದಲ್ಲಿದೆ. ಈಗಿನ ವ್ಯವಹಾರದ ವಾಸನೆಯೇ ಅಲ್ಲದೆ ಬೇರೆ ಬಗೆಯ ವಿಚಿತ್ರ ಸ್ವಪ್ನಗಳಾಗುವದೂ ಉಂಟು. ಆದರೆ ಪ್ರಾಯಶಃ ಯಾವುದೇ ಸ್ವಪ್ನಗಳಾದರೂ ಅವು ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟ ಹಿಂದಿನ (ಅಥವಾ ಜನ್ಮಾಂತರದ)– ವಾಸನೆಗಳಿಗೂ ಸಂಬಂಧಿಸಿರಬಹುದೆಂದೇ ತೋರುತ್ತದೆ. ಅಂತೂ ಜಾಗ್ರದ್ವ್ಯವಹಾರದ ವಾಸನೆಯ ಫಲವಾಗಿ ಕನಸಿನಲ್ಲಿ ಸುಖ ದುಃಖಗಳನ್ನು ಅನುಭವಿಸಿದಂತೆ ಭಾಸವಾಗುವ ದೆಂಬುದು ಸಿದ್ಧವಾಗುತ್ತದೆ. ಈ ಸಾರ್ವತ್ರಿಕಾನುಭವದ ಆಧಾರದಿಂದಲೇ ಈ ಕೆಳಗಿನ ಸಂಗತಿಗಳನ್ನು ಗೊತ್ತುಪಡಿಸಬಹುದಾಗಿದೆ (ಅ) ಈಗ ಜೀವನು ಮಾಡಿದ ಒಳ್ಳೆ ಹಾಗೂ ಕೆಟ್ಟ ಕರ್ಮಗಳ ಫಲವನ್ನು ಮುಂದಿನ ಜನ್ಮದಲ್ಲಿ ಅನುಭವಿಸುವನು ಎಂಬುದಕ್ಕೆ ಬೆಂಬಲ ಸಿಕ್ಕಂತಾಗುತ್ತದೆ. (ಆ) ಇದರಿಂದ ಈಗ ಕೆಟ್ಟ ಹವ್ಯಾಸಗಳನ್ನು ಬಿಟ್ಟು ನೀತಿ – ಧರ್ಮ ಮುಂತಾದ ಒಳ್ಳೆಯ ನಡತೆಯನ್ನು ಅಭ್ಯಾಸ ಮಾಡಬೇಕೆಂಬ ನೈತಿಕ – ಧಾರ್ಮಿಕ ಆಚರಣೆಗಳಿಗೆ ಬೆಂಬಲ ಸಿಕ್ಕುತ್ತದೆ. (ಇ)

ಸದ್ವಿಚಾರ ಸದಾಚಾರಗಳನ್ನೇ ಹೆಚ್ಚಾಗಿ ಅನುಸರಿಸುವದರಿಂದ ನಾವು ಈಗಿನ ಸ್ಥಿತಿಗಿಂತಲೂ ಉತ್ತಮ ಸ್ಥತಿಯ ಜನ್ಮಗಳಿಗೆ ಹೋಗುವೆವೆಂಬುದೂ ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ ಇದಕ್ಕಿಂತ ಕೀಳು ಸ್ಥಿತಿಗೆ ಹೋಗುವೆವೆಂಬುದೂ ಇದರಿಂದಲೇ ಗೊತ್ತಾಗುತ್ತದೆ. (ಈ) ತನ್ನ ಕನಸುಗಳ ಕಡೆಗೆ ಗಮನವನ್ನು ಹರಿಸಿ ತಾನು ಎಂಥ ವಾಸನೆಗಳನ್ನು ಅಂತಃಕರಣದಲ್ಲಿ ತುಂಬಿಕೊಳ್ಳುತ್ತಿದ್ದೆ ನೆಂಬುದನ್ನು ಸ್ವಯಂ ತಾನೇ ಪರಿಶೀಲಿಸಿ ಈಗಿನ ತನ್ನ ನಡತೆಯಲ್ಲಿ ಹೇಗೆ ಬದಲಾವಣೆ ಮಾಡಿಕೊಳ್ಳಬೇಕೆಂಬುದಕ್ಕೆ ಅನುಕೂಲವಾಗುತ್ತದೆ. (ಉ) ಇದರಿಂದ ಧರ್ಮಗಳಲ್ಲಿಯೂ ಹೇಳುವ ನೀತಿ ಭಗವದ್ಭಾವನೆಗಳನ್ನು ಅಸ್ತಿತ್ವ, ಸತ್ಯ– ಶಾಂತಿ – ಅಹಿಂಸಾದಿ ಎಲ್ಲ ಧರ್ಮೀಯರಿಗೂ ಸಮಾನವಾದ ನಡತೆಗಳೇ ಮುಂತಾದವು ಗಳನ್ನು ಏಕೆ ಅನುಸರಿಸಬೇಕು? ಎಂಬ ಪ್ರಶ್ನೆಗೆ ಉತ್ತರವೂ ಸಿಕ್ಕುತ್ತವೆ. ಹೀಗೆ ಎಲ್ಲರಿಗೂ ಚಿರಪರಿಚಿತವಾಗಿರುವ ಕನಸಿನ ಅನುಭವವನ್ನು ನಿರೀಕ್ಷಿಸಿ ಅದರಿಂದ ಇಷ್ಟೊಂದು ಸಮಸ್ಯೆಗಳ ಪರಿಹಾರ ಹಾಗೂ ಸಕಲ ಧರ್ಮೀಯರಿಗೂ ಇರುವ ನಂಬಿಕೆಗಳಿಗೆ ಸಾರ್ವತ್ರಿಕಾನುಭವದ ಆಧಾರವನ್ನು ಒದಗಿಸಿ ತೋರಿಸಿದ ಕೌಶಲ್ಯವು ಉಪನಿಷತ್ತುಗಳಲ್ಲಿ ಕಂಡುಬರುತ್ತದೆ.

(3) ಇಷ್ಟೇ ಅಲ್ಲದೆ ವಿದ್ಯೆ ಅವಿದ್ಯೆಗಳ ತತ್ತ್ವವನ್ನೂ ಇದರಿಂದ ನಿರ್ಣಯಿಸಬಹುದಾಗಿದೆ. ಇಲ್ಲದ್ದನ್ನು ಇದ್ದಂತೆ ತಿಳಿಯುವದು, ನಿಜವಾಗಿರುವ ತನ್ನಸ್ಥಿತಿಯ ಅರಿವಿಲ್ಲದೆ ಇರುವದು, **ಇದೇ ಅವಿದ್ಯೆಯ ಸ್ವರೂಪ**. ಹಾಗೂ ಇಲ್ಲದ್ದನ್ನಿದ್ದಂತೆ ತೋರಿಸಿ ತನಗಿಂತ ಬೇರೆ ಇದೆ ಎನಿಸುವಂತೆ ಮಾಡಿ ಕಾಮವನ್ನು ಹುಟ್ಟಿಸಿ ಕರ್ಮ ಹಾಗೂ ಫಲಭೋಗಕ್ಕೆ ಸಿಕ್ಕಿಸುವಂತೆ ಮಾಡುವದೇ **ಅವಿದ್ಯೆಯ ಕಾರ್ಯವು** ಎಂಬುದು ಕನಸಿನ ಅನುಭವದಿಂದ ಗೊತ್ತುಪಡಿಸಬಹುದಾಗಿದೆ. ಇದರಂತೆಯೇ ನಿಜವಾಗಿರುವ ತನ್ನ ಸ್ಥಿತಿಯ ಅರಿವಾದೊಡನೆಯೇ ಈ ಇದ್ದಂತೆ ತೋರಿದ್ದು ಯಾವುದೂ ಎಂದೂ ಇರಲೇ ಇಲ್ಲವೆಂದೂ ಎಲ್ಲವೂ ತಾನೇ ತಾನಾಗಿರುವದೆಂದೂ ಯಾವಾಗ ಗೊತ್ತಾಗುವದೋ ಇದನ್ನೇ ವಿದ್ಯೆ ಎನ್ನಬೇಕು. ಎಂಬುದೂ ಸಹ ಕನಸಿನಿಂದ ಎಚ್ಚತ್ತಾಗ ಉಂಟಾಗುವ ಅನುಭವದಿಂದ ಗೊತ್ತಾಗುತ್ತದೆ. ಹೀಗೆ ವಿದ್ಯೆ ಬಂದಾಗ, ಅವಿದ್ಯೆ ಇರುವಾಗಿನ ಯಾವ ಬಂಧವೂ ಇಲ್ಲದೆ ಸ್ವತಂತ್ರನಾಗಿರುತ್ತಾನಾದ್ದರಿಂದ **ವಿದ್ಯೆಯ ಫಲವೇ ಮೋಕ್ಷ, ಅವಿದ್ಯೆಯ ಫಲವೇ ಬಂಧ** ಎಂಬುದನ್ನು ಈ ಕನಸಿನ ಅನುಭವದಿಂದಲೇ ಗೊತ್ತುಪಡಿಸ

ಬಹುದಾಗಿದೆ. ಈ ಬಗ್ಗೆ ಬ್ರಹದಾರಣ್ಯಕ 4–3–9 ರಿಂದ 14ರವರೆಗಿನ ಮಂತ್ರಗಳನ್ನೂ ಅಲ್ಲಿರುವ ಶ್ರೀ ಶಂಕರಭಾಷ್ಯವನ್ನೂ ಮನನ ಮಾಡಬೇಕು. ಅದರ ಸಾರಾಂಶವನ್ನೇ ಇಲ್ಲಿ ಈವರೆಗೆ ಕೊಟ್ಟಿದೆ. ಇದೆಲ್ಲವೂ ಎಚ್ಚರದ ದೃಷ್ಟಿಯಿಂದ ಕನಸನ್ನು ನೋಡುವ ಉಪನಿಷತ್ತಿನ ಕ್ರಮವನ್ನು ಕುರಿತು ಹೇಳಿದ್ದು. ಇನ್ನು ಕನಸಿನ ಅನುಭವದ ಕಣ್ಣಿನಿಂದ ಹಾಗೂ ಕನಸು ಎಚ್ಚರ ಎರಡಕ್ಕೂ ಆಧಾರವಾಗಿರುವ 'ತಾನು' ಎಂಬ ಅನುಭವ ಸ್ವರೂಪದ ದೃಷ್ಟಿಯಿಂದ ನೋಡಿದರೆ ಯಾವ ನಿರ್ಣಯಗಳು ಹೊರಡುವವೆಂಬುದನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ.

* * * * *

## ಅಧ್ಯಾಯ – 4

# ಸ್ವಪ್ನಾನುಭವದ ಮೂಲಕ ಆತ್ಮವಿಜ್ಞಾನ

ಕನಸಿನ ಅನುಭವದ ಆಧಾರದಿಂದ ಉಪನಿಷತ್ತುಗಳಲ್ಲಿ ನಿರೂಪಿಸಿದ ಒಂದನೆಯ ದೃಷ್ಟಿ ಎಂದರೆ ಎಚ್ಚರದ ಕಣ್ಣಿನಿಂದ ನೋಡಿದ್ದರಿಂದ ಯಾವ ಯಾವ ನಿರ್ಣಯಗಳು ಹೊರಡುವವು ಹಾಗೂ ಅವುಗಳಿಂದ ಜೀವನಕ್ಕೆ ಆಗುವ ಲಾಭಗಳೇನು? ಎಂಬುದನ್ನು ಕುರಿತು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿತ್ತು. ಈಗ ಎರಡನೆಯ ದೃಷ್ಟಿ ಎಂದರೆ ಕನಸನ್ನು ಕನಸಿನ ಅನುಭವದ ಕಣ್ಣಿಂದ ನೋಡುವ ಹಾಗೂ ಎಚ್ಚರ ಕನಸುಗಳಿಗೆ ಆಧಾರವಾದ 'ತಾನು' ಎಂಬ ಅನುಭವದ ದೃಷ್ಟಿಯಿಂದ ನೋಡುವ ಬಗೆಯನ್ನು ಈಗ ವಿವರಿಸಿ ನೋಡೋಣ.

ಮೊದಲು ಮಾಂಡೂಕ್ಯೋಪನಿಷತ್ತಿಗೆ ಶ್ರೀಗೌಡಪಾದರು ಬರೆದ ಕಾರಿಕೆಗಳಲ್ಲಿ ಎರಡನೆಯ ಪ್ರಕರಣದಲ್ಲಿ (ವೈತಥ್ಯ ಪ್ರಕರಣದಲ್ಲಿ) ಕನಸನ್ನು ಕನಸಿನ ಅನುಭವದ ದೃಷ್ಟಿಯಿಂದಲೇ ನೋಡುವ ಪ್ರಕಾರವನ್ನು ತಿಳಿಸಿರುತ್ತದೆ. ಅದರ ಸಾರಾಂಶವನ್ನು ಇಲ್ಲಿ ನೋಡೋಣ. ನಾವು ಈಗ ಎಂದರೆ ಎಚ್ಚರಕ್ಕೆ ಬಂದಾಗ 'ಆಗ ಕಂಡದ್ದು ಬರೀ ಕನಸು, ಹುಸಿತೋರಿಕೆ' ಎಂದು ಕನಸಿನ ಬಗ್ಗೆ ಅಂದುಕೊಳ್ಳುತ್ತೇವೆ. ಆದರೆ ಆ ಕನಸಿನಲ್ಲಿಯೇ ನಾವು ಇದ್ದಾಗ 'ಇದು ಕನಸು' ಎಂದು ಎಂದೂ ಗೊತ್ತಾಗುವದಿಲ್ಲ – ಆಗ ಆ ಕಾಲದಲ್ಲಿ ನಾವು ಅದನ್ನು 'ಎಚ್ಚರ' 'ಸತ್ಯ'

ಎಂದೇ ಬಗೆಯುತ್ತೇವೆ. ಈ ದೃಷ್ಟಿಯಿಂದ ನೋಡಿದರೆ 'ಕನಸು' ಎಂಬ ಹೆಸರನ್ನು ಎಚ್ಚದ ದೃಷ್ಟಿಯಿಂದ ಕೊಟ್ಟದ್ದೇ ಹೊರತು ಅಲ್ಲಿ ಹಾಗೆ ಅನುಭವದಲ್ಲಿರಲಿಲ್ಲ ಎಂದು ನಿರ್ಣಯಿಸಬೇಕಾಗುತ್ತದೆ. ಆದ್ದರಿಂದ 'ಕನಸು' ಎಂಬ ಶಬ್ದ – ಕನಸು ಎಂಬ ಪ್ರತ್ಯಯಗಳೆರಡೂ ಎಚ್ಚರಕ್ಕೆ ಸೇರಿದ್ದು ಎಂದಾಯಿತು. ಈ ದೃಷ್ಟಿಯಿಂದ ತನ್ನಲ್ಲಿ ತೋರಿ ಅಡಗುವ ದೃಶ್ಯರಾಶಿಯು ಸ್ವಪ್ನವು. ಅದರಂತೆಯೇ ಎಚ್ಚರವೂ ಸಹ ಎಂದಾಗುವದರಿಂದ ತಾನು ಎಂಬ ಆತ್ಮಸ್ವರೂಪದ–ಅನುಭವದ ದೃಷ್ಟಿಯಿಂದ – ಎಚ್ಚರ ಕನಸುಗಳೆರಡೂ ಸಮಾನವಾಗಿವೆ ಎಂದಾಗುತ್ತದೆ. ಇಲ್ಲಿ ಕೆಲವು ಆಕ್ಷೇಪಗಳು ಬರಬಹುದು. (1) ಎಚ್ಚರದಲ್ಲಿ ಇವತ್ತು ಮಾಡಿ ಅರ್ಧಕ್ಕೇ ನಿಲ್ಲಿಸಿದ ಕೆಲಸವನ್ನು ನಾಳೆ ಮುಂದುವರಿಸಿ ಪೂರೈಸುವೆವು. ಎಂದರೆ ಇವತ್ತು–ನಾಳೆ, ನಾಳಿದ್ದು, ಮುಂದಿನ ವರ್ಷ, ಹೀಗೆ ಎಚ್ಚರದ ಪ್ರಪಂಚವು ನಿತ್ಯವಾಗಿದ್ದು ನಿನ್ನೆಯದೇ ಇವತ್ತು, ಇವತ್ತಿನದೇ ನಾಳೆಗೆ ಮುಂದುವರಿದುಕೊಂಡು ಬರುತ್ತದೆ. ಆದರೆ ಕನಸು ಹಾಗಲ್ಲ. ನಿನ್ನೆಯ ಕನಸು ಇಂದು ಬಂದೀತೇ? ಒಂದೇ ರಾತ್ರಿಯಲ್ಲಿ ಅನೇಕ ಕನಸುಗಳಾಗಬಹುದಲ್ಲವೇ? ಹೀಗಿರುವಾಗ ಕನಸು ಎಚ್ಚರಗಳು ಸಮಾನವಾದವುಗಳೆಂಬುದು ಹೇಗೆ? (2) ಎಚ್ಚರದಲ್ಲಿರುವ ನಮ್ಮೆಲ್ಲರಿಗೂ ಈ ಪ್ರಪಂಚವು ಸಮಾನವಾಗಿದೆ. ಆದರೆ ಕನಸುಗಳು ಒಬ್ಬೊಬ್ಬರಿಗೂ ಬೇರೆಬೇರೆಯಾಗಿವೆಯಲ್ಲವೆ? (3) ಎಚ್ಚರದ ವಸ್ತುಗಳು ಅರ್ಥ ಕ್ರಿಯಾಕಾರಿಯಾಗಿವೆ, ಎಂದರೆ ಪ್ರಯೋಜನಕ್ಕೆ ಬರುತ್ತವೆ. ಆದ್ದರಿಂದಲೇ ನಾಳೆಗೆ ಬೇಕು ಎಂದು ಸಂಗ್ರಹಿಸುತ್ತೇವೆ. ಆದರೆ ಕನಸಿನಲ್ಲಿ ಕಂಡ ವಸ್ತುಗಳು ಯಾವ ಪ್ರಯೋಜನಕ್ಕೆ ಬಂದಾವು? (4) ಎಚ್ಚರದಲ್ಲಿ ಒಂದು ನಿಯಮವಿದೆ. ಮನುಷ್ಯ, ಪಶು, ಹೊಳೆ, ಹಳ್ಳ, ಬೆಟ್ಟ, ಎಲ್ಲವೂ ನಿಯಮಕ್ಕೊಳಪಟ್ಟು ಹಾಗೆಯೇ ಇರುತ್ತದೆ. ಆದರೆ ಕನಸಿನಲ್ಲಿ ಹೀಗಲ್ಲ. ಮನುಷ್ಯನು ಹಕ್ಕಿಯಂತೆ ಆಕಾಶದಲ್ಲಿ ಹಾರಿದಂತೆ, ಆನೆ ಸಣ್ಣ ಮರವನ್ನು ಹತ್ತಿ ನಿಂತಂತೆ, ಸತ್ತವರು ಇದ್ದಂತೆ, ಇದ್ದವರು ಸತ್ತಂತೆ ಹೇಗೂ ಆಗಬಹುದು. ಇಂಥವುಗಳೆರಡನ್ನೂ ಒಂದೇ ಬಗೆಯಾಗಿವೆ ಎಂದು ಹೇಳಬಹುದೇ? (5) ಇದಲ್ಲದೆ ಮಾನಸಶಾಸ್ತ್ರ, ವೈದ್ಯಶಾಸ್ತ್ರ ಮುಂತಾದವುಗಳಲ್ಲಿ ಕನಸುಗಳ ಮೇಲೆ ರೋಗವನ್ನು ನಿರ್ಣಯಿಸಿ ಚಿಕಿತ್ಸೆ ಮಾಡುತ್ತಾರೆ. ದೇವತೋಪಾಸಕರಿಗೆ ಇಷ್ಟ ದೇವತೆಯ ದರ್ಶನ ಸಂಭಾಷಣಾದಿಗಳು ಕನಸಿನಲ್ಲಿ ಆಗುವವಲ್ಲದೆ ಆ ಮೇರೆಗೆ ಎಚ್ಚರದಲ್ಲಿ ಫಲವೂ ಕಂಡಿರುವುದುಂಟು. ಕನಸಿನ ಕೆಟ್ಟ ಹಾಗೂ ಒಳ್ಳೆ ಲಕ್ಷಣಗಳನ್ನು

ಶ್ರುತಿಯಲ್ಲೂ ಹೇಳಿದೆ. ಹೀಗಿರುವಾಗ ಎಚ್ಚರ ಕನಸುಗಳೆರಡೂ ಸಮಾನವಾದವುಗಳೆಂದು ಹೇಳಬಹುದೇ? ಎಂಬ ಆಕ್ಷೇಪಗಳನ್ನೊಡ್ಡಬಹುದಾಗಿದೆ. ನೋಡುವದಕ್ಕೆ ಇವು ಎಷ್ಟೇ ಬಲವಾಗಿರುವ ಆಕ್ಷೇಪಣೆಗಳಾದರೂ ಅನುಭವದ ದೃಷ್ಟಿಯನ್ನವಲಂಬಿಸಿದೊಡನೆಯೇ ಇವು ಮಂಜಿನಂತೆ ಕರಗಿ ಹೋಗುವವು. ಹೇಗೆಂದರೆ:– (1) ನಿನ್ನೆ ಇವತ್ತು ನಾಳೆ ಎಂಬ ಕಾಲ ಪ್ರವಾಹವು ಸತ್ಯವಾಗಿರುವದೆಂಬ ಕಲ್ಪನೆ ಹೇಗೆ ಎಚ್ಚರದಲ್ಲಿರುವದೋ ಹಾಗೆಯೇ ಕನಸಿನಲ್ಲಿರುವಾಗಲೂ ನಿತ್ಯವಾದ ಕಾಲ ಪ್ರವಾಹವಿರುವದೆಂದೇ ನಾವು ಅಲ್ಲಿ (ಕನಸಿನಲ್ಲಿ) ತಿಳಿಯುತ್ತೇವೆ – ಅಲ್ಲಿಯೂ ವರ್ಷ, ತಿಂಗಳು, ವಾರ – ದಿನ ಎಂದು ವ್ಯವಹರಿಸುತ್ತೇವೆ. ಆಗ ಆ ಕಾಲವೇ ನಿತ್ಯ ಸತ್ಯವಾಗಿ ಕಾಣುತ್ತದೆ. ಎಚ್ಚರದಲ್ಲಿ ಆ ಕನಸಿನ ಕಾಲವು ಕಾಣುವದಿಲ್ಲವಾದ್ದರಿಂದ ಅದು ಬರೀ ಹುಸಿ ತೋರಿಕೆ ಎನ್ನುವದಾದರೆ ಈಗಿನ ಎಚ್ಚರದ ಕಾಲಭಾವನೆಯು ಕನಸಿನಲ್ಲಿ ಕಾಣುವದಿಲ್ಲವಾದ್ದರಿಂದ ಈ ಕಾಲ ಭಾವನೆಯೂ ಅಷ್ಟೇ ಹುಸಿ ಎಂದಾಗುವದಿಲ್ಲವೆ? ಆಯಾ ಕಾಲಭಾವನೆ ಆಯಾ ಅವಸ್ಥೆಗೇ ಸೇರಿದ್ದೆಂಬುದೇ ಅನುಭವ ಸಮ್ಮತ ನಿರ್ಣಯವಾದೀತೇ ಹೊರತು ಜಾಗ್ರತ್ತಿನಲ್ಲಿ ತೋರಿದ ಕಾಲಕ್ಕೆ ಕನಸಿನಲ್ಲಿ ತೋರಿದ ಕಾಲಭಾವನೆಗಿಂತ ಹೆಚ್ಚಿನ ಬೆಲೆ ಎಂದಿಗೂ ಬರಲಾರದು. (2) ಎಚ್ಚರದಲ್ಲಿರುವ ಎಲ್ಲರಿಗೂ ಆ ಪ್ರಪಂಚವು ಸಮಾನವಾಗಿಯೇ ಇರುತ್ತದೆ. (3) ಎಚ್ಚರದ ವಸ್ತುಗಳು ಎಚ್ಚರದ ವ್ಯವಹಾರಕ್ಕೆ ಉಪಯೋಗವಾಗುವಂತೆ ಕನಸಿನ ವಸ್ತುಗಳು ಕನಸಿನಲ್ಲಿ ಉಪಯುಕ್ತವಾಗಿಯೇ ಇವೆ. ಅಲ್ಲಿಯೂ ಊಟ ಮಾಡಿದರೆ ತೃಪ್ತಿ, ನೀರು ಕುಡಿದರೆ ನೀರಡಿಕೆ ಹೋಗುವದು ಮುಂತಾದ್ದು ಸಮಾನವೇ ಆಗಿರುತ್ತದೆ. ಇನ್ನು ಎಚ್ಚರಕ್ಕೆ ಕನಸಿನ ವಸ್ತುಗಳು ಉಪಯೋಗವಿಲ್ಲವಾದ್ದರಿಂದ ಅವು ಸುಳ್ಳು ಎನ್ನುವದಾದರೆ ಎಚ್ಚರದ ವಸ್ತುಗಳೂ ಕನಸಿನಲ್ಲಿ ಪ್ರಯೋಜನಕ್ಕೆ ಬರಲಾರವಾದ್ದರಿಂದ ಇವೂ ಅಷ್ಟೇ ಹುಸಿ ತೋರಿಕೆಗಳೆಂದು ಏಕೆ ನಿರ್ಣಯಿಸಬಾರದು? ಎಚ್ಚರದ ಕನ್ನಡಕದಿಂದ (ಚಾಳೀಸು) ಕನಸಿನಲ್ಲಿಯ ಪುಸ್ತಕವನ್ನು ಓದಲಾದೀತೇನು? (4) ಹೀಗೆಯೇ ಎಚ್ಚರದ ನಿಯಮ ಎಚ್ಚರಕ್ಕೇ ಸೇರಿದ್ದು. ಕನಸಿನ ನಿಯಮ ಕನಸಿಗೇ ಸೇರಿದ್ದು ಎಂದೇ ತೀರ್ಮಾನಿಸಬೇಕಾಗುತ್ತದೆ – ಮನುಷ್ಯನೊಬ್ಬನಿಗೆ ಕನಸಿನಲ್ಲಿ ಎಂಟು ಕೈಗಳಿದ್ದು ನಾಲ್ಕು ಸೊಂಡಿಲುಗಳುಳ್ಳ ಆನೆಯನ್ನೇರಿದಂತೆ ಕನಸಾಗುತ್ತದೆಂದಿಟ್ಟುಕೊಳ್ಳೋಣ.

ಎದ್ದಮೇಲೆ ಅದು ಸುಳ್ಳೆಂದೂ ಈಗ ಎರಡು ಕೈಗಳಿಂದಿರುವದೇ ತನ್ನ ನಿಜ ಸ್ವಭಾವವೆಂದೂ ಎಲ್ಲರೂ ತಿಳಿಯುತ್ತಾರೆ. ಆದರೆ ಈಗಿನ ಎರಡು ಕೈಗಳಿರುವ ಸ್ವಭಾವವೇ ನಮ್ಮ ನಿಜ ಸ್ವಭಾವವಾಗಿದ್ದರೆ ಇದು ಕನಸಿಗೇಕೆ ಬರಲಿಲ್ಲ? ಹೇಗೆ ಎಚ್ಚರಕ್ಕೆ ಅನ್ವಯಿಸಿಕೊಂಡು ಬರಲಿಲ್ಲವಾದ್ದರಿಂದ ಎಂಟು ಕೈಗಳಾಗಿ ತೋರಿದ್ದು ಹುಸಿ ಎನ್ನುವೆವೋ, ಹಾಗೆಯೆ ಇದೂ– (ಎರಡು ಕೈಗಳುಳ್ಳ ಸ್ವರೂಪವೂ)– ಕನಸಿಗೆ ಅನ್ವಯಿಸಿಕೊಂಡು ಬರಲಿಲ್ಲವಾದ್ದರಿಂದ ಇವೆರಡೂ (ಎಂದರೆ ದೇಹ ಇಂದ್ರಿಯ ಮನಸ್ಸು ಬುದ್ಧಿ ನಾನು ಇಂಥವನೆಂಬ ಅನಿಸುವಿಕೆ – ಇದಕ್ಕನುಸರಿಸಿದ ಹೊರಗಿನ ಜಗತ್ತು ಅನೇಕ ಜನಗಳು ಕಾಲ – ದೇಶ ಕಾರ್ಯಕಾರಣ ಭಾವನೆ ಮುಂತಾದ ಸಮಗ್ರ ದೃಶ್ಯರಾಶಿಯಾಗಿರುವ ಎಚ್ಚರಕನಸುಗಳೆರಡೂ) ನಮ್ಮ ನಿಜ ಸ್ವಭಾವವಲ್ಲವೆಂದೇ ನಿರ್ಣಯಿಸಬೇಕಾಗುವದು. (2) ಇನ್ನು ಮಾನಸಶಾಸ್ತ್ರ, ವೈದ್ಯಶಾಸ್ತ್ರ, ಸ್ವಪ್ನ– ಶಕುನಶಾಸ್ತ್ರ ಹಾಗೂ ಉಪಾಸನಾದಿ ಶಾಸ್ತ್ರಗಳೆಲ್ಲವೂ ಕನಸನ್ನು ಎಚ್ಚರದ ಕಣ್ಣಿನಿಂದ ಮಾತ್ರವೇ ನೋಡುವವುಗಳಾದ್ದರಿಂದ ಆ ನಿರ್ಣಯಗಳು ಪಾಕ್ಷಿಕವಾಗಿವೆ. ಎಂದರೆ ಎಚ್ಚರದ ವ್ಯವಹಾರ ದೃಷ್ಟಿಗೆ ಸೇರಿದವುಗಳಾಗಿವೆ. ಇಡೀ ಎಚ್ಚರ ಹಾಗೂ ಕನಸುಗಳ ಪರಮಾರ್ಥವೇನು? ಎಂಬುದನ್ನು ನಿರ್ಣಯಿಸ ಹೊರಟ ವೇದಾಂತದ ಒಳಗಣ್ಣಿನ ಪರೀಕ್ಷಾ ಕ್ರಮಕ್ಕೂ ಎಚ್ಚರವನ್ನು – ಅದರಲ್ಲಿ ತೋರುವ 'ನಾನು ಇಂಥವನು' ಎಂಬುದನ್ನು ಸತ್ಯವೆಂದು ಮೊದಲೇ ಗ್ರಹಿಸಿಕೊಂಡು ಕನಸನ್ನು ನೋಡ ಹೊರಟ ಇತರ ಶಾಸ್ತ್ರಗಳ ಬಹಿರ್ದೃಷ್ಟಿಯ ಕ್ರಮಕ್ಕೂ ಸಮಬಂಧವೇನು? ಇದಲ್ಲದೆ ಮೊದಲೇ ಹೇಳಿದಂತೆ – ಕನಸು ನಮ್ಮ ಅನುಭವದಲ್ಲಿದೆ. ಎಚ್ಚರವೂ ನಮ್ಮ ಅನುಭವದಲ್ಲಿದೆ. ಇದು ತೋರುವಾಗ ಅದು ಇಲ್ಲ ಎಂಬುದೂ ಅನುಭವ ಗೋಚರವಾಗಿಯೇ ಇದೆ. ಎಚ್ಚರ ಸ್ವಪ್ನಗಳನ್ನು ನಾವು ಪ್ರಮಾಣದಿಂದಾಗಲಿ, ತರ್ಕದಿಂದಾಗಲಿ, ಬುದ್ಧಿಯೇ ಮುಂತಾದವುಗಳನ್ನು ಉಪಯೋಗಿಸಿಯಾಗಲಿ, ನಂಬಿಕೆಯಿಂದಾಗಲಿ, ಇನ್ನೊಬ್ಬರ ಅಥವಾ ಶಾಸ್ತ್ರದ ಹೇಳಿಕೆಯಿಂದಾಗಲಿ ಅರಿತುಕೊಳ್ಳುವದಿಲ್ಲ. ನೇರಾಗಿ ಅನುಭವದಿಂದಲೇ ಅರಿಯುತ್ತೇವೆ. ಇಂಥ 'ತಾನು' ಎಂಬ ಅನುಭವ ಸ್ವರೂಪವಾದ ನಮ್ಮ ನಿಜ ಸ್ವಭಾವದ ದೃಷ್ಟಿಯಲ್ಲಿ ಎಚ್ಚರ ಕನಸುಗಳೆರಡೂ ಸರಿಸಮಾನವಾಗಿವೆಯೇ ಹೊರತು ಯಾವುದಕ್ಕೂ ಹೆಚ್ಚಿನ ಬೆಲೆ ಇಲ್ಲ. ಈ ಬಗ್ಗೆ ಮಾಂಡೂಕ್ಯದ ಗೌಡಪಾದಕಾರಿಕೆಯ ಎರಡನೇ ಪ್ರಕರಣದ 5 ರಿಂದ 10 ರವರೆಗಿನ ಕಾರಿಕೆ ಹಾಗೂ ಭಾಷ್ಯಗಳನ್ನು

ನೋಡಿರಿ. ಅದರ ಸಾರಾಂಶವನ್ನೇ ಈವರೆಗೆ ಹೇಳಿದ್ದಾಗಿದೆ. ಇದು **ವೇದಾಂತದ ಒಳದೃಷ್ಟಿಯ ವಿಚಾರ ಕ್ರಮವು**. ಇನ್ನು ಈ ಎರಡೂ ಅವಸ್ಥೆಗಳ ವಿವೇಕದಿಂದ ಇವುಗಳ ಪರಮಾರ್ಥನಾದ ಆತ್ಮನ ಸ್ವಭಾವವು ಹೇಗಿದೆ? ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಬೃಹದಾರಣ್ಯಕ ಉಪನಿಷತ್ತಿನಲ್ಲಿಯ ಕ್ರಮವನ್ನು ಅನುಸರಿಸಿನೋಡೋಣ. ಆಗ ಈ ವಿಚಾರಗಳಿಂದ ಜಿಜ್ಞಾಸುವಿಗೆ ಆಗುವ ಲಾಭವೇನು? ಎಂಬುದೂ ಗೊತ್ತಾಗುತ್ತದೆ.

* * * * *

## ಅಧ್ಯಾಯ – 5

# ಸ್ವಪ್ನಾನುಭವದ ಮೂಲಕ ಆತ್ಮವಿಜ್ಞಾನ

ಹಿಂದಿನ ಅಧ್ಯಾಯದಲ್ಲಿ ಮಾಂಡೂಕ್ಯಕಾರಿಕೆಯ ಕ್ರಮದಂತೆ ಎಚ್ಚರ ಕನಸುಗಳ ಸಾಮ್ಯ ವಿಚಾರವನ್ನು ತಿಳಿಸಿ – ಇಡೀ ಎಚ್ಚರ, ಇಡೀ ಕನಸು ಇವುಗಳ ತೋರುವಿಕೆ ಅಡಗುವಿಕೆಗಳನ್ನು ಅರಿಯುವ – ಬೆಳಗುವ – ಅನುಭವ ಸ್ವರೂಪನಾದ 'ತಾನು' ಎಂಬ ತತ್ತ್ವವನ್ನು ತಿಳಿಸಿಕೊಟ್ಟದ್ದಾಗಿದೆ. ಈಗ ಈ ಅನುಭವ ಸ್ವರೂಪದ ಸ್ವಭಾವವು – (ಎಂದರೆ 'ತಾನು' ಎಂಬ ನಮ್ಮ ನಿಜ ಸ್ವಭಾವವು) – ಹೇಗಿರುವದೆಂಬುದನ್ನು ಇದೇ ಎಚ್ಚರ ಕನಸುಗಳ ಮೂಲಕವೇ ಸರಿಯಾಗಿ ಪರೀಕ್ಷಿಸಿ ನೋಡೋಣ. (1) ತನ್ನಲ್ಲಿಯೇ ಎಚ್ಚರ ತನ್ನಲ್ಲಿಯೇ ಕನಸು ತೋರುವದಾದ್ದರಿಂದ ಕನಸಿನ ಹಾಗೂ ಎಚ್ಚರದ ಎಲ್ಲವೂ ಈ ತಾನೇ ಆಗಿದ್ದಾನೆ. ಎಂದರೆ ನಾವೀಗ ಸಾಮಾನ್ಯವಾಗಿ ತಿಳಿದಿರುವಂತೆ 'ನಾನು ಇಂಥ ಮನುಷ್ಯನು' ಎಂಬುದು ನಮ್ಮ ನಿಜ ಸ್ವಭಾವವಲ್ಲ. ಮತ್ತೇನೆಂದರೆ ಇಡೀ ಎಚ್ಚರದ ಅವಸ್ಥೆಯನ್ನೆಲ್ಲವನ್ನೂ, ಕನಸಿನ ಅವಸ್ಥೆಯನ್ನೆಲ್ಲವನ್ನೂ ಸ್ವಲ್ಪವೂ ಉಳಿಯದೆ ಪರಿಪೂರ್ಣವಾಗಿ ವ್ಯಾಪಿಸಿಕೊಂಡಿರುವ ಸ್ವರೂಪದ 'ತಾನು' ಎಂಬ ತತ್ತ್ವವೇ ನಮ್ಮ ನಿಜವಾದ ಸ್ವಭಾವವು ಎಂಬುದು ಏರ್ಪಡುತ್ತದೆ. ಇಲ್ಲಿ ವ್ಯಾಪಕನಾದ ತಾನು ಎಂಬ ಸ್ವಭಾವವನ್ನು ಲಕ್ಷಿಸಿದೊಡನೆಯೇ ವ್ಯಾಪ್ಯವಾದ ಎಚ್ಚರ, ಕನಸು, ಎಂಬುದು ಅದರಲ್ಲಿ ಬರೀ ಕಲ್ಪಿತವೇ ಹೊರತು ಸತ್ಯವಲ್ಲವೆಂದಾಗಿ ಬರೀ

ತಾನೇ – ಎಲ್ಲವೂ ತಾನೇ – ಎಂದಾಗುತ್ತದೆ. ಅಲೆಗಳನ್ನು ನೀರು ವ್ಯಾಪಿಸಿದೆ ಎಂದಾಗ 'ಅಲೆ' ಎಂಬುದು ಮಾತು ಮಾತ್ರ – ಕಲ್ಪನಾಮಾತ್ರ – ನೀರೇ ಎಲ್ಲವೂ ಎಂಬಂತೆಯೇ ಇದೂ ಆಗಿರುತ್ತದೆ. ಇದನ್ನೇ ಬೃಹದಾರಣ್ಯಕದಲ್ಲಿ **"ತತ್ ಯಥಾ ಮಹಾಮತ್ಸ್ಯ ಉಭೇಕೂಲೇ ಅನುಸಂಚರತಿ..."** (4–3–11) ಎಂಬ ದೃಷ್ಟಾಂತದಿಂದ ಹೇಳಿದೆ. ಒಂದು ದೊಡ್ಡ ಮೀನು ಸಮುದ್ರದಿಂದ ಒಂದು ಸಣ್ಣ ನದಿಯಲ್ಲಿ (ಮಹಾಪೂರದಲ್ಲಿ) ಪ್ರವೇಶಿಸಿದಾಗ ಆ ಹೊಳೆಯ ಎರಡೂ ದಂಡೆಯ ತುಂಬಾ ಅದೇ ವ್ಯಾಪಿಸಿರುವಂತೆ ಈ ಆತ್ಮನು ('ತಾನು') ಈ ಎರಡೂ ಅವಸ್ಥೆಗಳನ್ನೂ ಇವನೇ ತುಂಬಿಕೊಂಡಿರುತ್ತಾನೆ ಎಂಬುದು ಇದರ ತಾತ್ಪರ್ಯ. ಅಂತೂ ಆತ್ಮ ಸ್ವರೂಪವು ಸರ್ವಾತ್ಮನಾಗಿರುವದೆಂಬುದು ಒಂದನೆಯ ನಿರ್ಣಯವು. (2) ದೊಡ್ಡ ಮೀನು ಸಣ್ಣ ನದಿಯನ್ನೆಲ್ಲವನ್ನೂ ವ್ಯಾಪಿಸಿದ್ದರಿಂದ ಇದು ಆ ದಡ ಈ ದಡ ಎರಡರಲ್ಲಿ ಯಾವದೊಂದಕ್ಕೂ ಸೇರಿದ್ದಲ್ಲ. ಅತ್ತಿಂದಿತ್ತ ಇತ್ತಿಂದತ್ತ ಹೋಗುವಂತೆಯೂ ಇಲ್ಲ. ಏಕೆಂದರೆ ಇದೇ ಎರಡೂ ದಡದ ತುಂಬಾ ಇದ್ದುಬಿಟ್ಟಿದೆ. ಇದರ ಕೆಳಗಡೆಗೇ ಆ ಚಿಕ್ಕ ನದಿ ಹರಿಯಬೇಕು. ಆ ನದಿಯ ಎರಡೂ ದಡಗಳೂ ಇದರ (ಈ ದೊಡ್ಡ ಮೀನಿನ) ಮಹಾ ಕಾಯದಲ್ಲಿಯೇ ಅಡಕವಾಗಿರುತ್ತವೆ. ಹೀಗೆಯೇ ಈ 'ತಾನು' ಆತ್ಮಸ್ವರೂಪವು ಎರಡೂ ಅವಸ್ಥೆಗಳನ್ನೂ ವ್ಯಾಪಿಸಿದೆ. ಕನಸಿನಿಂದ ಎಚ್ಚರಕ್ಕೆ ಬರುವ, ಅಥವಾ ಎಚ್ಚರದಿಂದ ಕನಸಿಗೆ ಹೋಗುವ ಕೆಲಸ ಈ ಸ್ವರೂಪಕ್ಕಿಲ್ಲ. ಈ ಎರಡೂ ಅವಸ್ಥೆಗಳೇ ಈ ಆತ್ಮನಲ್ಲಿ ತೋರಿ ಅಡಗಿಕೊಳ್ಳಬೇಕು. ಎಂದರೆ ಇವುಗಳ ಹುಟ್ಟು ಹೊಂದುಗಳು ಆತ್ಮನಲ್ಲಿಯೇ ಆಗಬೇಕೇ ಹೊರತು ಆತ್ಮನೇನೂ ಒಂದವಸ್ಥೆಯಿಂದ ಇನ್ನೊಂದವಸ್ಥೆಗೆ ಹೋಗುವವ, ಅಥವಾ ಬರುವವನಲ್ಲ. ಆದ್ದರಿಂದ ಕೂಟಸ್ಥ ನಿತ್ಯಸ್ವರೂಪನು ಆತ್ಮನು. (ಎಂದರೆ ತನ್ನಲ್ಲಿ ಯಾವುದೇ ಬಗೆಯ ಚಲನೆ ಮಾರ್ಪಾಡು ಎಂಬುದು ಸ್ವಲ್ಪವೂ ಇಲ್ಲದೆ ನಿತ್ಯವೂ ಒಂದೇ ಬಗೆಯಾಗಿರುವ ಸ್ವರೂಪನು ಎಂದರ್ಥ) – ಇದು ಎರಡನೆಯ ನಿರ್ಣಯವು.

(3) ದೊಡ್ಡ ಮೀನು ಸಣ್ಣ ನದಿಯಲ್ಲಿರುವಾಗ ಇತರ ಸಣ್ಣ ಮೀನುಗಳು ಹೇಗೆ ಪ್ರವಾಹದಿಂದ ಕೊಚ್ಚಿ ಹೋಗುವವೋ ಹಾಗೆ ಈ ದೊಡ್ಡ ಮೀನಿಗೆ ಆ ಪ್ರವಾಹದಿಂದ ಕೊಂಚವೂ ಬಾಧೆಯಾಗುವದಿಲ್ಲ. ಎಂದರೆ ಇದು ಕೊಚ್ಚಿಕೊಂಡು ಹೋಗುವದಿಲ್ಲ. ಅದರಂತೆಯೇ ಎಚ್ಚರಕನಸುಗಳಲ್ಲಿಯ ಸುಖದುಃಖಾದಿ

ಭೋಗಗಳೆಂಬ, ಶೋಕ ಮೋಹಗಳೆಂಬ, ಹಸಿವು ಬಾಯಾರಿಕೆಗಳೆಂಬ ಅಥವಾ ಮುಪ್ಪು ಸಾವುಗಳೆಂಬ ಪ್ರವಾಹದ ಹೊಡೆತಕ್ಕೆ – (ಈಗಿನ 'ನಾನು' ಎಂಬ ನಮ್ಮ ಅಲ್ಪ ಸ್ವರೂಪವು ಕೊಚ್ಚಿಕೊಂಡು ಹೋಗುತ್ತಿರುವಂತೆ ಕಂಡರೂ – ಎಂದರೆ ಬದಲಾವಣೆಯಾಗುತ್ತಿರುವಂತೆ ಕಂಡರೂ) – ನಿಜವಾದ ನಮ್ಮ ಸ್ವರೂಪವಾದ ಕೇವಲ ತಾನೇ ತಾನಾದ ಆತ್ಮಸ್ವರೂಪವು ಎಂದಿಗೂ ಇವುಗಳಿಗೊಳಗಾಗದೆ ಇವುಗಳ ಸಂಗವೇ ಇಲ್ಲದೆ ಇರುತ್ತದೆ. ಅವಸ್ಥೆಯನ್ನೆಲ್ಲವನ್ನೂ ವ್ಯಾಪಿಸಿಕೊಂಡಿದ್ದರೂ ಅದರ ಸಂಗ – ಹಾಗೂ ಅದರ ಅಂಟು – ಈ ಸ್ವರೂಪಕ್ಕೆ ಸ್ವಲ್ಪವೂ ಇರುವದಿಲ್ಲ. ಇದು ಎಂದೆಂದಿಗೂ ಅಸಂಗವೇ ಆಗಿದೆ. ಈ ರೀತಿಯ ವಿವೇಕವನ್ನನುಸರಿಸಿ, ನಾವು ಈಗಿನ 'ನಾನು ಇಂಥವನು' ಎಂಬುದರಲ್ಲಿಯ ಅಭಿನಿವೇಶ – ತಾದಾತ್ಮ್ಯವನ್ನು (Identification) ಬಿಟ್ಟು ಕೇವಲ ತಾನಾಗಿ ನಿಂತರೆ ಈಗಲೇ ತಾನು ಅಸಂಗನಾಗಿರುವ ಅನುಭವವೇ ಬರುತ್ತದೆ. ಇದನ್ನೇ **"ಅಸಂಗೋ ಹಿ ಅಯಂ ಪುರುಷಃ"** (ಬೃ. 4–3–15) ಎಂದು ನಿರ್ಣಯಿಸಿರುತ್ತದೆ. ಇದು ಮೂರನೇ ನಿರ್ಣಯವು. (4) ಎಚ್ಚರ ಅಥವಾ ಕನಸು ಬಂದಾಗ ಮಾತ್ರವೇ ಈ ಆತ್ಮನು ಕರ್ತೃತ್ವ, ಭೋಕ್ತೃತ್ವ, ಅವಿದ್ಯೆ, ಕಾಮ, ಕರ್ಮ ಅದರ ಫಲಗಳಾದ ಸುಖದುಃಖಾದಿಗಳುಳ್ಳವನಾಗಿ ಕಾಣುತ್ತಾನೆ. (ಅದೂ ಸಹ ಎಚ್ಚರದಲ್ಲಿ ಅದಕ್ಕನುಸರಿಸಿದ, ಕನಸಿನಲ್ಲಿ ಅದಕ್ಕನುಸರಿಸಿದ, ಕರ್ತೃತ್ವಾದಿಗಳ್ಳುಳವನಾಗಿ ಕಾಣುತ್ತಾನೆ.) ಇವುಗಳಲ್ಲಿ ಒಂದು ಬಗೆ ಇರುವಾಗ ಇನ್ನೊಂದು ಬಗೆ ಇರುವದೇ ಇಲ್ಲ. ಇದರಿಂದ ಸಿದ್ಧವಾಗುವದೇನೆಂದರೆ – ಎಚ್ಚರ ಕನಸುಗಳಲ್ಲಿ ನಿಜವಾಗಿರುವಂತೆ ಕಂಡ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಪ್ರಾಣ ಮುಂತಾದ ಉಪಾಧಿಗಳ ಮೂಲಕವೇ ಈ ಆತ್ಮನು ಹೀಗೆ ಕರ್ತೃತ್ವಾದಿಗಳುಳ್ಳವನಾಗಿ ಕಾಣುತ್ತಾನೆಯೇ ಹೊರತು ಸ್ವಭಾವತಃ ಇವನು ಕೇವಲ ತಾನೇ ತಾನಾಗಿರುವ ಅಸಂಗನಾದ ಅನುಭವ ಸ್ವರೂಪನಾಗಿರುವದರಿಂದ ಹೀಗೆ ಕರ್ತೃಭೋಕ್ತೃವಾಗಿ ತೋರುವಾಗಲೂ ಇವನಲ್ಲಿ ಯಾವುದೇ ದೋಷವು ನಿಜವಾಗಿಲ್ಲ ಎಂದೇ ತೀರ್ಮಾನವಾಗುತ್ತದೆ. ಸಿನಿಮಾದಲ್ಲಿಯ ದೀಪದ ಬೆಳಕು (ಆರ್ಕ್‌ಲ್ಯಾಂಪ್) ಫಿಲಿಂನೊಂದಿಗೆ ಸೇರಿ ಬಣ್ಣಬಣ್ಣವಾಗಿ ಚಿತ್ರವಿಚಿತ್ರವಾಗಿ ಪರದೆಯ ಮೇಲೆ ಕಾಣುವಾಗಲೂ ಯಾವ ಬಣ್ಣ ಯಾವ ಚಲನೆಯೂ ಇಲ್ಲದೆ (ಬೆಳಕು) ಪರಿಶುದ್ಧವಾಗಿಯೇ ಇರುವದೋ

ಹಾಗೆಯೇ ಈ ತಾನು ಎಂಬ ಆತ್ಮನು ಸ್ವಭಾವತಃ ಕರ್ತೃತ್ವ ಭೋಕ್ತೃತ್ವ, ಅವಿದ್ಯೆ, ಕಾಮ, ಕರ್ಮಾದಿ ಯಾವುದರ ಸೋಂಕೂ ಇಲ್ಲದ ಸ್ವಭಾವದವನಾಗಿದ್ದಾನೆ ಎಂಬುದು ನಾಲ್ಕನೆಯ ನಿರ್ಣಯವು.

(5) ಇಡೀ ಎಚ್ಚರ ಇಡೀ ಕನಸುಗಳೆರಡನ್ನೂ ಬೆಳಗುವವನಾಗಿ (ಅರಿಯುವವನಾಗಿ)ರುವದರಿಂದ ಇವನು ಸ್ವಯಂಜ್ಯೋತಿಯು. ಬರೀ ಅರಿವಿನ ಸ್ವಭಾವದವನು. ಎಚ್ಚರ ಕನಸುಗಳಲ್ಲಿ ತೋರಿದ ಜ್ಯೋತಿಯೂ (ಸೂರ್ಯಾದಿಗಳಲ್ಲಿಯ ಬೆಳಕು) ಹಾಗೂ ಜೀವರೆಲ್ಲರಲ್ಲಿರುವ ಅರಿವೂ ಎಲ್ಲವೂ ಇವನೇ. ಆದ್ದರಿಂದ ಇವನು ಸ್ವಯಂ ಜ್ಯೋತಿಯು. ಇದನ್ನೇ "ಅತ್ರಾಯಂ ಪುರುಷಃ ಸ್ವಯಂ ಜ್ಯೋತಿರ್ಭವತಿ (ಬೃ. 4–3–9) ಎಂದು ಶ್ರುತಿಯು ಹೇಳುತ್ತದೆ. ಈ ಆತ್ಮನು ಸ್ವಯಂ ಜ್ಯೋತಿಯು ಎಂಬುದು ಐದನೆಯ ನಿರ್ಣಯವು.

ವಾಚಕರೇ ಭೌತಿಕ ವಿಜ್ಞಾನದ ಎಚ್ಚರಕನಸುಗಳ ಪರೀಕ್ಷಣಾಕ್ರಮಕ್ಕೂ ಉಪನಿಷತ್ತಿನ ಪರೀಕ್ಷಾಕ್ರಮಕ್ಕೂ ಇರುವ ಅಂತರವು ಈಗ ನಿಮಗೆಲ್ಲಾ ಮನಸ್ಸಿಗೆ ನಾಟಿತಷ್ಟೆ? ಪ್ರಮಾಣ ಪ್ರಧಾನವಾದ ಪರೀಕ್ಷಾಕ್ರಮ ಹಾಗೂ ಹೊರನೋಟ ಇವು ಭೌತಿಕಶಾಸ್ತ್ರದ ಜೀವಾಳಗಳು. ಅನುಭವಪ್ರಧಾನಪರೀಕ್ಷಾಕ್ರಮವು ಉಪನಿಷದ್ವಿಚಾರದ ಜೀವಾಳವಾಗಿರುತ್ತದೆ – ಎಂದರೆ ಪ್ರಮಾಣಗಳನ್ನು ಬಳಸುವವನಾಗಿ, ಪ್ರಮಾಣಗಳಿಗಿಂತ ಮೊದಲೇ ಸ್ವಯಂ ಸಿದ್ಧನಾಗಿರುವ ಪ್ರಮಾತೃವಿನ ನಿಜ ಸ್ವರೂಪವನ್ನೇ ಪ್ರಧಾನವಾಗಿ ಹಿಡಿದು ವಿಚಾರಿಸುವ ಕ್ರಮ ಹಾಗೂ ಈಗಿನ ನಾನೆಂಬ ಅನಿಸುವಿಕೆ ಮೊದಲುಗೊಂಡು ಸಮಗ್ರ ದೃಶ್ಯರಾಶಿಯನ್ನು ಉಂಡೆಯಾಗಿ ನೇರಾಗಿ – ವ್ಯಾಪಿಸಿ ಬಾಧಿಸಿ ಅರಿಯುವ ಕ್ರಮವೇ ಉಪನಿಷತ್ತಿನ ಕ್ರಮ ಎಂದರ್ಥ. ದೃಶ್ಯದೊಳಗಿನದನ್ನೇ ಪ್ರಧಾನವಾಗಿ ಹಿಡಿದಿರುವ ಭೌತಿಕ ವಿಜ್ಞಾನವನ್ನು, ದೃಶ್ಯವನ್ನೆಲ್ಲವನ್ನೂ ವಿಷಯೀಕರಿಸುವ ಅನುಭವವನ್ನು ಪ್ರಧಾನವಾಗಿ ಹಿಡಿಯುವ ವೇದಾಂತಕ್ಕೆ ಹೋಲಿಸಿದರೆ ಈ ಭೌತಿಕ ವಿಜ್ಞಾನವು ಯಾವುದೋ ಒಂದು ಮೂಲೆಯೇ ಹೊರತು ಹೆಚ್ಚಿನ ಬೆಲೆ ಇದಕ್ಕೆ ಬರಲಾರದು. ವ್ಯಾವಹಾರಿಕವಾಗಿ ಇದರಿಂದ ಅನೇಕ ಅದ್ಭುತ ಚಮತ್ಕೃತಿಗಳು ಜರುಗಿಸಿ ಇದು ಎಂಥವರನ್ನೂ ಬೆರಗುಗೊಳಿಸಿರಬಹುದು. ಆದರೆ ವೇದಾಂತಗಳ (ಉಪನಿಷತ್ತುಗಳ) ಕ್ರಮ ತಿಳಿದಾಗ ಇದರ ಸ್ಥಾನವೇನು? ಎಂಬುದು ಸ್ಪಷ್ಟವಾಗಿ

ಗೊತ್ತಾಗಿಬಿಡುವದು ಇರಲಿ. ಈಗ ಎರಡವಸ್ಥೆಗಳ ಪರೀಕ್ಷೆಯಿಂದ ಆತ್ಮನು ಅಸಂಗನು ಮುಂತಾದ ನಿರ್ಣಯಗಳನ್ನು ನೋಡಿದ್ದಾಗಿದೆಯಷ್ಟೇ? ಈಗ ಅವಸ್ಥೆಯಾದ ನಿದ್ರೆಯನ್ನು ನೋಡುವ ಅನುಭವ ಪ್ರಧಾನವಾದ ಕ್ರಮವನ್ನು ಮುಂದಿನ ಅಧ್ಯಾಯಗಳಲ್ಲಿ ನೋಡೋಣ.

* * * * *

## ಅಧ್ಯಾಯ – 6

# ಉಪನಿಷತ್ತಿನಂತೆ ನಿದ್ರಾನುಭವದ ವಿಮರ್ಶೆ, ಸದ್ರೂಪ – ಚಿದ್ರೂಪ

ಹಿಂದಿನ ಅಧ್ಯಾಯದಲ್ಲಿ ಭೌತಿಕ ವಿಜ್ಞಾನದವರ ಹೊರದೃಷ್ಟಿಯ (ಪ್ರಮಾಣ ಪ್ರಧಾನ ದೃಷ್ಟಿಯ) ಪರೀಕ್ಷೆಯಲ್ಲಿ ಎಚ್ಚರ ಕನಸುಗಳ ಬಗೆಗಿನ ಗ್ರಹಿಕೆಗಳನ್ನೂ ಉಪನಿಷತ್ತುಗಳು ಹೇಳುವ ಒಳದೃಷ್ಟಿಯ (ಅನುಭವ ಪ್ರಧಾನ) ಪರೀಕ್ಷೆಯಿಂದ ಹೊರಡುವ ನಿರ್ಣಯಗಳನ್ನೂ ತೋರಿಸುತ್ತಾ ಬಂದು "ನಾವು ಎಚ್ಚರದ ಪ್ರಪಂಚಕ್ಕೆ ಸೇರಿದವರು. ಇಲ್ಲಿ ನಾವು ಮಲಗಿದಾಗ ದೇಹದೊಳಗಡೆ ಕನಸುಗಳಾಗುತ್ತವೆ." ಎಂದಿಟ್ಟುಕೊಂಡ ಭೌತಿಕವಿಜ್ಞಾನದ ಗ್ರಹಿಕೆಗೂ "ತಾನು, ತನ್ನಲ್ಲಿ ಇಡೀ ಎಚ್ಚರ, ತಾನು ತನ್ನಲ್ಲಿ ಇಡೀ ಕನಸು ತೋರಿ ಅಡಗುವದು ಅನುಭವ ಗೋಚರ ವಾಗಿರುವದರಿಂದ" ಈ 'ತಾನು' ಎಂಬ ನಮ್ಮೆಲ್ಲರ ನಿಜಸ್ವರೂಪವು (1) ಸರ್ವವ್ಯಾಪಿ, (2) ಅಸಂಗ, (3) ಕೂಟಸ್ಥನಿತ್ಯವಾದದ್ದು, (4) ಕರ್ತೃಭೋಕ್ತೃವಲ್ಲದ್ದು, ಸುಖದುಃಖ ಅವಿದ್ಯೆ ಕಾಮ ಕರ್ಮಾದಿಗಳ ಸೋಂಕಿಲ್ಲದ್ದು, (5) ಸ್ವಯಂಜ್ಯೋತಿಯಾಗಿರತಕ್ಕದ್ದು ಮುಂತಾದ ನಿರ್ಣಯಗಳನ್ನು ತೆಗೆದಿರುವ ಉಪನಿಷತ್ತಿನ ವಿಚಾರಕ್ರಮಕ್ಕೂ ಇರುವ ವ್ಯತ್ಯಾಸವನ್ನು ತೋರಿಸುತ್ತಾ ಬಂದದ್ದಾಗಿದೆ. ಭೌತಿಕವಿಜ್ಞಾನದ ಪರೀಕ್ಷಾ ಕ್ರಮದಿಂದ ನಮಗೆ ಲೌಕಿಕ ವ್ಯವಹಾರದಲ್ಲಿ ಕೆಲಮಟ್ಟಿಗೆ ಸ್ವಲ್ಪ ಪ್ರಯೋಜನಗಳು ಆಗಬಹುದಾದರೂ ಉಪನಿಷತ್ತಿನ ವಿಚಾರ ಕ್ರಮದಂತೆ ಹೋಗಿ ಈಗಿನ 'ನಾನು ಇಂಥವನು'

ಎಂಬುದರಲ್ಲಿಯ ತಾದಾತ್ಮ್ಯ ಭಾವವನ್ನು (Identification) ಕಳಚಿಕೊಂಡು ಕೇವಲಾನುಭವ ಸ್ವರೂಪನಾದ ತಾನಾಗಿ ನಿಲ್ಲುವದರಿಂದಾಗುವ– (1) ಈಗಲೇ ಸರ್ವ ಸಂಸಾರ ದುಃಖದಿಂದ ಬಿಡುಗಡೆ – ಎಂಬ ಪರಮ ಪ್ರಯೋಜನವೂ (2) ವಿಚಾರವು ಇಲ್ಲಿಗೆ ಮುಗಿಯಿತು ಇನ್ನು ಮುಂದೆ ಯಾವ ಕಾಲ ದೇಶ ಕಾರ್ಯಕಾರಣಾದಿಭಾವಗಳ ಹಂಗೂ ಉಳಿಯಲಿಲ್ಲವೆಂಬ ಪರಮಾರ್ಥ ತತ್ತ್ವದರ್ಶನವೆಂಬ – (ಅರ್ಥಾತ್ ಜಿಜ್ಞಾಸಾ ಪರಿಸಮಾಪ್ತಿ ಎಂಬ) – ಉತ್ತಮ ಪ್ರಯೋಜನವು ಭೌತಿಕ ವಿಜ್ಞಾನದ ಬೆನ್ನು ಹತ್ತಿದರೆ ಎಂದೂ ಸಿಕ್ಕಲಾರದೆಂಬುದನ್ನು ಸ್ಪಷ್ಟವೇ ಇದೆ. ಈಗ ಅಸಂಗಾದಿ ಸ್ವಭಾವದ ನಮ್ಮ ಸ್ವರೂಪದಲ್ಲಿ ನೆಲೆ ನಿಲ್ಲಲು ಅನುಕೂಲವಾಗುವದಕ್ಕೆ ಉಪನಿಷತ್ತುಗಳಲ್ಲಿ ತಿಳಿಸಿದಂತೆ ಗಾಢನಿದ್ರೆಯ ವಿಚಾರವನ್ನು ಅನುಭವ ಪ್ರಧಾನ ದೃಷ್ಟಿಯಿಂದಲೇ ಮಾಡೋಣ.

ಇಲ್ಲಿಯೂ ಶಾಸ್ತ್ರವು ಅಧ್ಯಾರೋಪಿತ ದೃಷ್ಟಿ, ಎಂದರೆ ಎಚ್ಚರವನ್ನೇ ಪ್ರಧಾನವಾಗಿಟ್ಟುಕೊಂಡು ನೋಡುವ ದೃಷ್ಟಿಯನ್ನೇ ಮೊದಲು ಆರಂಭಿಸುತ್ತದೆ. ಆಮೇಲೆ ನಿದ್ರಾನುಭವ ಹಾಗೂ ಎಚ್ಚರದ ಅನುಭವಗಳನ್ನು ಜೋಡಿಸಿ ನೋಡಿದರೆ ಬರುವ ಕೆಲವು ನಿರ್ಣಯಗಳನ್ನು ಶಾಸ್ತ್ರವು ತೋರಿಸುತ್ತದೆ. ಇದೂ ಸಹ ಶಾಸ್ತ್ರೀಯ ಅಧ್ಯಾರೋಪ ದೃಷ್ಟಿ – ಎಂದರೆ ಶಾಸ್ತ್ರವೇ ಕಲ್ಪನೆ ಮಾಡಿ ತೋರಿಸುವ ದೃಷ್ಟಿ. ಇದಾದ ಅನಂತರ ಕೇವಲ ಅನುಭವದ ದೃಷ್ಟಿಯನ್ನು ಕೊಟ್ಟು ಎಲ್ಲ ಅಧ್ಯಾರೋಪಗಳನ್ನೂ ಅಲ್ಲಗಳೆದು ಅದ್ವಿತೀಯನಾದ ಆತ್ಮಸ್ವರೂಪಾನುಭವದಲ್ಲಿ ಜಿಜ್ಞಾಸುವನ್ನು ನೆಲೆನಿಲ್ಲಿಸುವ ದೃಷ್ಟಿಯನ್ನು ಶಾಸ್ತ್ರದಲ್ಲಿ ಉಪದೇಶಿಸಿರುತ್ತದೆ. ಇವುಗಳನ್ನೀಗ ಕ್ರಮವಾಗಿ ಹಿಂದಿನಂತೆಯೇ ಪುನಃ ಮಾಂಡೂಕ್ಯ–ಹಾಗೂ ಬ್ರಹದಾರಣ್ಯಕ ಉಪನಿಷತ್ತುಗಳ ಸಹಾಯದಿಂದ ಪರಿಶೀಲಿಸೋಣ :–

ಸಾಮಾನ್ಯ ಮನುಷ್ಯನು ನಾನು ಮಲಗುತ್ತೇನೆ. ನನಗೆ ನಿದ್ರೆ ಹತ್ತುತ್ತದೆ. ಎಂದರೆ ದೇಹದೊಳಗೆ ಇಂದ್ರಿಯ ಮನಸ್ಸು ಮುಂತಾದವುಗಳು ಕೆಲಸ ಮಾಡದೆ ವಿಶ್ರಾಂತಿಯನ್ನು ತಕ್ಕೊಳ್ಳುತ್ತವೆ. ಆಗ ನನಗೆ ನಿದ್ರೆ ಬರುತ್ತದೆ. ಹೊರಗೆ ಎಚ್ಚರದ ಪ್ರಪಂಚ ಹಾಗೂ ನನ್ನ ದೇಹಾದಿಗಳು ಮೊದಲಿನಂತೆಯೇ ಇದ್ದರೂ ನನಗೆ ನಿದ್ರೆ ಹತ್ತಿದ್ದರಿಂದ ಅದು ಗೊತ್ತಾಗಲಿಲ್ಲ. ಅರ್ಥಾತ್ ಎಚ್ಚರದ ಪ್ರಪಂಚಕ್ಕೆ ಸೇರಿದ ನನಗೇ ನಿದ್ರೆ ಬರುತ್ತದೆ ಎಂದೇ ತಿಳಿಯುತ್ತಾನೆ.

ಈ ಗ್ರಹಿಕೆಯನ್ನು ಮೂಲವಾಗಿಟ್ಟುಕೊಂಡು ನಿದ್ರಾನುಭವದ ಕಡೆಗೆ ಲಕ್ಷ್ಯವನ್ನು ಎಳೆಯುವದಕ್ಕೋಸುಗ ಮೊದಲು ಉಪನಿಷತ್ತಿನಲ್ಲಿ – **"ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ॥ ಕಂಚನ ಸ್ವಪ್ನಂ ಪಶ್ಯತಿ ತತ್ ಸುಷುಪ್ತಮ್"** (ಮಾಂ. ಮಂ – 5) ಎಂದು ಆರಂಭಿಸುತ್ತದೆ. ಎಲ್ಲಿ ಯಾವ ಕನಸೂ ಕಾಣುವುದಿಲ್ಲವೋ, ಎಲ್ಲಿ – ಬಯಸಲು ಇನ್ನೊಂದು ವಸ್ತುವೇ ಇಲ್ಲದ್ದರಿಂದ – ಯಾವ ಕಾಮನೆಯೂ ಇಲ್ಲವೋ ಅದು ಸುಷುಪ್ತಿ ಎಂಬ ಶಬ್ದಕ್ಕೆ ಅರ್ಥವು ಎಂದು ಹೇಳಿ ಎಚ್ಚರ, ಕನಸುಗಳಿಲ್ಲದ ಅನುಭವದ ಕಡೆಗೆ ನಮ್ಮ ಗಮನವನ್ನು ಹರಿಸಿ 'ನಿದ್ರೆ'ಯೆಂದರೆ "ನಾನು ಕೋಣೆಯಲ್ಲಿ ಹಾಸಿಗೆಯ ಮೇಲೆ ಬಿದ್ದಿರುತ್ತೇನೆ. ಇಂದ್ರಿಯಗಳೂ ಮನಸ್ಸೂ ದಣಿದು ಸುಮ್ಮನಾಗುತ್ತವೆ. ಆಗಲೂ ಎಚ್ಚರದ ಪ್ರಪಂಚವು ಹಾಗೆಯೇ ಇರುತ್ತದೆ" ಎಂಬ ಗ್ರಹಿಕೆಗಳನ್ನು ಅನುಭವವನ್ನು ಲಕ್ಷಿಸುವ ಮೂಲಕ ಬಿಡಿಸಿ ಈಗಿನ 'ನಾನು' 'ಇನ್ನೊಂದು' ಎಂಬ ಭೇದವಿಲ್ಲದ ತನ್ನ ಇರುವಿಕೆಯ ಕಡೆಗೆ ನಮ್ಮ ಲಕ್ಷ್ಯವನ್ನು ತಿರುಗಿಸುತ್ತದೆ. ಇದರಿಂದ ಉತ್ತಮ ಜಿಜ್ಞಾಸುವು ಈ ವಿವೇಕ ಸಮಕಾಲದಲ್ಲಿಯೇ ಈಗಿನ 'ನಾನು ಇಂಥವನು' ಎಂಬ ಸ್ವರೂಪಕ್ಕಿಂತ ಸಂಪೂರ್ಣ ಬೇರೆಯಾಗಿ ಸ್ವತಂತ್ರವಾಗಿರುವ ತನ್ನ ಇನ್ನೊಂದು ಬಗೆಯ – ಅಥವಾ ನಿಜವಾದ – ಇರುವಿಕೆಯನ್ನು ಗುರುತಿಸಿಕೊಂಡೇ ಬಿಡುತ್ತಾನೆ. ಎಂದರೆ ಇಂದ್ರಿಯ, ಮನಸ್ಸು, ಬುದ್ಧಿ, ತರ್ಕ, ಭಾವನೆ, ಮುಂತಾದವುಗಳ ಎಲ್ಲೆಕಟ್ಟನ್ನು ಮೀರಿದ ಕೇವಲ ತಾನಾಗಿರುವ ತನ್ನ ಸ್ವಂತ ಸ್ವಭಾವವನ್ನು ಕಂಡುಕೊಳ್ಳುತ್ತಾನೆ. ಇದೇ ಈ ಮೇಲಿನ ಉಪನಿಷದ್ವಾಕ್ಯದ ಅನುಸಂಧಾನದ ಪ್ರಯೋಜನವು. ಹೀಗೆ ಉಪನಿಷದ್ವಾಕ್ಯಗಳು ಹೆಜ್ಜೆಹೆಜ್ಜೆಗೂ ಅನುಭವದಲ್ಲಿ ಕೊನೆಗಾಣುವ ಪರಿಯಲ್ಲಿಯೇ ಬೋಧಿಸುತ್ತವೆ. ಈಗ ಈ ಅನುಭವ ಸ್ವರೂಪಕ್ಕೂ ಹಾಗೂ ಎಚ್ಚರ (ಅಥವಾ ಕನಸಿನ) ಅವಸ್ಥೆಯ ಅನುಭವಕ್ಕೂ ಹೋಲಿಸಿ ಕೆಲವು ನಿರ್ಣಯಗಳನ್ನು ಮೊದಲು ತೆಗೆದು ತೋರಿಸಲು ಶಾಸ್ತ್ರವು ಆರಂಭಿಸುತ್ತದೆ.

## ಸದ್ರೂಪ

ಆ ನಿರ್ಣಯಗಳಾವುವೆಂದರೆ (1) ಗಾಢನಿದ್ರೆಯಲ್ಲಿದ್ದ ಆ ಕೇವಲ ಇರುವಿಕೆಯಿಂದಲೇ – ಆ ಇರುವಿಕೆಯಲ್ಲಿಯೇ – ಈ ಎಚ್ಚರವು ಎದ್ದುಕೊಂಡಿದೆ. (2) ಎಂದರೆ ಈಗ ನಮಗೆ ತೋರುವ ('ನಾನು' ಮೊದಲುಗೊಂಡು ಕಾಲ ದೇಶಾದಿ ಸಮಗ್ರ) ಎಚ್ಚರವೆಲ್ಲವೂ ಆಗಿ ತೋರಿಕೊಂಡದ್ದು ನಿದ್ರಯಲ್ಲಿದ್ದ ಬರೀ

ಇರವೇ ಆಗಿರುತ್ತದೆ. (3) ಎಚ್ಚರವು ಅಡಗಿದಾಗ ನಿದ್ರೆಯಲ್ಲಿ ಆ ಬರೀ ಇರವಿನೊಳಗೇ ಇದು ಸೇರಿ ಒಂದಾಗುತ್ತದೆ. ಹಸಿ ಮಣ್ಣಿನ ಮುದ್ದೆಯನ್ನು ಗಣಪತಿಯ ಅಚ್ಚುಪಡಿಗೆ ಹಾಕಿ ಹೊರತೆಗೆದರೆ ಸೊಂಡಿಲು ಹೊಟ್ಟೆ, ಕೈ, ಕಾಲು, ಹಾವು, ಇಲಿ, ಪೀಠ, ಮೋದಕ, ಪಾಶಾಂಕುಶ ಮುಂತಾಗಿ ಬೇರೆ ಬೇರೆ ಇರವಾಗಿ ಆ ಒಂದೇ ಮಣ್ಣೇ ಕಾಣುತ್ತದೆ. ಆಗಲೇ ಅದನ್ನು ಪುನಃ ಮುದ್ದೆ ಮಾಡಿದರೆ ಮೊದಲು ತೋರಿದ ವಿವಿಧ ಭೇದಗಳೆಲ್ಲವೂ ಆ ಮಣ್ಣಿನಲ್ಲಿಯೇ ಬೆರೆತು ಒಂದಾಗುತ್ತವೆ. ಬೇರೆ ಬೇರೆಯಾಗಿ ತೋರುತ್ತಿರುವಾಗಲೂ ಸಹ ಮಣ್ಣನ್ನುಳಿದು ಸ್ವತಂತ್ರವಾಗಿ ಆ ಅವಯವಗಳಿಗೆ (ಭೇದಗಳಿಗೆ ಸ್ವತಂತ್ರವಾದ) ಇರುವಿಕೆ ಇರಲೇ ಇಲ್ಲ. ಹಾಗೆಯೇ ಈ ಗಾಢನಿದ್ರೆಯಲ್ಲಿದ್ದ ಕೇವಲಾನುಭವ ರೂಪದ ಇರುವಿಕೆಯಲ್ಲಿಯೇ ಈ ಎಚ್ಚರದ ಭೇದಗಳೆಲ್ಲವೂ ಕಲ್ಪಿಸಲ್ಪಟ್ಟವು (ತೋರಿಕೊಂಡವು) ಗಳಾಗಿವೆ. ಹಾಗೆ ತೋರುತ್ತಿರುವಾಗಲೂ ಆ ಕೇವಲ ಇರವನ್ನುಳಿದು ಸ್ವತಂತ್ರ ಅಸ್ತಿತ್ವವು ಈ ಭೇದಗಳಿಗೆ ಇರುವದೇ ಇಲ್ಲ. ಪುನಃ ನಿದ್ರೆಯಲ್ಲಿ ಈ ಸಮಗ್ರ ಭೇದ ಪ್ರಪಂಚವೂ ಆ ಬರೀ ಇರವಿನಲ್ಲಿಯೇ ಬೆರೆತು ಬಿಡುತ್ತದೆ. ಆದ್ದರಿಂದ ಗಾಢ ನಿದ್ರೆಯಲ್ಲಿರುವ ನಮ್ಮ ಇರವು ಜಗತ್ತಿಗಾಧಾರವಾದ **ಸನ್ಮಾತ್ರವಾದ ಸದ್ವಸ್ತುವು** ಎಂದು ವೇದಾಂತವು ನಿರ್ಣಯಿಸುತ್ತದೆ. (ಛಾಂ–6–8–6 ರಿಂದ 6–10–3) 1 (ಬೃ. 4–3–21, 22) ಈ ಮಂತ್ರದ ಭಾಷ್ಯಗಳನ್ನು ನೋಡಿರಿ.

## ಚಿದ್ರೂಪ

ಗಾಢನಿದ್ರೆಯ ಅನುಭವವು ಬರಿ ಇರವಾಗಿ ಜಗತ್ತಿಗೇ ಇರವನ್ನು ಕೊಟ್ಟದ್ದಾಗಿರುವಂತೆಯೇ ಅದು ಕೇವಲಾನುಭವ ರೂಪವಾದದ್ದರಿಂದ – (ಎಂದರೆ ಅನುಭವಿಸುವವ – ಅನುಭವಿಸಲ್ಪಡತಕ್ಕದ್ದು – ಅನುಭವಿಸುವ ಸಾಧನೆ ಎಂಬ ಭೇದವಿಲ್ಲದ ಅನುಭವ ರೂಪವಾಗಿರುವದರಿಂದಲೇ) – ಅದು ಚಿನ್ಮಾತ್ರ, ಎಂದರೆ ಬರಿ ಅರಿವಿನ ಸ್ವರೂಪವಾಗಿದೆ. ಎಚ್ಚರ ಕನಸುಗಳಲ್ಲಿ ಯಾವ ಯಾವ ಜೀವರಲ್ಲಿ ಯಾವ ಯಾವ ಅರಿವು ತೋರಬಹುದೋ ಅದೆಲ್ಲವೂ ಈ ಮೂಲ ಅರಿವಿನ ಸ್ವರೂಪದಿಂದಲೇ ಬಂದಿದೆ. ಎಚ್ಚರದಲ್ಲಿ ಬುದ್ಧಿಯ ಉಪಾಧಿಗಳ ಮೂಲಕ ಬಿಡಿ ಬಿಡಿಯಾದಂತೆ ತೋರುವ ಎಲ್ಲ ಅರಿವುಗಳೂ ನಿದ್ರೆಯಲ್ಲಿ ಒಂದಾಗಿ

ಬರೀ ಅರಿವಿನ ಗಟ್ಟಿಯಾಗಿರುವದೇ ಅನುಭವ ಸಮ್ಮತವಾಗಿದೆ. ಆದ್ದರಿಂದ ಈ ನಿದ್ರೆಯಲ್ಲಿರುವ ನಮ್ಮ ಸ್ವರೂಪವು ಕೇವಲವಾದ – ತನಗಿನ್ನೊಂದಿಲ್ಲದ – ಪೂರ್ಣ ಚಿನ್ಮಾತ್ರವಾಗಿದೆ. ಹೀಗಿರುವದರಿಂದಲೇ ನಾವು ಅಲ್ಲಿ ಏನನ್ನೂ ತಿಳಿಯುವದಿಲ್ಲ. ಎಂದರೆ 'ತಿಳಿದೆನು' ಎಂಬ ವ್ಯವಹಾರಕ್ಕೆ ಬೇಕಾಗಿರುವ ಇನ್ನೊಂದೆಂಬುದೇ ಅಲ್ಲಿ ಇರಲಿಲ್ಲ ಎಂದರ್ಥ. ಈ ಬಗ್ಗೆ – ಬೃಹದಾರಣ್ಯಕ 4–4–23 ರಿಂದ 30ನೇ ಮಂತ್ರದವರೆಗಿನ ಭಾಷ್ಯವನ್ನು ನೋಡಿರಿ. ಹಾಗೂ ಮಾಂಡೂಕ್ಯ 7ನೇ ಮಂತ್ರದಲ್ಲಿ **"ಸುಷುಪ್ತೇ ವ್ಯಭಿಚರತ ಇತಿ ಚೇತ್? ನ, ಸುಷುಪ್ತಸ್ಯ ಅನುಭೂಯಮಾನತ್ವಾತ್"** ಎಂಬ ವಾಕ್ಯವನ್ನೂ (ಸೂ.ಭಾ. 2–3–18) ಈ ಭಾಷ್ಯಗಳನ್ನೂ ನೋಡಿರಿ. ನಿದ್ರೆಯಲ್ಲಿ ಇನ್ನೊಂದಿಲ್ಲದ್ದರಿಂದ ಅರಿಯಲಿಲ್ಲ. ಅರಿವಿನ ಸ್ವರೂಪವಿಲ್ಲೆಂದಲ್ಲ. ಪ್ರಶ್ನೆ – ನಿದ್ರೆಯಲ್ಲಿ ಅರಿವಿಲ್ಲ? ಉತ್ತರ :– ಹಾಗಲ್ಲ ನಿದ್ರೆಯೂ ಅನುಭವಿಸಲ್ಪಡುತ್ತದೆ –ಆ ಅನುಭವವೇ ಅರಿವಿನ ಸ್ವರೂಪವು. ಅರಿಯಲು ಬೇರೆ ವಿಷಯವಿಲ್ಲದ್ದರಿಂದ ಅರಿಯಲಿಲ್ಲವೆಂದು ಕಾಣುವದೇ ಹೊರತು ಅರಿವಿನ ಸ್ವರೂಪವಿರಲಿಲ್ಲವೆಂದೇನೂ ತಾತ್ಪರ್ಯವಲ್ಲ – ಎಂಬುದು ಈ ವಾಕ್ಯಗಳ ಸಾರ.

* * * * *

## ಅಧ್ಯಾಯ – 7

# ನಿದ್ರಾನುಭವದ ವಿಮರ್ಶೆ
# ಆನಂದರೂಪ

ಹಿಂದಿನ ಲೇಖನದಲ್ಲಿ ನಿದ್ರಾನುಭವವು ಸದ್ರೂಪವೂ ಚಿದ್ರೂಪವೂ ಆಗಿರುವದೆಂಬುದನ್ನು ಉಪನಿಷತ್ತುಗಳು ಹೇಗೆ ನಿರೂಪಿಸಿರುವವೋ ಹಾಗೆ ತೋರಿಸಿದ್ದಾಗಿದೆ. ಈಗ ಆ ಸ್ಥಿತಿಯು ಆನಂದರೂಪವೂ ಆಗಿದೆ ಎಂಬುದನ್ನು ಸ್ವಲ್ಪ ನೋಡೋಣ. ಬೃಹದಾರಣ್ಯಕದ 4–3–32, 33ನೇ ಮಂತ್ರಗಳಲ್ಲಿ ಜೀವರಿಗೆ ತಾರತಮ್ಯ ಭಾವದಿಂದ ಸಿಕ್ಕತಕ್ಕ ಎಲ್ಲ ಆನಂದಗಳನ್ನೂ ವಿವರಿಸುತ್ತಾ ಈ ಗಾಢ ನಿದ್ರೆಯಲ್ಲಿ ಇವನಿಗೆ ಪರಮಾನಂದವೇ ಸಿಕ್ಕುತ್ತದೆ. ಜೀವರಿಗೆ ಇದಕಿಂತ ಹೆಚ್ಚಿನ

ಲೋಕ, ಗತಿ, ಅಥವಾ ಆನಂದ ಎಂಬುದು ಇಲ್ಲವೇ ಇಲ್ಲ. ಇಲ್ಲಿ "ನಾನು ಆನಂದಿಸುವವನು, ಇದು ಆನಂದವು" ಎಂಬ ಭೇದವೇ ಇರದ–ತಾನೇ ಸುಖ ಸ್ವರೂಪನಾಗಿರುವ–ಸ್ವರೂಪವೇ ಜೀವರಿಗೆ ಸಿಕ್ಕುತ್ತದೆ, ಎಂದು ವರ್ಣಿಸಿದೆ. **"ಸಲಿಲ ಏಕೋ ದ್ರಷ್ಟಾಃ ಅದ್ವೈತೋ ಭವತಿ ಏಷ ಬ್ರಹ್ಮ ಲೋಕಃ... ಏಷಾಸ್ಯ ಪರಮಾ ಗತಿಃ ಏಷಾಸ್ಯ ಪರಮಾ ಸಂಪತ್ ಏಷೋಽಸ್ಯ ಪರಮೋಲೋಕಃ, ಏಷೋಽಸ್ಯ ಪರಮ ಆನಂದಃ"** ಎಂದು ಮುಕ್ತಕಂಠದಿಂದ ನಿದ್ರಾನುಭವವನ್ನು ಶ್ರುತಿಯು ಹೊಗಳಿದೆ. ಈ ಹೊಗಳಿಕೆಯು ಸಾರ್ವತ್ರಿಕಾನುಭವಕ್ಕೆ ಸಂಪೂರ್ಣ ಹೊಂದಿಕೆಯಾಗಿಯೂ ಇದೆ. ನಾವು ಇಂದ್ರಿಯಗಳ ಮೂಲಕ ವಿಷಯಗಳಿಂದ ಪಡೆಯುವ ಕ್ಷಣಿಕವಾದ ಆನಂದದ ಝಳುಕಗಳ ಅನುಭವವನ್ನೂ ನಿದ್ರೆಯಲ್ಲಿ ನಾನು, ಇನ್ನೊಂದು ಎಂಬುದಿಲ್ಲದೆ ಸುಖ ರೂಪರಾಗಿದ್ದ ನಮ್ಮ ಅನುಭವವನ್ನೂ ಹೋಲಿಸಿ ನೋಡಿದರೆ ಈ ಶ್ರುತಿ ವಾಕ್ಯಗಳ ಬೆಲೆ ಗೊತಾಗುತ್ತದೆ. ಆದರೆ ನಾವು ನಿದ್ರಾನುಭವವನ್ನು ಸಂಪೂರ್ಣ ನಿರ್ಲಕ್ಷಿಸಿ ಇಂದ್ರಿಯಗಳ ಮೂಲಕ ಹೊರಗೇ ನೋಡುತ್ತಾ ಮನಸ್ಸಿನೊಡನೆ ಹೊರಗೇ ಹೋಗುತ್ತಾ ಹೊರಗಿನ ವಿಷಯಗಳ ಚಿಂತನೆಯಲ್ಲಿಯೇ ಮಗ್ನರಾಗಿರುವದರಿಂದ ನಮ್ಮ ಸ್ವಂತದ ಅನುಭವವೇ ನಿದ್ರಾನುಭವವಾಗಿದ್ದರೂ ಅದರ ಕಡೆಗೆ ತಿರುಗಿ ಅದನ್ನು ನಿರೀಕ್ಷಿಸದವರಾಗಿದ್ದೇವೆ. ಇರಲಿ. ಅಂತೂ **ಒಟ್ಟಿನಲ್ಲಿ ನಿದ್ರೆಯಲ್ಲಿಯ ನಮ್ಮ ಸ್ವರೂಪವು ಬರಿ ಇರವಿನ ಬರಿ ಅರಿವಿನ ಕೇವಲಾನಂದದ ಸ್ವಭಾವದ್ದಾಗಿರುವದೆಂಬುದು ಈವರೆಗಿನ ತೀರ್ಮಾನವಾಗಿರುತ್ತದೆ.**

## ಈಶ್ವರ

ಇದಿಷ್ಟೇ ಅಲ್ಲದೆ:– ಇಡೀ ಜಾಗ್ರದವಸ್ಥೆಯು ಈ ನಮ್ಮ–ಎಂದರೆ ಗಾಢನಿದ್ರೆಯಲ್ಲಿ ನಾವಿರುವ–ಸ್ವರೂಪದಿಂದಲೇ–ಸ್ವರೂಪದಲ್ಲಿಯೇ–ಹೊರ ತೋರಿಕೊಳ್ಳುತ್ತದೆ. ಎಂದರೆ ನಿದ್ರೆಯಲ್ಲಿ ಕೇವಲ ತಾನೇತಾನಾಗಿರುವ ತತ್ತ್ವವೇ ಎಚ್ಚರದ ಅನೇಕ 'ನಾನು'ಗಳಾಗಿ, ಅದ್ಭುತ ವಿಶ್ವವಾಗಿ, ಕಾಲ ದೇಶಾದಿ ಭಾವಗಳಾಗಿ, ತೋರ ತೊಡಗುತ್ತದೆ. ಈ ಇಡೀ ಎಚ್ಚರದ ಅವಸ್ಥೆಗೆ ನಿದ್ರಾನುಭವದಲ್ಲಿ ಕೇವಲವಾಗಿರುವ 'ತಾನು' ಎಂಬ ತತ್ತ್ವವನ್ನುಳಿದು ಇನ್ನೊಂದು ಮೂಲವು ಇರುವುದೇ ಸಾಧ್ಯವಿಲ್ಲವಾದ್ದರಿಂದ ಈ ಸ್ವರೂಪವೇ ಜಾಗ್ರತ್ತಾಗಿ ಕಾಣಿಸಿಕೊಳ್ಳುತ್ತಿದೆ ಎಂಬುದು ಅನುಭವ ಸಮ್ಮತವಾದ ನಿರ್ಣಯವು. ಹೀಗೆ ಪ್ರಪಂಚವಾಗಿ

ಕಾಣಿಸಿಕೊಳ್ಳುವಾಗಲೂ ನಿದ್ರಾನುಭವದಲ್ಲಿದ್ದ 'ತಾನು' ಎಂಬ ತತ್ತ್ವವು ಸ್ವಲ್ಪವೂ ಬದಲಾವಣೆಯಾಗದೆ ಮುಕ್ಕಾಗದೆ–ತಾನಿರುವಂತೆಯೇ ಇರುತ್ತದೆ. ಇದೊಂದು ಅದ್ಭುತ ಮಹಿಮೆ. ಬುದ್ಧಿಗೆ ನಿಲುಕಲಾರದ, ಅನುಭವದ ದೃಷ್ಟಿಯಿಂದ ನಿಜವಾಗಿರುವ ಇದೊಂದು ಮಹಾ ಮಹಿಮೆ. ಇಷ್ಟೇ ಅಲ್ಲದೆ ಎಚ್ಚರದ ಪ್ರಪಂಚದಲ್ಲಿ ಕಂಡು ಬರುವ ಜ್ಞಾನ, ಶಕ್ತಿ, ಬಲ, ವೀರ್ಯ, ತೇಜಸ್ಸು, ಹಾಗೂ ಈ ಇಡೀ ಎಚ್ಚರದ ಒಡೆತನ (ಐಶ್ವರ್ಯ) ಇದೆಲ್ಲವೂ ಈ 'ತಾನು' ಎಂಬ ತತ್ತ್ವಕ್ಕೇ ಸೇರಿದ್ದು. ಇದರ ಮೂಲಕವೇ ಕಾಲ ದೇಶಗಳ ಕಟ್ಟುಪಾಡಿನಲ್ಲಿ ಕಾರ್ಯ ಕಾರಣ ಭಾವವೂ ಆಯಾ ಕರ್ಮಗಳಿಗೆ ಸರಿಯಾದ ಫಲವೂ ಆಗುತ್ತಿದೆ. ಆದ್ದರಿಂದ ಇಡೀ ಪ್ರಪಂಚವನ್ನೇ ತನ್ನ ಅಧೀನದಲ್ಲಿಟ್ಟಿರುವ ಅಗಾಧ ಸಾಮರ್ಥ್ಯವೂ ಈ 'ತಾನು' ಎಂಬ ತತ್ತ್ವಕ್ಕೆ ಇದೆ. ಜಗತ್ತನ್ನು ತನ್ನಲ್ಲಿ ತೋರಿಸಿ–ಅಥವಾ ತಾನೇ ಅದಾಗಿ ತೋರಿ–ತನ್ನಲ್ಲಿ ನಿಲ್ಲಿಸಿಕೊಂಡು ಕೊನೆಯಲ್ಲಿ ತನ್ನಲ್ಲಿಯೇ ಲಯಗೊಳಿಸಿಕೊಳ್ಳುವ ಸಾಮರ್ಥ್ಯವುಳ್ಳದ್ದಾಗಿದ್ದು ಹೀಗೆ ಮಾಡುವದರಿಂದ ತನ್ನಲ್ಲಿ ಯಾವ ಮಾರ್ಪಾಡೂ ಇಲ್ಲದ ತತ್ತ್ವವಾಗಿದೆ, ಈ ನಿದ್ರಾನುಭವದಲ್ಲಿರುವ ಕೇವಲ ತಾನು. ಸೂರ್ಯನು ಇತರ ಗ್ರಹಗಳನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ಪೃಥ್ವಿ ಹಾಗೂ ಚಂದ್ರಾದಿಗಳಿಗೆ ಬೆಳಕನ್ನು ಕೊಡುತ್ತಾ ಭೂಮಿಯ ಮೇಲಿನ ಸಮಗ್ರ ಜೀವರಾಶಿಗಳ ಜೀವನಕ್ಕೆ ಕಾರಣವಾಗಿದ್ದು ತನ್ನಲ್ಲಿ ಯಾವ ವಿಕಾರವೂ ಇಲ್ಲದವನಾಗಿರುವದು ಹೇಗೋ ಹಾಗೆ–(ಇದು ದೃಷ್ಟಾಂತಕ್ಕಾಗಿ ಹೇಳಿದ್ದು, ನಿಜವಾಗಿ ಸೂರ್ಯಗೋಳದಲ್ಲಿಯೂ ಜ್ವಾಲಾ ಸ್ಫೋಟಾದಿ ವಿಕಾರಗಳುಂಟು–ಆದರೆ ವಿಷಯವನ್ನು ತಿಳಿಸಲು ಒಂದಂಶವನ್ನು ಸಾಮಾನ್ಯ ದೃಷ್ಟಿಯಿಂದ ಇಲ್ಲಿ ಹೇಳಿದೆ.) ಈ ತಾನೆಂಬ ತತ್ತ್ವವೂ ಇಂಥ ಮಹಿಮೆಯುಳ್ಳದ್ದಾಗಿದೆ. ಎಚ್ಚರ, ಕನಸುಗಳೆರಡನ್ನೂ ತನ್ನೊಳಗೆ ತೋರಿಸಿ ಅಡಗಿಸಿಕೊಳ್ಳುವ ಅದ್ಭುತ ಸ್ವರೂಪವಿದು. ಆದ್ದರಿಂದ ವೇದಾಂತಗಳು ಈ ನಿದ್ರಾನುಭವದಲ್ಲಿರುವ ಕೇವಲ ತಾನು ಎಂಬ ತತ್ತ್ವವನ್ನು ಜಾಗ್ರತ್ ಸ್ವಪ್ನಗಳಿಗೆ ಹೋಲಿಸಿ ಹೇಳುವಾಗ **"ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋಽನ್ತರ್ಯಾಮಿ ಏಷಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಮ್"** (ಮಾಂ–ಮಂತ್ರ 6) ಎಂದು ಸರ್ವೇಶ್ವರನೂ ಸರ್ವಜ್ಞನೂ ಅಂತರ್ಯಾಮಿಯೂ (ಒಳಗಿದ್ದುಕೊಂಡು ಎಲ್ಲವನ್ನೂ ಕಟ್ಟುಪಾಡಿನಲ್ಲಿಟ್ಟುಕೊಂಡಿರುವವನು) ಭೂತಗಳೆಲ್ಲವೂ ಹುಟ್ಟಲು–ಹೊರಬರಲು ಹಾಗೂ ಲಯವಾಗಲು ಕಾರಣನಾದ ಯೋನಿಯೂ ಈ

ಗಾಢನಿದ್ರೆಯಲ್ಲಿರುವ 'ತಾನು' ಎಂಬ ಕೇವಲ ತತ್ತ್ವನೇ ಆಗಿದ್ದಾನೆ, ಎಂದು ಈ ಮಂತ್ರವು ತಿಳಿಸುತ್ತದೆ. ಬಲ್ಲವರ ಬೋಧನೆಯನ್ನನುಸರಿಸಿ ನಾವು ಸ್ವಲ್ಪ ಒಳಗಣ್ಣಿನಿಂದ ಅನುಭವದ ಕಡೆಗೆ ಹಿಂದಿರುಗಿ ನೋಡಿದರೆ ಇಲ್ಲಿ ಹೇಳಿದ ವಿಷಯಗಳೆಲ್ಲವೂ ಅನುಭವ ಸಮ್ಮತವಾಗಿರುವದೆಂಬುದು ಈಗಲೇ ಗೊತ್ತಾಗುತ್ತದೆ. ಈಗ ಇದರಿಂದ ಪ್ರಪಂಚದಲ್ಲಿ ಅತ್ಯಂತ ತೊಡಕಿನದಾದ ಒಂದು ಪ್ರಶ್ನೆಗೆ ಸುಲಭವಾಗಿ ಅನುಭವದಲ್ಲಿಯೇ ಉತ್ತರ ಸಿಕ್ಕ ಹಾಗಾಗಿರುತ್ತದೆ. ಅದೇನೆಂದರೆ– ದೇವರಿದ್ದಾನೆಯೇ? ಈಶ್ವರನಿದ್ದಾನೆಂದು ಏಕೆ ನಂಬಬೇಕು ? ಎಂದು ನಾಸ್ತಿಕರೂ, ಈಶ್ವರನನ್ನೊಪ್ಪಲೇ ಬೇಕು ಎಂದು ಆಸ್ತಿಕರೂ ಬಡಿದಾಡುತ್ತಿರುತ್ತಾರೆ. ಧರ್ಮ ಗ್ರಂಥಗಳ ಆಧಾರ, ಕೆಲವು ಯುಕ್ತಿಗಳು, ಪುರಾಣಾದಿಗಳಲ್ಲಿಯ ಅದ್ಭುತ ಪವಾಡಗಳ ಆಧಾರ, ವೈಯ್ಯಕ್ತಿಕಾನುಭವಗಳ ಆಧಾರಗಳನ್ನು ತಕ್ಕೊಂಡು ಈಶ್ವರಾಸ್ತಿತ್ವವನ್ನು ಸಿದ್ಧಮಾಡಲು ಆಸ್ತಿಕರು ಹೊರಟರೆ, ನಾಸ್ತಿಕರು ವಿತಂಡವಾದ ಹೂಡಿ ಇದೆಲ್ಲವೂ ಬರೀ ಮೂಢಭಾವನೆ, ಮನಸ್ಸಿನ ದೌರ್ಬಲ್ಯ ಎಂದು ಖಂಡಿಸಿ ಬಿಡುತ್ತಿರುತ್ತಾರೆ. ಆದರೆ ಉಪನಿಷತ್ತಿನಲ್ಲಿ ಹೇಳಿದ ಈ ವಿಚಾರಕ್ರಮದಂತೆ –(ಬರೀ ಅನುಮಾನದ ಆಧಾರದಿಂದಲೇ ಈಶ್ವರಾಸ್ತಿತ್ವವನ್ನು ನಿಲ್ಲಿಸದೆ)–ಸಾರ್ವತ್ರಿಕಾನುಭವದಲ್ಲಿಯೇ ಈಶ್ವರ ತತ್ತ್ವವನ್ನು ಇಲ್ಲಿಯೇ ಈಗಲೇ ತೋರಿಸಿ ಕೊಟ್ಟಿರುವದನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ. ಆ ವಿಚಾರ ಸರಣಿಯನ್ನನುಸರಿಸಿ ಒಳಸರಿದು ವಿಚಾರಿಸುವ ಯೋಗ್ಯತೆ ಇಲ್ಲದವನಿಗೆ ಇದು ತಿಳಿಯಲಿಕ್ಕಿಲ್ಲವೆಂಬ ಮಾತ್ರದಿಂದ ಆ ತತ್ತ್ವವೇ ಹಾಗಿಲ್ಲವೆಂದೇನೂ ಆಗುವದಿಲ್ಲ. ಸೈನ್ಸಿನಲ್ಲಿಯ ಅನೇಕ ಸೂಕ್ಷ್ಮತತ್ತ್ವಗಳು ಸಾಮಾನ್ಯ ಜನಗಳಿಗೆ ಗೊತ್ತಾಗದಿರುವ ಮಾತ್ರಕ್ಕೆ ಅವುಗಳಿಲ್ಲವೆಂದೇನೂ ಆಗುವದಿಲ್ಲವಷ್ಟೆ? ಹಾಗೆಯೇ ಇದೂ ಅಗಿದೆ. ಆದ್ದರಿಂದ ಜಗತ್ತಿನಲ್ಲಿ ಈಶ್ವರಾಸ್ತಿತ್ವನ್ನೊಪ್ಪುವ ಎಲ್ಲಾ ಧರ್ಮೀಯರಿಗೂ ಈ ಉಪನಿಷತ್ತುಗಳ ವಿಚಾರ ಸರಣಿಯು ಆ ತತ್ವವನ್ನು ಸಾರ್ವತ್ರಿಕಾನುಭವದಲ್ಲಿ ತೋರಿಸಿ ಈಗಲೇ ಕೈಗೆ ಎಟಕಿಸುವಂತಹದಾಗಿದೆ. ಸೂತ್ರ ಭಾಷ್ಯದ 1–1–2ರಲ್ಲಿ ಶ್ರೀ ಶಂಕರಾಚಾರ್ಯರು ಇಂಥ ಜಗತ್ತಿಗೆ ಕಾರಣನಾದವನು ಸರ್ವಜ್ಞನಾದ ಈಶ್ವರನಲ್ಲದೆ ಅಣುಗಳಾಗಲಿ, ಪ್ರಧಾನವಾಗಲಿ (ಪ್ರಕೃತಿ), ಸಂಸಾರಿಯಾಗಲಿ ಕಾರಣರಲ್ಲ. ಈ ಜಗತ್ತು ನಿಯಮಕ್ಕೊಳಪಟ್ಟಿರುವದರಿಂದ ಇದು ಸ್ವಭಾವತಃ ಸ್ವತಂತ್ರವಾಗಿಯೂ ಇಲ್ಲ. ಈ ಅನುಮಾನವೇ ಈಶ್ವರ ಕಾರಣವಾದಿಗಳಿಗೆಲ್ಲರಿಗೂ (ಈಶ್ವರಾಸ್ತಿತ್ವನ್ನೊಪ್ಪುವವರಿಗೆಲ್ಲ) ಆಧಾರವಾಗಿದೆ ಎಂಬ

ಅರ್ಥದ ವಾಕ್ಯವನ್ನು ಬರೆದಾಗ ಒಂದು ಪ್ರಶ್ನೆಯನ್ನು ಎಬ್ಬಿಸಿದ್ದಾರೆ. ಅದೇನೆಂದರೆ– **ನನು ಇಹಾಪಿ ತದೇವ ಉಪನ್ಯಸ್ತಂ ಜನ್ಮಾದಿಸೂತ್ರೇ?** ॥ ಮತ್ತೆ ಈ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿಯೂ ಅನುಮಾನವನ್ನೇ ಹೇಳಿದೆಯಲ್ಲವೇ? ಎಂಬುದು ಪ್ರಶ್ನೆ. ಇದಕ್ಕೆ ಉತ್ತರವಾಗಿ– **"ನ ॥ ವೇದಾಂತವಾಕ್ಯಕುಸುಮಗ್ರ ಥನಾರ್ಥತ್ವಾತ್ ಸೂತ್ರಸ್ಯ ... ... ವಾಕ್ಯಾರ್ಥ ವಿಚಾರಣಾಧ್ಯವಸಾನನಿರ್ವೃತ್ತಾಹಿ ಬ್ರಹ್ಮಾವಗತಿಃ ನ ಅನುಮಾನಾದಿ ಪ್ರಮಾಣಾಂತರನಿರ್ವೃತ್ತಾ"** ॥ ಇದರ ಅರ್ಥವೇನೆಂದರೆ– "ಇಲ್ಲ. ಈ ಸೂತ್ರಗಳು ವೇದಾಂತ ವಾಕ್ಯಗಳೆಂಬ ಕುಸುಮಗಳನ್ನು ಮಾಲಿಕೆಯಾಗಿ ಕಟ್ಟಲು ಬಂದಿರುತ್ತವೆ. ವೇದಾಂತ ವಾಕ್ಯಗಳನ್ನು ವಿಚಾರಮಾಡಿ–ಅವು ಹೇಳುವಂತೆಯೇ ತತ್ತ್ವವನ್ನು ನಿಶ್ಚಯ ಮಾಡಿದ ಸಮಕಾಲದಲ್ಲಿಯೇ ಜಗತ್ತಿನ ಜನ್ಮಾದಿಗಳಿಗೆ ಕಾರಣವಾದ– ಬ್ರಹ್ಮತತ್ತ್ವದಲ್ಲಿಯೇ ನೆಲೆನಿಲ್ಲುವಿಕೆಯು ಬರುವದೇ ಹೊರತು ಬರೀ ಅನುಮಾನಾದಿಗಳಿಂದ ಈ ಅನುಭವದಲ್ಲಿ ನೆಲೆ ನಿಲ್ಲುವಿಕೆಯು ಬರಲಾರದು" ಎಂದು ಆಚಾರ್ಯರು ಹೇಳಿದ್ದಾರೆ. ಆದ್ದರಿಂದ ವೇದಾಂತ ಶಾಸ್ತ್ರದಲ್ಲಿ ಬರೀ ಅನುಮಾನ, ಯುಕ್ತಿ, ಶಾಸ್ತ್ರ ವಾಕ್ಯಗಳನ್ನು ಮಾತ್ರವೇ ಅವಲಂಬಿಸಿ ಈಶ್ವರತತ್ತ್ವವನ್ನು ನಿರ್ಣಯಿಸುವದಕ್ಕೆ ಹೊರಟಿರುವದಿಲ್ಲ. ಮತ್ತೇನೆಂದರೆ ಸಾರ್ವತ್ರಿಕಾನುಭವದ ಆಧಾರದಿಂದಲೇ ಈಗಲೇ ಇಲ್ಲಿಯೇ ಈಶ್ವರನ ಅಸ್ತಿತ್ವವನ್ನು ತೋರಿಸಿ ಕೊಟ್ಟರುತ್ತದೆ. ಇದೊಂದು ಸಮಸ್ತ ಜಗತ್ತಿನೊಳಗಿನ ಎಲ್ಲಾ ಧರ್ಮಗಳಿಗಿಂತಲೂ ವಿಶೇಷವಾಗಿರುವ ಸಂಗತಿಯಾಗಿದೆ. ಇನ್ನೂ ಈ ಬಗೆಯ ವಿಷಯಗಳನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ.

* * * * *

## ಅಧ್ಯಾಯ – 8

# ನಿದ್ರಾನುಭವದ ವಿಮರ್ಶೆ–ಜಗದ್ಬೀಜ–ಬುದ್ಧಿಸಂಬಂಧ

ಹಿಂದಿನ ಅಧ್ಯಾಯಗಳಲ್ಲಿ ಎಚ್ಚರ ಕನಸುಗಳ ಅವಸ್ಥೆಗೆ ನಿದ್ರಾನುಭವವನ್ನು ಹೋಲಿಸಿ ನೋಡಿ ನಿದ್ರೆಯಲ್ಲಿರುವ ನಮ್ಮ ಸ್ವರೂಪವು ಈಗಿನ 'ನಾನು ಇಂಥವನು' ಎಂಬುದಕ್ಕಿಂತ ಬೇರೆಯಾದ ಕೇವಲ ತಾನೇ ತಾನಾಗಿರುವ ಅನುಭವ ಸ್ವರೂಪವಾಗಿದೆ. ಇದು ಕೇವಲ ಸನ್ಮಾತ್ರ –(ಬರಿ ಇರವು) ಚಿನ್ಮಾತ್ರ (ಬರಿ ಅರಿವು) ಆನಂದ ಮಾತ್ರವಾಗಿದ್ದು ಇದರಿಂದಲೇ ಎಚ್ಚರ ಕನಸಿನ ಪ್ರಪಂಚವು (ಎರಡೂ ಅವಸ್ಥೆಗಳೂ) ಹೊರ ತೋರಿಕೊಂಡು ಇದರಲ್ಲಿಯೇ ನಿಂತು ಇದರಲ್ಲಿಯೇ ಸೇರಿ ಹೋಗುವದರಿಂದ ಈ ಕೇವಲ ತಾನಾದ ಸ್ವರೂಪವೇ ಈ ಅವಸ್ಥೆಗಳ ಹುಟ್ಟು ಹೊಂದಿನ ದೃಷ್ಟಿಯಿಂದ 'ಈಶ್ವರ'ನೆನಿಸಿಕೊಂಡಿರುವದೆಂಬ ವಿಷಯಗಳನ್ನು ತಿಳಿಸಿದ್ದಾಗಿದೆ. ಈಗ ಈ ನಿದ್ರಾನುಭವವನ್ನು ನೋಡುವ ಇನ್ನೂ ಕೆಲವು ಪ್ರಕಾರದ ದೃಷ್ಟಿಗಳನ್ನು ನೋಡೋಣ.

**ಜಗದ್ಬೀಜ ಬುದ್ಧಿ ಸಂಬಂಧ :** ಈಗ ಜಗತ್ತು ನಾಮರೂಪಗಳಿಂದ ಬಿಡಿ ಬಿಡಿಯಾಗಿ ಅನೇಕ ಜೀವರಿಂದೊಡಗೂಡಿ ಕಾಲದೇಶಕಾರ್ಯಕಾರಣ ಭಾವಕ್ಕೊಳಪಟ್ಟು ಇದು ಹೇಗೆ ನಿರ್ಮಾಣವಾಗಿರಬಹುದೆಂದು ಯೋಚಿಸಲೂ ಸಹ ಅಸಾಧ್ಯವೆನಿಸಿ ತೋರುತ್ತಿದೆ. ಆದರೆ ನಿದ್ರೆಯಲ್ಲಿ ಇದು ಸ್ವಲ್ಪವೂ ತೋರುವದೇ ಇಲ್ಲ. ಪುನಃ ಎಚ್ಚರ ಬಂದಾಗ ಹಿಂದಿನ ಜಗತ್ತನ್ನೇ ಮತ್ತೆ ನೋಡುವೆವೇ ಹೊರತು ಬೇರೊಂದು ಹೊಸ ಜಗತ್ತು ಬಂದಿದೆ ಎಂದೇನೂ ನಾವು ತಿಳಿದುಕೊಳ್ಳುವದಿಲ್ಲ. ಅಂತೂ "ಈಗ ಜಗತ್ತಿದೆ" – ಎಂದು ಒಪ್ಪಿರುವ ನಮ್ಮ ಗ್ರಹಿಕೆಯ ಆಧಾರದಿಂದಲೂ (ನಿದ್ರೆಯಲ್ಲಿ ಕಾಣದಿದ್ದರೂ ಮತ್ತೆ ಇದೇ ಜಗತ್ತೇ ಯಥಾ ಪ್ರಕಾರ ಕಾಣತೊಡಗುವದೆಂಬ ಲೌಕಿಕ ಗ್ರಹಿಕೆಯ ಆಧಾರದಿಂದ) ಶಾಸ್ತ್ರವು ನಿದ್ರೆಯಲ್ಲಿ ಜಗತ್ತು ಬೀಜ ರೂಪವಾಗಿರುತ್ತದೆ – ಮತ್ತೆ ಪುನಃ ತೋರಿಕೊಳ್ಳುತ್ತದೆ, ಎಂದು ಪ್ರತಿಪಾದಿಸುತ್ತದೆ. ಮಹಾಪ್ರಲಯದಲ್ಲಿಯೂ ಹೀಗೆಯೇ ಬೀಜ ರೂಪವಾಗಿಯೇ ಜಗತ್ತು ಇದ್ದು ಪುನಃ ಸೃಷ್ಟಿಯಲ್ಲಿ ಹಿಂದಿನ ಜಗತ್ತೇ ಹೊರ ತೋರಿಕೊಳ್ಳುವದೆಂದೂ ಪುರಾಣಾದಿಗಳಲ್ಲಿ ಪ್ರತಿಪಾದಿಸಿರುತ್ತದೆ. ಈಗ ಕಾಣುವ

ಜಗತ್ತು ನಿಜವಾಗಲೂ ಈಗಲೇ ಬರೀ ತಾನೇ ಆಗಿದೆ. ಇದನ್ನರಿಯದಿದ್ದುದಕ್ಕೆ ಆ ಬರೀ ತಾನಾದ ತತ್ತ್ವವೇ ನಮಗೆ ಜಗತ್ತಿನಂತೆ ಕಾಣುತ್ತದೆ ಎಂಬ ಪರಮಾರ್ಥ ದೃಷ್ಟಿಯ ಮರ್ಮವನ್ನರಿತರೆ ಈಗಲೇ ಜಗತ್ತಿಲ್ಲವಾದ್ದರಿಂದ ಇದು ತೋರಿತು ಅಡಗಿತು ಎಂಬ ಮಾತೇ ಇಲ್ಲವಾಗಿ ನಿದ್ರೆಯಲ್ಲಿ ಈ ಜಗತ್ತಿನ ಬೀಜವಿದೆ ಎಂಬುದೂ ಬರೀ ಕಲ್ಪನಾ ಮಾತ್ರವೇ ಹೊರತು ವಸ್ತು ಸ್ಥಿತಿಯೇನಲ್ಲ ಎಂಬುದು ಅನುಭವಕ್ಕೇ ಗೋಚರವಾಗುತ್ತದೆ. ಜಗತ್ತಿದ್ದರಲ್ಲವೇ ಅದು ತೋರಿದ್ದು, ಅಡಗಿದ್ದು, ಮತ್ತೆ ತೋರಿದ್ದು, ಅಡಗಿದಾಗ ಬೀಜವಿರಬೇಕೆಂದು ಕಲ್ಪಿಸಿದ್ದು ಮುಂತಾದದ್ದೆಲ್ಲ? ಈಗಲೇ ಇದೆಲ್ಲವೂ ಬರೀ ಆತ್ಮನೇ ಹೊರತು ಜಗತ್ತಿಲ್ಲವೇ ಎಲ್ಲ ಎಂಬ ದೃಷ್ಟಿ ಬಂದರೆ ಈ ಬೀಜ ಎಲ್ಲಿ ಬರಬೇಕು? ಆದರೆ ಇಂಥ ಉತ್ಕೃಷ್ಟವಾದ ದೃಷ್ಟಿಯನ್ನು ಜಿಜ್ಞಾಸುವು ನೋಡುವ ಮೊದಲು ಸ್ವಲ್ಪ ಕೆಳಮಟ್ಟದಲ್ಲಿ ಜಗತ್ತಿದೆ ಎಂಬ ಗ್ರಹಿಕೆಗನುಸರಿಸಿ ಜಗದ್ಬೀಜವು ನಿದ್ರಾದಿಗಳಲ್ಲಿರುವದೆಂದು ಶಾಸ್ತ್ರವು ಕಲ್ಪಿಸಿರುತ್ತದೆ. ಆದ್ದರಿಂದಲೇ ಶ್ರೀ ಶಂಕರಾಚಾರ್ಯರು **"ಸರ್ವಜ್ಞಸ್ಯ ಈಶ್ವರಸ್ಯ ಆತ್ಮ ಭೂತೇ ಇವ ಅವಿದ್ಯಾಕಲ್ಪಿತೇ ತತ್ತ್ವಾನ್ಯತ್ವಾಭ್ಯಾಂ ಅನಿರ್ವಚನೀಯೇ ಸಂಸಾರ ಪ್ರಪಂಚ ಬೀಜಭೂತೇ ಸರ್ವಜ್ಞಸ್ಯ ಈಶ್ವರಸ್ಯ ಮಾಯಾ ಶಕ್ತಿಃ ಪ್ರಕೃತಿಃ ಇತಿ ಶ್ರುತಿಸ್ಮೃತೋಃ ಅಭಿಲಪ್ಯೇತೇ॥** ಎಂದು ಪ್ರಪಂಚದ–ನಾಮರೂಪಗಳ–ಬೀಜವಾಗಿರುವ ಈ ತತ್ತ್ವವು – ಎಂದರೆ ಈಶ್ವರನ ಮಾಯೆ–ಪ್ರಕೃತಿ, ಶಕ್ತಿ ಎಂದು ಹೇಳಿಸಿಕೊಳ್ಳುವ ಇದು–ಅವಿದ್ಯಾ ಕಲ್ಪಿತವಾಗಿದೆ, ಎಂದಿದ್ದಾರೆ. ಇಲ್ಲಿ ಅವಿದ್ಯಾ ಕಲ್ಪಿತ ಎಂದರೆ ಜಗತ್ತು ನಿಜವಾಗಿ ಇದೆ ಎಂಬ ಗ್ರಹಿಕೆಯೇ ಅವಿದ್ಯೆ. ಅದರಿಂದ ಈ ಜಗದ್ಬೀಜವು ಕಲ್ಪಿತವಾಗಿದೆ – ಎಂದರೆ ಸುಷುಪ್ತಿ ಸಮಾಧಿ–ಮೂರ್ಛೆ ಪ್ರಳಯ ಮುಂತಾದವುಗಳಲ್ಲಿ ಜಗತ್ತು ಬೀಜರೂಪದಿಂದಿದ್ದು ಪುನಃ ತೋರಿಕೊಳ್ಳುವದೆಂಬ ವ್ಯವಹಾರವಾಗುತ್ತದೆ ಎಂದರ್ಥ. ಇದರ ಮೂಲಕವೇ ಅದ್ವಿತೀಯನಾದ ಆತ್ಮನು 'ಈಶ್ವರ' (ಆಳುವವ) ಎನಿಸಿಕೊಳ್ಳುತ್ತಾನೆ. ಆದ್ದರಿಂದ ಇದು ಈಶ್ವರನ 'ಶಕ್ತಿ' ಎನಿಸುತ್ತದೆ. ಇದು ಈಶ್ವರನಿಗಿಂತ (ಎಂದರೆ ತಾನೇ ತಾನಾಗಿರುವ ಆತ್ಮನಿಗಿಂತ ಸ್ವತಂತ್ರವಾದ ಇರುವಿಕೆಯುಳ್ಳದ್ದಲ್ಲ. ಹಾಗೂ ನಿಜವಾಗಿಯೂ ಆತ್ಮನಲ್ಲಿ ಇದ್ದೇಬಿಟ್ಟಿದ್ದೂ ಅಲ್ಲವಾದ್ದರಿಂದ ಇದನ್ನು 'ಅನಿರ್ವಚನೀಯ' ಎಂದಿದೆ. ಅನಿರ್ವಚನೀಯ ಎಂದರೆ ನಮಗೆ ಹೇಳಲಿಕ್ಕೆ ಬರುವದಿಲ್ಲ ಎಂಬ ಅಶಕ್ತಿಕ ಸೂಚಕ ಶಬ್ದವಲ್ಲ. ಮತ್ತೇನೆಂದರೆ ಅವಿದ್ಯೆಯಿಂದ ಕಲ್ಪಿಸಿದ ಹುಸಿ ತೋರಿಕೆಯು, ಯಾವ ಆಧಾರದಲ್ಲಿ

ಕಲ್ಪಿಸಲ್ಪಡುವದೋ ಆ ಆಧಾರಕ್ಕಿಂತ ಬೇರೆಯಾಗಿ ಸ್ವತಂತ್ರವಾಗಿಯೂ ಇಲ್ಲ, ನಿಜವಾಗಿಯೂ ಆ ಆಧಾರವಸ್ತುವಿನಲ್ಲಿ ಇರತಕ್ಕದ್ದೂ ಅಲ್ಲ ಎಂದು ಹುಸಿ ತೋರಿಕೆಯನ್ನು ವರ್ಣಿಸಿರುವ ಸರಿಯಾದ ರೀತಿಯಾಗಿದೆ. ಉದಾಹರಣೆ – ಹಗ್ಗವನ್ನರಿಯದ ಅವಿದ್ಯೆಯಿಂದ ಕಲ್ಪಿಸಲ್ಪಟ್ಟ ಹಾವು ಹಗ್ಗಕ್ಕಿಂತ ಸ್ವತಂತ್ರವಾದ ಇರುವಿಕೆ ಉಳ್ಳದ್ದೂ ಅಲ್ಲ, ಹಗ್ಗಕ್ಕಿಂತ ನಿಜವಾಗಿಯೂ ಇಲ್ಲ, ಆದ್ದರಿಂದ ಅನಿರ್ವವನೀಯ – ಎಂದೆನ್ನಬೇಕು. ಈ ಜಗದ್ಬೀಜವು ವ್ಯಕ್ತಾವ್ಯಕ್ತಾತ್ಮಕವಾಗಿದೆ, ಎಂದರೆ ಒಮ್ಮೆ ತೋರುತ್ತದೆ – ಒಮ್ಮೆ ಅಡಗುತ್ತದೆ. ಅಡಗಿದಾಗ ತೊಲಗಿರುವದಿಲ್ಲ. ಪುನಃ ತೋರಿಕೊಂಡಾಗ ಹಿಂದೆ ಇದ್ದದ್ದೇ ತೋರಿತೆಂದು ಗೊತ್ತಾಗುತ್ತದೆ. ಕತ್ತಲಲ್ಲಿ ಹಗ್ಗವನ್ನು ಹಾವೆಂದು ತಿಳಿದಾಗ ಒಮ್ಮೆ ಕಾಣದೇ ಹೋಗಬಹುದಾದರೂ ಪುನಃ ಕಂಡಾಗ ಅಗೋ ಅದೇ ಹಾವು ಮತ್ತೆ ತೋರುತ್ತಿದೆ, ನಡುವೆ ಅಡಗಿತ್ತು – ಎಂದು ಹೇಗೆ ಹೇಳುವೆವೋ ಹಾಗೆ. ಹೀಗೆ ಈ ಪ್ರಕೃತಿ, ಮಾಯೆ, ಜಗದ್ಬೀಜವೆಂಬ ತತ್ತ್ವವು ಅವಿದ್ಯಾಕಲ್ಪಿತ, ಅನಿರ್ವಚನೀಯ, ವ್ಯಕ್ತಾವ್ಯಕ್ತಾತ್ಮಕ, ಈಶ್ವರ ಶಕ್ತಿಯಾಗಿರುವದೆಂಬುದು ಶ್ರೀ ಶಂಕರರ ಅಭಿಪ್ರಾಯವು. ಇದನ್ನೇ **ಅವಿದ್ಯಾ ಪ್ರತ್ಯತುಪಸ್ಥಾಪಿತ – ಅವಿದ್ಯಾತ್ಮಕ – ಅವಿದ್ಯಾಕೃತ – ಅವಿದ್ಯಾಕಾರ್ಯ – ಅವಿದ್ಯಾಲಕ್ಷಣ** – ಎಂದು ಬಗೆಬಗೆಯಿಂದ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಶ್ರೀ ಶಂಕರರು ತೋರಿಸಿದ್ದಾರೆ. ಈ ಬಗ್ಗೆ ಸೂ.ಭಾ. – 2–1–14 ರಲ್ಲಿಯ **"ಸರ್ವಜ್ಞಸ್ಯೇಶ್ವರಸ್ಯ ಎಂಬಲ್ಲಿಂದ ಹಿಡಿದು..... ಉಪ ಪದ್ಯತೇ?** ಎಂಬವರೆಗಿನ ವಾಕ್ಯವನ್ನು ಪೂರ್ತಿ ನೋಡಬೇಕು. ಇಲ್ಲಿ (ಅವಿದ್ಯಾ ಲಕ್ಷಣ ಎಂಬುದೊಂದನ್ನು ಉಳಿದು) ಅವಿದ್ಯಾ ಕಲ್ಪಿತ ಮುಂತಾದ ಎಲ್ಲ ವಿಶೇಷಣಗಳನ್ನೂ ಈ ಅವ್ಯಕ್ತ ಜಗದ್ಬೀಜಕ್ಕೆ ಉಪಯೋಗಿಸಿ ಅವಿದ್ಯಾ ದೃಷ್ಟಿಯಿಂದಲೇ ಇದನ್ನು ಒಪ್ಪಿದೆಯೇ ಹೊರತು ವಿದ್ಯೆಯಿಂದ ಅವಿದ್ಯೆಯು ಹೊರಟುಹೋದಾಗಿನ ಪರಮಾರ್ಥ ದೃಷ್ಟಿಯಿಂದ ಇದು ಅಲ್ಲ, ಎಂದು ಇದೇ ವಾಕ್ಯದ ಕೊನೆಯಲ್ಲಿ ಹೇಳಿದ್ದಾರೆ. ಗೀತಾಭಾಷ್ಯದಲ್ಲಿ ಪ್ರಕೃತಿಯನ್ನು 'ಅವಿದ್ಯಾಲಕ್ಷಣ' ಎಂದೇ ಬಹಳ ಬಾರಿ ಕರೆದಿರುತ್ತಾರೆ. ಹಾಗೂ ಈಗ ಅದ್ವಿತೀಯನಾದ ಕೇವಲ ತಾನಾದ ಸ್ವರೂಪದಲ್ಲಿ – ಕನಸಿನಲ್ಲಿ ನಿಜವಾಗಿಲ್ಲದಿರುವ ಸಮಗ್ರ ದ್ವೈತ ಪ್ರಪಂಚವು ಹೇಗೆ ಇದ್ದಂತೆ ಭಾಸವಾಗುವದೋ ಹಾಗೆ – ಈ ಎಚ್ಚರದಲ್ಲಿಯೂ ಪ್ರಪಂಚವು ಕಡಿವಡೆಯದೆ ಇರುವದೆಂದು ಅವಿದ್ಯೆಯಿಂದ ನಂಬುವೆವೋ ಹಾಗೆಂಯೇ ಪ್ರಳಯ–ಸುಷುಪ್ತಿ ಮುಂತಾದವುಗಳಲ್ಲಿ ಇದರ

ಬೀಜವಿರುವದೆಂಬುದನ್ನೂ ಒಪ್ಪಬೇಕಾದ್ದು ವ್ಯವಹಾರ ದೃಷ್ಟಿಗೆ ಸಮಂಜಸವಾಗಿರುತ್ತದೆ, ಎಂದು ಸೂ.ಭಾ. –2–1–9ರ **"ಯಥಾಹಿ ಅವಿಭಾಗೇಪಿ ಪರಮಾತ್ಮನಿ"** ಎಂಬ ಮುಂತಾದ ವಾಕ್ಯಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಹೀಗೆಯೇ ಮಾಂಡೂಕ್ಯದ 1ನೇ ಪ್ರಕರಣದ 5ನೇ ಕಾರಿಕೆಯ ಭಾಷ್ಯದಲ್ಲಿ **"ನಿರ್ಬೀಜತಯೈವ ಚೇತ್ ಸತಿ ಪ್ರಲೀನಾನಾಂ ಸಂಪನ್ನಾನಾಂ ಸುಷುಪ್ತಿ ಪ್ರಲಯಯೋಃ ಪುನರುತ್ಥಾನ ಅನುಪಪತ್ತಿಃ ಸ್ಯಾತ್"** – ಎಂಬ ವಾಕ್ಯದಿಂದ ಕೃತಪ್ರಣಾಶ ಅಕೃತಾಭ್ಯಾಗಮ ದೋಷಗಳು (ಎಂದರೆ ಮಾಡಿದ್ದು ಫಲ ಕೊಡದೇ ಹೋಯಿತು– ಮಾಡದಿದ್ದದ್ದು ಬಂತು ಎಂಬುವವುಗಳು ಅನುಭವವಿರುದ್ಧವಾದ ದೋಷಗಳು) ಬರಬಾರದೆಂದು ಈ ಅವ್ಯಕ್ತಬೀಜಾವಸ್ಥೆಯನ್ನು ನಿದ್ರಾದಿಗಳಲ್ಲಿ ಅವಿದ್ಯಾದೃಷ್ಟಿಯಿಂದ ಒಪ್ಪಲೇಬೇಕು, ಎಂದು ಹೇಳಿ ಇಲ್ಲಿಯೇ ಮುಂದೆ **"ಜ್ಞಾನ ದಾಹ್ಯ ಬೀಜಾಭಾವೇ ಚ ಜ್ಞಾನಾನರ್ಥಕ್ಯ ಪ್ರಸಂಗಃ"** ಜ್ಞಾನದಿಂದ ಸುಡಬೇಕಾದ ಬೀಜವೇ ಇಲ್ಲದಿದ್ದರೆ ಆತ್ಮಜ್ಞಾನವನ್ನು ಉಪದೇಶಿಸುವದೇ ವ್ಯರ್ಥವಾಗುತ್ತದೆ – ಬರೀ ನಿದ್ರೆ ಮಾಡಿದ ಮಾತ್ರಕ್ಕೇ ಮೋಕ್ಷವೆಂಬ ನಗೆಗೀಡಾದ ಮಾತನ್ನಾಡಿದಂತಾಗುತ್ತದೆ – ಎಂದು ಹೇಳಿದ್ದಾರೆ. ಇಲ್ಲಿ ಬೀಜವು–(ಜಗದ್ಬೀಜ) ಅವ್ಯಕ್ತವು ಜ್ಞಾನದಿಂದಲೇ ಇದೇ ರೀತಿ ಈಗಿನ ಎಚ್ಚರದ ಬುದ್ಧಿಯು – (ವಿಚಾರಗಳು ವಾಸನೆಗಳು) ಸಹ ನಿದ್ರೆಯಲ್ಲಿ ಶಕ್ತಿರೂಪದಿಂದ – ಬೀಜರೂಪದಿಂದ ಇದ್ದೇ ಇರುವವೆಂಬುದನ್ನೂ ಸಹ ಈಗ ಬುದ್ಧಿಯ ಸಂಬಂಧವು ಆತ್ಮನಿಗೆ ಇದೆ ಎಂಬ ಅವಿದ್ಯಾ ದೃಷ್ಟಿಯನ್ನವಲಂಬಿಸಿ ಕಲ್ಪಿಸಲಾಗುತ್ತದೆ. ಇಲ್ಲದಿದ್ದರೆ ಮಲಗಿದವನೇ ಏಳುತ್ತಾನೆಂಬ ಲೋಕಾನುಭವಕ್ಕೆ ವಿರೋಧವಾಗುವದು, ಎಂಬುದನ್ನು ಸೂ.ಭಾ. 2–3–31ರಲ್ಲಿ **"ಯಥಾ ಲೋಕೇ ಪುಂಸ್ತ್ವಾದೀನಿ ಬೀಜಾತ್ಮನಾ ಏವಮಯಮಪಿ ಬುದ್ಧಿಸಂಬಂಧಃ ಶಕ್ತ್ಯಾತ್ಮನಾ ವಿದ್ಯತ ಏವ, ಸುಷುಪ್ತಿ ಪ್ರಲಯಯೋಃ"** ಮುಂತಾದ ವಾಕ್ಯಗಳಲ್ಲಿ ತಿಳಿಸಿದ್ದಾರೆ. ಭೌತಿಕ ವಿಜ್ಞಾನದವರು ಗಾಢನಿದ್ರೆಯಲ್ಲೂ ಮೆದುಳಿನ ತರಂಗಗಳು ಸೂಕ್ಷ್ಮವಾಗಿರುವವೆಂದು ಶೋಧಿಸಿದ ವಿಷಯವನ್ನು ಹಿಂದೆ ಹೇಳಿತ್ತಷ್ಟೆ. ವ್ಯವಹಾರಿಕದೃಷ್ಟಿಯಿಂದ ಇಲ್ಲಿಯೂ ಅದನ್ನು ಈ ಮೇಲಿನ ಮಾತಿನಿಂದ ಒಪ್ಪಿದಂತೆಯೇ ಆಗಿರುತ್ತದೆ.

* * * * *

# ಅಧ್ಯಾಯ – 9

# ನಿದ್ರಾನುಭವವೂ ಅವಿದ್ಯೆಯೂ

ಹಿಂದಿನ ಅಧ್ಯಾಯದಲ್ಲಿ ವ್ಯಾವಹಾರಿಕ ದೃಷ್ಟಿಯಿಂದ (ಇದನ್ನೇ ಅವಿದ್ಯಾ ದೃಷ್ಟಿ, ಅಧ್ಯಾರೋಪ ದೃಷ್ಟಿ ಎನ್ನುತ್ತಾರೆ) ಗಾಢನಿದ್ರೆಯಲ್ಲಿ ಜಗದ್ಬೀಜವೂ ಬುದ್ಧಿ ಸಂಬಂಧ (ವಾಸನಾ ಬೀಜ)ವೂ ಇರುವದೆಂದು ಅನುಮಾನಿಸುವದು ಯೋಗ್ಯವಾಗಿದೆ ಎಂಬುದನ್ನು ತಿಳಿಸಿರುತ್ತದೆ. ಸೂ.ಭಾ. 2–1–9ರಲ್ಲಿ ಶ್ರೀ ಶಂಕರಾಚಾರ್ಯರು **"ಯಥಾ ಹಿ ಅವಿಭಾಗೇಪಿ"** ಎಂಬ ವಾಕ್ಯದಲ್ಲಿ ಕೊನೆಯಲ್ಲಿ **"ಮಿಥ್ಯಾಜ್ಞಾನಪ್ರತಿಬದ್ಧೈವ ವಿಭಾಗ ಶಕ್ತಿರನುಮಾಸ್ಯತೇ"** ಎಂಬ ಮಾತಿನಿಂದ ಜಗತ್ತಿದೆ ಎಂಬ ತಪ್ಪುತಿಳಿವಿಕೆಯ ಆಧಾರದಿಂದಲೇ ನಿದ್ರೆಯಲ್ಲಿ ಬೀಜ ಶಕ್ತಿಯು (ವಿಭಾಗ ಶಕ್ತಿ) ಎಂದರೆ ಜಗದ್ಬೀಜವು ಇದೆ ಎಂದು ಅನುಮಾನಿಸಲ್ಪಡುತ್ತದೆ, ಎಂದು ಸ್ಪಷ್ಟವಾಗಿ ಬರೆದೇ ಬಿಟ್ಟಿದ್ದಾರೆ. ಆದ್ದರಿಂದ ಭೌತಿಕ ವಿಜ್ಞಾನದವರು ಹೊರನೋಟದ ಪರಿಶೋಧನೆ ನಡೆಸಿ ಗಾಢನಿದ್ರೆಯಲ್ಲೂ ಮೆದುಳಿನ ತರಂಗಗಳಿರುವವೆಂಬುದನ್ನು ಪ್ರಯೋಗಗಳಿಂದ ಸಿದ್ಧಪಡಿಸಿರುವದೆಲ್ಲವೂ "ಇಲ್ಲಿ ಜಗತ್ತಿದೆ, ಹೊರಗೆ ಜನರಿದ್ದಾರೆ, ಪ್ರಯೋಗ ಮಾಡುವ 'ನಾನು' ಜಗತ್ತಿನಲ್ಲಿ ಹುಟ್ಟಿ ಇದಕ್ಕೆ ಸೇರಿದವನು" ಎಂದು ಮುಂತಾದ ಗ್ರಹಿಕೆಯ ಆಧಾರದಿಂದಲೇ ತೀರ್ಮಾನಿಸಿದ್ದಾಗಿದೆ. ವೇದಾಂತವು ಈ ಮೂಲಭೂತ ಗ್ರಹಿಕೆಯೇ ಅವಿದ್ಯೆ – ತಪ್ಪುತಿಳಿವಿಕೆ, ನಿಜವನ್ನು ತಿಳಿಯದ್ದರಿಂದ ಕಲ್ಪಿಸಿಕೊಂಡ ವಿಪರೀತಜ್ಞಾನ – ಎಂದು ಹೇಳುತ್ತದೆ. ವೇದಾಂತದ ಪ್ರಕಾರ (1) ಇಡೀ ಎಚ್ಚರದ ಅವಸ್ಥೆಯೇ ತನ್ನಲ್ಲಿ ತೋರುವದರಿಂದ 'ತಾನು' (ಈಗಿನ "ನಾನು ಇಂಥವನು" ಎಂಬುದಕ್ಕಿಂತ ಬೇರೆಯಾದ ಸಾಕ್ಷಿ ಸ್ವರೂಪವು) ಜಗತ್ತಿಗೆ ಒಳಪಟ್ಟವನಲ್ಲ, ಜಗತ್ತೇ ತನ್ನಲ್ಲಿ ತೋರಿ ಅಡಗತಕ್ಕದ್ದು (2) ಪ್ರಪಂಚ – ಅಥವಾ ಅವಸ್ಥೆ – ಎಲ್ಲವೂ ಸಾಕ್ಷಿ ಸ್ವರೂಪನಾದ ಈ ತನ್ನಿಂದಲೇ (ಆತ್ಮನಿಂದಲೇ) ವ್ಯಾಪ್ತವಾದದ್ದನ್ನು ಲಕ್ಷಿಸಿದರೆ ಪ್ರಪಂಚ ಅಥವಾ ಅವಸ್ಥೆ ಎಂಬುದಿಲ್ಲವೇ ಇಲ್ಲ. ಬರೀ ತಾನೇ ತಾನಾಗಿರುವದೆಂಬ ಅನುಭವದಲ್ಲಿ ನಿಂತಾಗ ಅದ್ವಿತೀಯಾನುಭವವೇ ನಿಲ್ಲುವದು. ಇದೇ ಸರಿಯಾದ ಜ್ಞಾನವು. ಇದಕ್ಕೆ ವಿರುದ್ಧವಾಗಿ ಎಲ್ಲರೂ ಸ್ವಾಭಾವಿಕವಾಗಿ ಸಹಜವಾಗಿ ನಂಬಿಕೊಂಡಿರುವ ಎಲ್ಲಾ ವ್ಯವಹಾರಕ್ಕೂ ಬೇಕಾಗಿರುವ "ನಾನು ಇಂಥವನು" "ಇದು ಜಗತ್ತು" ಎಂದು ತಿಳಿಯುವದೇ

ತಪ್ಪುತಿಳಿವಿಕೆ, ಎಂಬುದು ವೇದಾಂತದ ನಿರ್ಣಯವು. ಆದ್ದರಿಂದ ಭೌತಿಕ ವಿಜ್ಞಾನದಂತೆ ನಿದ್ರೆಯಲ್ಲಿ ಮೆದುಳಿನ ತರಂಗಗಳ ವ್ಯಾಪಾರವಿರುವದೆಂದೇ ಹೇಳಲಿ ವೇದಾಂತವನ್ನು ಓದಿದವರು ವಾಸನಾಬೀಜ (ಬುದ್ಧಿ ಸಂಬಂಧ) ಜಗದ್ಬೀಜ (ಮಯಾಶಕ್ತಿ) ಇರುವದೆಂದೇ ಹೇಳಲಿ, ಇದೆಲ್ಲವೂ ಈಗಿನ ತಪ್ಪು ತಿಳಿವಿಕೆಯ ಆಧಾರದಿಂದ ಅನುಮಾನಿಸಿರುವದೇ ಹೊರತು ನಿಜವಾಗಿಯೂ ನಿದ್ರಾನುಭವವ ದೃಷ್ಟಿಯಿಂದ ನೋಡಿದರೆ ಇನ್ನೊಂದಿಲ್ಲದ ಬರೀ ತಾನೇ ತಾನಾಗಿರುವದೇ ಅನುಭವ ಸಮ್ಮತವಾದ ನಿರ್ಣಯವು. ಈಗ ನಿದ್ರೆಯಲ್ಲಿ ನಮಗೆ ಏನೂ ತಿಳಿಯುವದಿಲ್ಲವಾದ್ದರಿಂದ ಅವಿದ್ಯೆ (ತಮಸ್ಸು) ಅಥವಾ ಅಜ್ಞಾನವಿದೆ ಎನ್ನಬೇಕಲ್ಲವೇ? ಎಂಬುದು ಕೆಲವರ ಅಭಿಪ್ರಾಯ. ಈ ಅಭಿಪ್ರಾಯವೂ ಮೇಲೆ ಹೇಳಿದ ತಪ್ಪುತಿಳಿವಿಕೆಯ ('ನಾನು ಇಂಥವನು', 'ಇದು ಜಗತ್ತು' ಎಂಬುದೇ ನಿಜವೆಂದಿಟ್ಟುಕೊಂಡಿರುವ ಗ್ರಹಿಕೆಯ) ಆಧಾರದಿಂದಲೇ ಹೇಳತಕ್ಕ ಮಾತಾಗಿರುತ್ತದೆ. ಈ ವ್ಯಾವಹಾರಿಕ ದೃಷ್ಟಿಯನ್ನಿಟ್ಟುಕೊಂಡು ನಿದ್ರೆಯಲ್ಲಿ 'ಜ್ಞಾನಾಭಾವ' ಅಥವಾ ಅಗ್ರಹಣ ರೂಪದ ಅವಿದ್ಯೆಯನ್ನು ಒಪ್ಪಬಹುದೆಂದು ಶ್ರೀ ಶಂಕರರೂ ತಮ್ಮ ಭಾಷ್ಯದಲ್ಲಿ ಬರೆದಿದ್ದಾರೆ. ಜ್ಞಾನಾಭಾವ – ಅಗ್ರಹಣ – ಎಂದರೆ ತಿಳಿಯದಿರುವದು ಎಂದರ್ಥ. ಅವಿದ್ಯೆ ಅಥವಾ ಅಜ್ಞಾನ ಎಂಬ ಶಬ್ದಕ್ಕೆ (1) ತಿಳಿಯದಿರುವದು (2) ತಪ್ಪಾಗಿ ತಿಳಿಯುವದು (3) ಸಂಶಯಪಡುವದು ಎಂಬ ಮೂರು ಬಗೆಯ ಅರ್ಥಗಳಿವೆ. ಲೋಕದಲ್ಲಿ ಎಲ್ಲರೂ ಇವುಗಳನ್ನು ಈ ಅರ್ಥದಲ್ಲಿಯೇ ಉಪಯೋಗಿಸುತ್ತಾರೆ. ಈ ಮೂರೂ ನಮ್ಮ ಬುದ್ಧಿಗೆ ಸಹಜವಾಗಿರುತ್ತವೆ. ಇದರಲ್ಲಿ ತಪ್ಪಾಗಿ ತಿಳಿಯಲು ಹಾಗೂ ಸಂಶಯಪಡಲು ತಿಳಿಯದಿರುವದೇ ಕಾರಣವಾದ್ದರಿಂದ ತಿಳಿಯದಿರುವದೆಂಬುದನ್ನು (ಅಗ್ರಹಣ, ಜ್ಞಾನಾಭಾವ ಎಂಬುದನ್ನು) **ಕಾರಣಾವಿದ್ಯೆ** ಎಂದೂ ತಪ್ಪುತಿಳಿವಿಕೆ ಸಂಶಯಗಳನ್ನು **ಕಾರ್ಯಾವಿದ್ಯೆ,** ಮಿಥ್ಯಾದರ್ಶನ ಎಂದೂ ಕರೆಯುತ್ತಾರೆ. ವಿಪರೀತಜ್ಞಾನ, ವಿಪರೀತ ಪ್ರತ್ಯಯ, ಮಿಥ್ಯಾಪ್ರತ್ಯಯ, ಅಧ್ಯಾಸ, ವಿಪರೀತ ಗ್ರಹಣ – ಮಿಥ್ಯಾಗ್ರಹಣ ಕಾರ್ಯಾವಿದ್ಯೆ ಇವೆಲ್ಲಾ ಶಬ್ದಕ್ಕೂ ತಪ್ಪುತಿಳಿವಿಕೆ ಎಂದೇ ವೇದಾಂತದಲ್ಲಿ ಅರ್ಥವಿದೆ. ವೇದಾಂತದ ಪ್ರಕಾರ ಆತ್ಮನೊಂದೇ ಇರತಕ್ಕದ್ದು. ಆದು ನಮಗೆ ತಿಳಿದಿಲ್ಲ. ಇದೇ ಅಗ್ರಹಣ (ಜ್ಞಾನಾಭಾವ) ಅಥವಾ ಕಾರಣಾವಿದ್ಯೆ. ಇದಕ್ಕೆ ವಿರುದ್ಧವಾಗಿ "ನಾನು ಇಂಥವನು. ಇದು ಜಗತ್ತು" ಎಂದು ಅದೇ ಅದ್ವಿತೀಯಾತ್ಮನನ್ನು ತಿಳಿಯುತ್ತಿದ್ದೇವೆ.

ಇದೇ ತಪ್ಪುತಿಳಿವಿಕೆ ರೂಪದ ಕಾರ್ಯಾವಿದ್ಯೆ ಅರ್ಥಾತ್ ಅಧ್ಯಾಸವು. ಒಮ್ಮೊಮ್ಮೆ ನಾನು ಎಂದರೇನು? ಎಂದೋ ಜಗತ್ತಿಗೆ ಮೂಲವೇನು? ಎಂದು ಸಂಶಯವೂ ನಮಗೆ ಬರುತ್ತದೆ. ಇದು ಸಂಶಯರೂಪವಾದ ಕಾರ್ಯಾವಿದ್ಯೆ. ಈ ಮೂರೂ ಬಗೆಯ ಅವಿದ್ಯೆಯು ಆತ್ಮಜ್ಞಾನದಿಂದಲೇ – ಎಂದರೆ ಸರಿಯಾದ ತಿಳಿವಿಕೆಯಿಂದಲೇ ಹೋಗಬೇಕು. ಸರಿಯಾದ ತಿಳಿವಿಕೆಯನ್ನು **'ಸಮ್ಯಗ್ದರ್ಶನ'** ಎನ್ನುತ್ತಾರೆ. ಹೊರಗಿನ ವಸ್ತುಗಳ ಬಗೆಗೆ ಹಿಂದೆ ಹೇಳಿದ ಅವಿದ್ಯಾತ್ರಯವು (ಅರಿಯದಿರುವದು, ತಪ್ಪಾಗಿ ತಿಳಿಯುವದು, ಸಂಶಯ ಮಾಡುವದು) ನಮ್ಮ ಬುದ್ಧಿಗೆ ಸಹಜವಾಗಿದ್ದು ಆಯಾ ವಸ್ತುವಿನ ಜ್ಞಾನವಾದೊಡನೆಯೇ ಅದೆಲ್ಲವೂ ಹೊರಟು ಹೋಗುವದು ಹೇಗೆ ಎಲ್ಲರಿಗೂ ಅನುಭವದಲ್ಲಿರುವದೋ ಹಾಗೆಯೇ ಆತ್ಮಸ್ವರೂಪದ ಬಗೆಗಿರುವ ಈ ಮೂರೂ ಬಗೆಯ ಅವಿದ್ಯೆಯು ಎಲ್ಲರಿಗೂ ಅನುಭವದಲ್ಲಿದೆ. ಹಾಗೂ ಆತ್ಮನ ಬಗೆಗೆ ಸರಿಯಾದ ಜ್ಞಾನವು ಬಂದೊಡನೆಯೇ ಅವಿದ್ಯೆ ಹೊರಟುಹೋದದ್ದೂ ಇಲ್ಲಿಯೇ ಈಗಲೇ ಅನುಭವಕ್ಕೆ ಗೋಚರವಾಗಿಯೇ ತೀರುತ್ತದೆ. ಆದ್ದರಿಂದ ಆತ್ಮಜ್ಞಾನವನ್ನು ಸಂಪಾದಿಸಬೇಕೆಂಬುದು ಏರ್ಪಡುತ್ತದೆ. ಈ ಬಗೆಯ ಆತ್ಮಜ್ಞಾನವು ಇಲ್ಲದಿರುವಾಗ ನಾವು ಎಚ್ಚರದಲ್ಲಿರಲಿ, ಕನಸಿನಲ್ಲಿರಲಿ, ನಿದ್ರೆಯಲ್ಲಿರಲಿ ಅವಿದ್ಯೆಯ ಅಧೀನದಲ್ಲಿಯೇ ಇರುತ್ತೇವೆಂದು ತಿಳಿಯಬೇಕು. ಶ್ರುತಿಗಳ ಹಾಗೂ ಬ್ರಹ್ಮನಿಷ್ಠರ ದೃಷ್ಟಿಯಿಂದ ಗಾಢ ನಿದ್ರೆಯಲ್ಲಿ ಬರೀ ಅರಿವಿನ ರೂಪನಾದ ಅದ್ವಿತೀಯಾತ್ಮನೇ ನಾವಾಗಿರುವೆವಾದರೂ ನಮಗೆ ಅದರ ಅರಿವೇ ಇಲ್ಲದ್ದರಿಂದ – ಎಂದರೆ ಈಗಿನ 'ನಾನು' ಎಂಬುದೇ ನಮ್ಮ ಸ್ವರೂಪವೆಂಬ ತಪ್ಪುತಿಳಿವಿಕೆ ಯಿಂದಲೇ ಕಟ್ಟಲ್ಪಟ್ಟ ಬುದ್ಧಿಯವರಾಗಿದ್ದರಿಂದ – ಆ ನಿದ್ರೆಯ ಅನುಭವದಿಂದ ನಮಗೆ ಈಗ್ಗೆ ಏನೂ ಪ್ರಯೋಜನವಾಗದೆ ಇರುತ್ತದೆ. ಆದ್ದರಿಂದ "ಇಂಥಿಂಥವನಾದ ನಾನು ಈಗ ನಿದ್ರೆಗೆ ಹೋಗುತ್ತೇನೆ, ಅಲ್ಲಿ ನನಗೇನೂ ತಿಳಿಯುವದಿಲ್ಲ, ಪುನಃ ಮರಳಿ ಎಚ್ಚರಕ್ಕೆ ಬರುತ್ತೇನೆ. ಅದೇ ಹಿಂದಿನ ನಾನೇ ಯಾವಾಗಲೂ ಆಗಿದ್ದೇನೆ" ಎಂದು ಬಗೆಯುತ್ತೇವೆ. ಇದೇ ಅವಿದ್ಯೆ. ಈ ದೃಷ್ಟಿಯಿಂದಲೇ ನಿದ್ರೆಯಿಂದ ಎಚ್ಚರಕ್ಕೆ ಬರಲು ಅವಿದ್ಯೆಯೇ ಕಾರಣ ಎಂದು ಹೇಳಿರುತ್ತದೆ. ಇಲ್ಲಿ 'ಅವಿದ್ಯೆ' ಎಂದರೆ ಆತನನ್ನರಿಯದೇ ಇದ್ದುದು – ತಪ್ಪಾಗಿ ತಿಳಿದದ್ದು ಎಂದರ್ಥ. ಅಂತೂ ಸಾಮಾನ್ಯರ ದೃಷ್ಟಿಯಿಂದ ಹೊರಗಿನ ವಸ್ತುಗಳನ್ನರಿಯದ ಅವಿದ್ಯೆ, ವೇದಾಂತದ ದೃಷ್ಟಿಯಿಂದ ಆತ್ಮನ ನಿಜಸ್ವರೂಪವನ್ನ ರಿಯದಿರುವ ಅವಿದ್ಯೆ – ಇವೆರಡನ್ನೂ ಭಾಷ್ಯಕಾರರೂ

– ಕಾರಿಕಾಕಾರರಾದ ಗೌಡಪಾದರೂ ಅಧ್ಯಾರೋಪ ದೃಷ್ಟಿಯಿಂದ ಒಪ್ಪಿದ್ದಾರೆ. ಛಾಂ. 6–9–3ರಲ್ಲಿ **"ತ ಇಹ ವ್ಯಾಘ್ರೋ ವಾ"** ಮುಂತಾದ ಮಂತ್ರದಲ್ಲಿ ಮತ್ತೆ 'ನಾನು' ಎಂದು ಹೊರಬರಲು ಅವಿದ್ಯೆಯೇ ಕಾರಣ ಎಂದಿದೆ. ಮಾಂ – ಮಂತ್ರ – 7ರಲ್ಲಿ **"ದರ್ಶನಾದರ್ಶನ ವೃತ್ತ್ಯೋಃ ತತ್ತ್ವಾಪ್ರತಿಬೋಧಲಕ್ಷಣಸ್ಯ ಸ್ವಾಪಸ್ಯ ತುಲ್ಯತ್ವಾತ್"** ಎಂಬ ವಾಕ್ಯದಲ್ಲಿ ನಿದ್ರೆಯಲ್ಲಿ ಎಚ್ಚರದಲ್ಲಿಯು ಸತ್ಯವಾದ ವಸ್ತುಗಳನ್ನರಿಯುವ ಜ್ಞಾನವೂ ಇಲ್ಲದ್ದರಿಂದ ಅವಿದ್ಯೆ ಇದ್ದಂತಾಯಿತು – ಎಂದು ಸಾಮಾನ್ಯರ ಅಭಿಪ್ರಾಯದಂತೆ ಅವಿದ್ಯೆಯನ್ನನುವಾದ ಮಾಡಿಕೊಂಡು ಇಲ್ಲಿಯೇ ಮುಂದೆ **"ಅಥವಾ ತ್ರಿಷ್ವಪಿ ಸ್ಥಾನೇಷು ತತ್ತ್ವಾಪ್ರತಿಬೋಧಲಕ್ಷಣಃ ಸ್ವಾಪೋ ಅವಿಶಿಷ್ಟ ಇತಿ"** ಎಂಬ ಮಾತಿನಿಂದ ಆತ್ಮನನ್ನರಿಯದಿರುವ ಅವಿದ್ಯೆಯೂ ಮೂರು ಅವಸ್ಥೆಗಳಿಗೂ ಸಮಾನವಾಗಿರುವದು ಎಂದು ಹೇಳಿ ವೇದಾಂತದ ಪ್ರಕಾರ ಆತ್ಮವಿಜ್ಞಾನವಿಲ್ಲದಿರುವ ಅವಿದ್ಯೆಯನ್ನೂ ಗಾಢನಿದ್ರೆಯಲ್ಲಿ ಇರುವದೆಂದು ಕಲ್ಪಿಸಬೇಕೆಂಬುದನ್ನು ಆಚಾರ್ಯರು ತೋರಿಸಿದ್ದಾರೆ. **"ಪ್ರಾಜ್ಞಃ ಕಾರಣ ಬದ್ಧಸ್ತು" (ಮಾಂ.ಕಾ. – 1–11) "ನಾತ್ಮಾನಂ ನ ಪರಾಂಶ್ಚೈವ"** (ಮಾಂ.ಕಾ. – 1–12) ಎಂಬಲ್ಲಿ ಗೌಡಪಾದರೂ ಈ ಮೇಲಿನ ಎರಡೂ ಬಗೆಯ – (ವ್ಯಾವಹಾರಿಕ – ಶಾಸ್ತ್ರೀಯ) ಅವಿದ್ಯೆ (ಅಗ್ರಹಣ – ಜ್ಞಾನಾಭಾವ) ಎಂಬುದನ್ನು ಒಪ್ಪಿದ್ದಾರೆ. ಆದರೆ ಇದೆಲ್ಲವೂ ಈಗಿನ 'ನಾನು' ಎಂಬ ತಪ್ಪುತಿಳಿವಿಕೆಯ ದೃಷ್ಟಿಯಿಂದ ಕಲ್ಪಿಸಿ ಹೇಳಿದ್ದೇ ಹೊರತು ನಿಜವಾಗಲೂ ನಿದ್ರೆಯಲ್ಲಿ ಇದ್ದೇಬಿಟ್ಟಿರುವದೆಂಬ ಅಭಿಪ್ರಾಯದಿಂದಲ್ಲ – ಎಂಬುದನ್ನು ಮರೆಯಬಾರದು.

* * * * *

# ಅಧ್ಯಾಯ – 10

# ಅವಿದ್ಯಾದಿಗಳ ಬಗೆಗೆ ತಪ್ಪುಗ್ರಹಿಕೆ

ಹಿಂದಿನ ಲೇಖನಗಳಲ್ಲಿ ನಿದ್ರಾನುಭವವನ್ನು ವಿಮರ್ಶಿಸುತ್ತಾ ನಿದ್ರಾನುಭವದ ಬರೀ ತಾನು ಎಂಬ ಸ್ವರೂಪದವನು ಕೇವಲ ಸದ್ರೂಪ ಚಿದ್ರೂಪ ಆನಂದ ರೂಪನೂ, ಇವನಲ್ಲಿಯೇ ಜಾಗ್ರತ್ ಪ್ರಪಂಚವೆಲ್ಲವೂ ತೋರಿ ಅಡಗುವದರಿಂದ ಈ ಸಮಗ್ರ ಪ್ರಪಂಚದ ದೃಷ್ಟಿಯಿಂದ ಈ ಬರೀ ತಾನೇ ಸರ್ವಜ್ಞ ಸರ್ವೇಶ್ವರನಾದ ಈಶ್ವರನೂ ಆಗಿರುವನೆಂಬುದನ್ನು ತಿಳಿಸಿದ್ದಾಗಿದೆ. ಇದಲ್ಲದೆ ಜಾಗ್ರತ್ ಪ್ರಪಂಚವು ಈಗ ಸತ್ಯವಾಗಿದೆ ಎಂಬ ದೃಷ್ಟಿಯಿಂದ ನಿದ್ರೆಯಲ್ಲಿ ಜಗದ್ಬೀಜವಿರುವದೆಂದೂ ನಮಗೆ ಈಗ ಬುದ್ಧಿಯ ಸಂಬಂಧವು ನಿಜವಾಗಿರುವದೆಂಬ ದೃಷ್ಟಿಯಿಂದ ನಿದ್ರೆಯಲ್ಲೂ ಬುದ್ಧಿ ಸಂಬಂಧವು ಬೀಜರೂಪವಾಗಿ (ವಾಸನಾಬೀಜ) ಇರುವದೆಂದೂ ಕಲ್ಪಿಸಬೇಕಾಗುವ ವ್ಯಾವಹಾರಿಕ ದೃಷ್ಟಿಯ ಅಧ್ಯಾರೋಪವನ್ನೂ ತಿಳಿಸಿರುತ್ತದೆ. ಇಷ್ಟೇ ಅಲ್ಲದೆ ನಮಗೆ ಎಚ್ಚರದಲ್ಲಿ ಹೊರಗಿನ ವಸ್ತುಗಳ ಬಗೆಗೆ ಇದು ಇಂಥದ್ದು ಎಂಬ ಸರಿಯಾದ ಜ್ಞಾನವೂ 'ನಾನು ಇಂಥವನು' ಎಂಬ ದೃಷ್ಟಿಯಿಂದ ನಿದ್ರೆಯಲ್ಲಿ ಈ ರೀತಿಯ ಜ್ಞಾನವಿಲ್ಲ. ಆದ್ದರಿಂದ ಜ್ಞಾನದ ಅಭಾವವು ಇದ್ದಂತಾಯಿತೆಂದು ಕಲ್ಪಿಸಬಹುದು. ಇದರಂತೆಯೇ ಶಾಸ್ತ್ರಗಳಲ್ಲಿ ಹೇಳಿದಂತೆ ಇದೆಲ್ಲವೂ ಕೇವಲಾತ್ಮನೇ ಆಗಿದೆ, ಇಲ್ಲಿ ಈಗಲೇ ಸ್ವಲ್ಪವೂ ನಾನಾತ್ವವಿಲ್ಲ ಎಂಬ ಶಾಸ್ತ್ರೀಯ ಜ್ಞಾನವೂ ನಮಗೆ ನಿದ್ರೆಯಲ್ಲಿ ಬರುವ ಹಾಗಿಲ್ಲವಾದ್ದರಿಂದ ಈ ಜ್ಞಾನವು ಬರಬೇಕೆಂಬ ದೃಷ್ಟಿಯಿಂದ ನಿದ್ರೆಯಲ್ಲಿ ಆತ್ಮವಿಜ್ಞಾನದ ಅಭಾವವು (ಅಗ್ರಹಣ ರೂಪದ ಅವಿದ್ಯೆಯು) ಇದ್ದಂತಾಯಿತೆಂದು ಊಹಿಸಲಾಗಿತ್ತು. ಹೀಗೆ ಒಟ್ಟಿನಲ್ಲಿ ಜಗದ್ಬೀಜ, ಬುದ್ಧಿಸಂಬಂಧ, ಅಗ್ರಹಣರೂಪದ ಅವಿದ್ಯೆ, ಈ ಮೂರನ್ನೂ ವ್ಯಾವಹಾರಿಕದ ಅಧ್ಯಾರೋಪದೃಷ್ಟಿಯಿಂದ ನಿದ್ರೆಯಲ್ಲಿರುವಂತೆ ಕಲ್ಪಿಸಿ ವೇದಾಂತದಲ್ಲಿ ತತ್ತ್ವವನ್ನು ಬೋಧಿಸುತ್ತಾರೆ. ಇಷ್ಟನ್ನೂ ಹಿಂದೆ ತೋರಿಸಲಾಗಿದೆ.

ಶ್ರೀ ಶಂಕರಾಚಾರ್ಯರ ಭಾಷ್ಯದಲ್ಲಿಯ ಅಧ್ಯಾರೋಪ ಅಪವಾದ ಎಂಬ ಪರಿಶುದ್ಧ ಸಾಂಪ್ರದಾಯವನ್ನು ಅರಿಯದೆ, ವ್ಯಾವಹಾರಿಕ ದೃಷ್ಟಿ–ಪರಮಾರ್ಥ ದೃಷ್ಟಿ ಎಂಬ ದೃಷ್ಟಿ ಭೇದಗಳನ್ನೂ ಅರಿಯದೆ ಹಾಗೂ ಯಾವ ಯಾವ

ಮಾತುಗಳನ್ನು ಯಾವ ಯಾವ ದೃಷ್ಟಿಗಳಿಂದ ಶ್ರೀ ಶಂಕರರು ಹೇಳುತ್ತಾರೆಂಬುವ ಮರ್ಮವನ್ನರಿಯದೆ ಇಲ್ಲಿ ತೋರಿಸಿರುವ ಈಶ್ವರತ್ವ, ಜಗದ್ಬೀಜ – ಬುದ್ಧಿ ಸಂಬಂಧ ಅಥವಾ ವಾಸನಾಬೀಜ ಅಗ್ರಹಣ ರೂಪದ ಕಾರಣಾವಿದ್ಯೆಗಳ ಬಗೆಗೆ ಈಗ್ಗೆ ತುಂಬಾ ತಪ್ಪು ಅಭಿಪ್ರಾಯಗಳು ಪ್ರಚಾರದಲ್ಲಿ ಬಂದುಬಿಟ್ಟಿವೆ. ಶ್ರೀ ಶಂಕರರ ಭಾಷ್ಯ ಹಾಗೂ ಶ್ರೀ ಸುರೇಶ್ವರರ ವಾರ್ತಿಕದ ಅನಂತರ ಬಂದ ವ್ಯಾಖ್ಯಾನಕಾರರು ಬರೆದಿರುವ ಪಂಚಪಾದಿಕೆ, ಭಾಮತಿ ಗ್ರಂಥಗಳಿಂದ ಹಿಡಿದು ಇವತ್ತಿನವರೆಗಿನ ಪ್ರಾಕೃತ ದೇಶಭಾಷೆಯ ಗ್ರಂಥಗಳವರೆಗಿನ ಎಲ್ಲಾ ಗ್ರಂಥಗಳಲ್ಲೂ ಈ ತಪ್ಪು ಅಭಿಪ್ರಾಯಗಳೇ ಪುಷ್ಟೀಕರಿಸಲ್ಪಟ್ಟು ನಿಜವಾದ ಶಾಂಕರ ಪ್ರಕ್ರಿಯೆಯನ್ನು ಹೇಳಿದರೆ ಸರಳವಾಗಿ ತಿಳಿಯಲೂಬಾರದಷ್ಟು ಜಿಜ್ಞಾಸುಗಳಲ್ಲಿ ಇವು ಗಟ್ಟಿಯಾಗಿವೆ. ಭಾಷ್ಯಗಳು ಪ್ರತ್ಯಕ್ಷವಾಗಿದ್ದೂ ಭಾಷ್ಯ ನಿರೂಪಣೆಯು ಅನುಭವ ಸಮ್ಮತವಾಗಿದ್ದೂ ಅದರ ಕಡೆಗೆ ಲಕ್ಷ್ಯವನ್ನೇ ಕೊಡದೆ ಈ ತಪ್ಪುಕಲ್ಪನೆಯ ವ್ಯಾಖ್ಯಾನಗಳ ಅಪಾರ್ಥಗಳೇ ಶಂಕರರ ಅಭಿಪ್ರಾಯಗಳೆಂದು ನೂರಾರು ವರ್ಷಗಳಿಂದಲೂ ಈ ಮೂಢ ನಂಬಿಕೆಯನ್ನೇ ಪಂಡಿತರೂ ಅನೇಕ ಗ್ರಂಥಕರ್ತೃಗಳೂ ಸಮಾನ್ಯ ಜಿಜ್ಞಾಸುಗಳೂ ಬೆಂಬಲಿಸಿಕೊಂಡು ಬಂದಿರುದನ್ನು ನೋಡಿದರೆ ಜಗತ್ತಿನಲ್ಲಿಯ ಪರಮಾಶ್ಚರ್ಯಗಳಲ್ಲಿ ಇದೂ ಒಂದಾಗಿರುವದೆಂಬುದು ಹೊಳೆಯದಿರದು. ಇರಲಿ. ಈಗ ಜಗದ್ಬೀಜ – ವಾಸನಾಬೀಜ – ಅವಿದ್ಯೆ – ಈಶ್ವರ ತತ್ವಗಳ ಬಗ್ಗೆ ಏನೇನು ತಪ್ಪುಗ್ರಹಿಕೆಗಳು ಬಂದಿವೆ? ಅವು ಯಾವ ಆಧಾರದ ಮೇಲೆ ಬಂದಿವೆ? ಎಂಬುದನ್ನು ಸಂಕ್ಷಿಪ್ತವಾಗಿ ತೋರಿಸಲು ಪ್ರಯತ್ನಿಸಲಾಗುವದು.

"ಅವಿದ್ಯೆಗೆ ಒಂದು ಉಪಾದಾನ ಕಾರಣವಿದೆ" ಎಂದು ಹೇಳುವ ಒಂದು ವರ್ಗವು ಅದ್ವೈತಿಗಳಲ್ಲಿತ್ತೆಂದು ಮಂಡನ ಮಿಶ್ರನ ಬ್ರಹ್ಮಸಿದ್ಧಿ ಎಂಬ ಗ್ರಂಥದಿಂದ ತಿಳಿಯುತ್ತದೆ. ಈ ವಾದಿಗಳಲ್ಲೊಬ್ಬ ಮಹಾ ಪಂಡಿತನು ಶಾಂಕರಭಾಷ್ಯದಲ್ಲಿ ಇದನ್ನು ತೋರಿಸಲು ಮುಂದೆ ಬಂದನು. ಇದರ ಫಲವೇ ಪಂಚಪಾದಿಕಾ ವ್ಯಾಖ್ಯಾನ. ಈ ವ್ಯಾಖ್ಯಾನದಂತೆ ಹಾಗೂ ಇತರ ಗ್ರಂಥಗಳಂತೆ – ಇಲ್ಲಿ ಬಂದಿರುವ ವಿಷಯಗಳ ಜೋಡಣೆ ಹೇಗೆಂದರೆ – (1) ನಿದ್ರೆಯಲ್ಲಿ ಕಾರಣಾವಿದ್ಯೆ ಎಂದು ಗೌಡಪಾದರೂ ಶಂಕರರೂ ಹೇಳಿದ್ದಾರೆ. ಅದರಂತೆಯೇ ಜಗದ್ಬೀಜವೂ ವಾಸನಾ ಬೀಜವೂ ಇರುವದೆಂದೇ ಹೇಳಿದ್ದಾರಾದ್ದರಿಂದ ಜಗದ್ಬೀಜವಾದ ಮಾಯೆಯೇ ನಿಜವಾದ ಕಾರಣಾವಿದ್ಯೆ. ಅಧ್ಯಾಸ – ಅಗ್ರಹಣ – ಸಂಶಯಗಳಿಗೂ ಇದು

ಉಪಾದಾನ ಕಾರಣವಾಗಿದೆ. (2) ನಿದ್ರೆಯಲ್ಲಿ ಏಕತ್ವವೇ (ಇನ್ನೊಂದಿಲ್ಲದಿರುವುದೇ) ಅರಿಯದಿರಲು ಕಾರಣ, ಅವಿದ್ಯೆಯು ಕಾರಣವಲ್ಲ ಎಂಬ ಬೃಹದಾರಣ್ಯಕ ತೈತ್ತಿರೀಯಾದಿ ವಾಕ್ಯಗಳಿಗೆ ಕಾರ್ಯರೂಪವಾದ ಅಧ್ಯಾಸವೆಂಬ ಅವಿದ್ಯೆ ಇಲ್ಲವೆಂದಷ್ಟೇ ಅರ್ಥವೇ ಹೊರತು ನಿದ್ರೆಯು ಸರ್ವಥಾ ಅವಿದ್ಯಾನಿರ್ಮುಕ್ತ ವಾದದ್ದೇನೂ ಅಲ್ಲ. (3) ಮಾಯೆ ಎಂಬುದು ಸಮಸ್ತ ಜಗತ್ತಿನ ಬೀಜ, ತ್ರಿಗುಣಾತ್ಮಕ – ಪ್ರಕೃತಿಯು. ಆದ್ದರಿಂದಲೇ ಅದು ಸಮಷ್ಟಿ ವಾಸನಾ ಬೀಜವೂ ಅಹುದು. ಮಾಯೆಯೇ ಅವಿದ್ಯೆಯಾದ್ದರಿಂದಲೂ ಅದು ಜಡ–ತಮಸ್ಸಾಗಿದ್ದು ಈಶ್ವರನ ಶಕ್ತಿಯಾಗಿರುವದರಿಂದಲೂ ಅವಿದ್ಯೆ ಎಂದರೆ ಜಡವಾದ ಆತ್ಮನ ಶಕ್ತಿಯು. (4) ಜಗತ್ತಿಗೆ ಉಪಾದಾನ ಕಾರಣವೂ ಎಚ್ಚರದಲ್ಲಿಯು ಅಗ್ರಹಣ ವಿಪರೀತ ಸಂಶಯರೂಪ ಕಾರ್ಯಾವಿದ್ಯೆಗೆ ಉಪಾದಾನ ಕಾರಣವೂ ಆಗಿರುವ ಮೂಲವಾದ ಮಾಯಾರೂಪ ಅವಿದ್ಯೆಯೇ ಮುಖ್ಯಾರ್ಥದಲ್ಲಿ ಅವಿದ್ಯೆಯು. (5) ಆದ್ದರಿಂದ ನಿದ್ರೆಯಲ್ಲಿ ಆತ್ಮ ಚೈತನ್ಯದೊಂದಿಗೆ ಆತ್ಮನನ್ನಾವರಿಸಿ ಆತ್ಮನನ್ನಾಶ್ರಯಿಸಿಕೊಂಡಿರುವ ಅವಿದ್ಯೆಯೂ ಉಂಟು. ಈ ಕಾರಣದಿಂದಲೇ ನಿದ್ರೆಯು ಅದ್ವೈತಾನುಭವವಲ್ಲ. ಅದ್ವೈತಾನುಭವದ ಹೋಲಿಕೆ ಮಾತ್ರ, (6) ಇದರ ಮೂಲಕವೇ ಆತ್ಮನಿಗೆ ಈಶ್ವರತ್ತ್ವವು – ಇದರಲ್ಲಿಯ ಸತ್ತ್ವಗುಣದಲ್ಲಿ ಪ್ರತಿಬಿಂಬಿಸುವ ಮೂಲಕ ಬಂದಿದೆ. ಆದ್ದರಿಂದ ಈಶ್ವರನು ಸಮಷ್ಟಿ ಅಜ್ಞಾನದ ಉಪಾಧಿಯುಳ್ಳವನು. (7) ನಿದ್ರೆಯಲ್ಲಿ ಜೀವರಿಗೆ ಕಾರಣವಾದ ವಾಸನಾ ಬೀಜವಿರುವದರಿಂದ ಬ್ರಹ್ಮ ಚೈತನ್ಯದ ಪ್ರತಿಬಿಂಬವು ಈ ರಜೋಗುಣದಲ್ಲಿಯೂ ಬೀಳುವದರಿಂದ ನಿದ್ರೆಯಲ್ಲಿ ಜೀವ ಬ್ರಹ್ಮ ವಿಭಾಗವೂ ಜೀವನಿಗೆ ಕಾರಣ ಶರೀರವೂ ಆನಂದಮಯ ಭೋಕ್ತೃತ್ವ ಹಾಗೂ ಅಜ್ಞಾನಮಯ ವೃತ್ತಿಗಳಿದ್ದು ತ್ರಿಪುಟಿಯೂ ನಿದ್ರೆಯಲ್ಲಿರುವದೆಂದೇ ನಿರ್ಣಯಿಸಬೇಕು. (8) ಆತ್ಮಜ್ಞಾನವು ಬಂದಾಗ ಈ ಅವಿದ್ಯೆಯು – ಜಗತ್ಕಾರಣವಾದ ಈ ಮಾಯೆ (ಪ್ರಕೃತಿ) – ಎಂಬುದು ನಾಶವಾಗುತ್ತದೆ. (9) ಆತ್ಮ ವಿಜ್ಞಾನಕ್ಕೆ ನಿದ್ರೆಗಿಂತಲೂ ಬೇರೆಯಾಗಿರುವ ನಿರ್ವಿಕಲ್ಪಸಮಾಧಿಯ ಅನುಭವವೇಬೇಕು. ಸಮಾಧಿಯಿಂದ ಎದ್ದವನಿಗೆ ತಮೋಗುಣದ ಆವರಣವಿಲ್ಲದೆ ಇರುವ ಅನುಭವವು ಸ್ಪಷ್ಟವಾಗುವದರಿಂದ ಸಮಾಧಿಯಲ್ಲಿ ಈ ಆವರಣರೂಪದ ಅವಿದ್ಯೆಯನ್ನು ದಾಟಿ ಕೇವಲಾತ್ಮನಲ್ಲಿ ಸೇರಿರುವನೆನ್ನಬೇಕು. ನಿದ್ರೆಯಲ್ಲಿ ಈ ಅನುಭವ ಬರಲಾರದು. ಎದ್ದ ಮೇಲೆ ತಮಸ್ಸು ಜಡತ್ವವೇ ಅನುಭವಕ್ಕೆ ಬರುತ್ತದೆ.

(10) ಜ್ಞಾನದಿಂದ _ (ಸಮಾಧಿಯ ಅನುಭವಪೂರ್ವಕ ಜ್ಞಾನ) – ಈ ಮೂಲಾ ವಿದ್ಯೆಯು ಪೂರ್ತಿ ನಾಶವಾಗದೆ ಪ್ರಾರಬ್ಧದ ಮಟ್ಟಿಗೆ ಕಿಂಚಿತ್ ಶೇಷವು (ಲೇಶವು) ಉಳಿಯುತ್ತದೆ. ವಿದೇಹ ಕೈವಲ್ಯದಲ್ಲಿ ಎಂದರೆ ಶರೀರ ಪಾತಾನಂತರ ಪೂರಾ ಅವಿದ್ಯೆ ಹೊರಟು ಹೋಗುತ್ತದೆ. ಇಲ್ಲಿಯೂ ಯಾವನಿಗೆ ಜ್ಞಾನವಾಗುವದೋ ಅವನ ಪಾಲಿನ ಅವಿದ್ಯೆ ಮಾತ್ರ ಹೋಗುವದಾದ್ದರಿಂದ ಜಗತ್ಕಾರಣವಾದ ಮೂಲಾವಿದ್ಯೆಯು ಒಂದೇ ಆದರೂ ಅದರ ಅಂಶಗಳು ಅನೇಕವಾಗಿರುತ್ತವೆ, ಮುಂತಾಗಿ ಹೇಳುವದೇ ಅಲ್ಲದೆ ಮೂಲತಃ ಅಧ್ಯಾಸ ಭಾಷ್ಯದಲ್ಲಿರುವ **"ಮಿಥ್ಯಾಜ್ಞಾನನಿಮಿತ್ತಃ"** (ತಪ್ಪು ತಿಳಿವಿಕೆಯ ಮೂಲಕ) ಎಂಬ ವಾಕ್ಯಕ್ಕೆ "ಮಿಥ್ಯಾ+ ಅಜ್ಞಾನ + ನಿಮಿತ್ತ" ಎಂದು ಒಡೆದು ಮಿಥ್ಯಾ ಎಂದರೆ ಅನಿರ್ವಚನೀಯ, ಅಜ್ಞಾನ ಎಂದರೆ ಜಡವಾದ ಆತ್ಮಶಕ್ತಿ, ನಿಮಿತ್ತ ಎಂದರೆ ಅಧ್ಯಾಸರೂಪದ ಅವಿದ್ಯೆಗೆ ಉಪಾದಾನ ಕಾರಣ, ಎಂದು ತಿರಿಚಿ ಅರ್ಥವನ್ನು ಮಾಡಿ ಈ ವಾದವನ್ನು ಪಂಚಪಾದಿಕಾಕಾರರು ಸಮರ್ಥಿಸಿ ತೋರಿಸಿದ್ದಾರೆ. ಈಗ್ಗೆ ಶಂಕರ ವೇದಾಂತದಲ್ಲಿ ಅವಿದ್ಯೆ – ಮಾಯೆ ಈ ಎರಡೂ ಶಬ್ದಗಳ ಬಗ್ಗೆ ತುಂಬಾ ಗೊಂದಲದ ಅಭಿಪ್ರಾಯಗಳು ಸಾಮಾನ್ಯವಾಗಿ ಎಲ್ಲರಲ್ಲಿಯೂ ಇವೆ. ಕೇವಲ ಅದ್ವೈತದಲ್ಲಿ ಶ್ರದ್ಧೆಯನ್ನಿಟ್ಟು ಹೇಗೋ ಒಟ್ಟಿನಲ್ಲಿ ಕೊನೆಗೆ ಅದ್ವೈತಕ್ಕೇ ಎಲ್ಲರು ತಂದು ಕೂಡಿಸುವದರಿಂದ ಎಲ್ಲಾ ಪ್ರಕ್ರಿಯೆಗಳೂ ಸಾಧುವಾದವುಗಳೇ ಆಗಿವೆ ಎಂಬ ಕುರುಡುನಂಬಿಕೆಯಿಂದಲೇ ಎಲ್ಲರೂ ಹೋಗುತ್ತಿದ್ದಾರೆ. ಈಗ ಈವರೆಗೆ ವಿವರಿಸಿದ ರೀತಿಯ ನಿರೂಪಣೆಯು ಪ್ರಸ್ಥಾನತ್ರಯ ಭಾಷ್ಯಗಳಲ್ಲೆಲ್ಲಿಯೂ ಹಗಲು ಬತ್ತಿಯನ್ನು ಹಚ್ಚಿ ಹುಡುಕಿದರೂ ಸಿಕ್ಕುವದಿಲ್ಲ. ಈ ವಿಚಾರ ಸರಣಿಯ ದೋಷಗಳನ್ನು ತೋರಿಸಲೂ ಸಹ ಇಲ್ಲಿ ಪ್ರಯತ್ನಮಾಡಬೇಕಾದದ್ದಿಲ್ಲ. **ಭಾಷ್ಯ ಬಾಹಿರವಾದ – ಭಾಷ್ಯ ವಿರುದ್ಧವಾದ ಈ ಅಭಿಪ್ರಾಯಗಳನ್ನು ಈ ಮತದ ಅನುಯಾಯಿಗಳು ತಮ್ಮ ಸ್ವಂತ ಮತವೆಂದು ಹೇಳಿದ್ದರೆ ಚೆನ್ನಾಗಿತ್ತು. ಆದರೆ ಭಾಷ್ಯ ವಾಕ್ಯಗಳನ್ನೇ ತಿರಿಚಿ ಇಡೀ ಭಾಷ್ಯಕ್ಕೇ ಅಪಾರ್ಥಕಲ್ಪಿಸಿರುವದು ಮಾತ್ರ ಅತ್ಯಂತ ಖಂಡನೀಯ ವಾದದೆಂಬುದರ ಮಟ್ಟಿಗೆ ಇಲ್ಲಿ ಹೇಳಲೇಬೇಕಾಗಿದೆ. ಇನ್ನು ಇವುಗಳನ್ನು ನಂಬಿ ಕೊಂಡು ಭಾಷ್ಯದ ಉಪದೇಶಗಳನ್ನಲಕ್ಷಿಸುವ, ಹಾಗೂ ಭಾಷ್ಯವೂ ಹೀಗೆಯೇ ಹೇಳುವದೆಂದು ಕಣ್ಣು ಮುಚ್ಚಿ ನಂಬುವವರಿಗಾಗಿ ಮಾತ್ರ ಇಲ್ಲಿ ಒಂದು ಮಾತನ್ನು ಹೇಳುವದೇನೆಂದರೆ – ಬರೀ ಶಬ್ದ ಸಾಮ್ಯಕ್ಕೆ ಮರುಳಾಗದೆ ಆಯಾ ಶಬ್ದಗಳಿಗೆ**

**ಶ್ರೀ ಶಂಕರರು ಭಾಷ್ಯದಲ್ಲಿ ತೋರಿಸಿದ ಅನುಭವ ಸಮ್ಮತ ಅರ್ಥಗಳನ್ನು ಲಕ್ಷಿಸಿದರೆ ಈ ದೋಷವು ಪರಿಹಾರವಾಗುವದು – ಹಾಗೂ ದೃಷ್ಟಿ ಭೇದಗಳನ್ನರಿತರೆ ನಿಃಸಂಶಯವಾಗಿ ಶಂಕರ ಪ್ರಕ್ರಿಯೆಯ ಅರಿವಾಗುವದು. ಇದು ಹೇಗೆಂಬುದನ್ನು ಮುಂದಿನ ಅಧ್ಯಾಯದಲ್ಲಿ ತೋರಿಸೋಣ.**

* * * * *

## ಅಧ್ಯಾಯ – 11

# ದೃಷ್ಟಿಭೇದದ ರಹಸ್ಯ

ಹಿಂದಿನ ಲೇಖನಗಳಲ್ಲಿ ಅವಿದ್ಯಾದಿಗಳ ಬಗೆಗಿನ ತಪ್ಪು ಅಭಿಪ್ರಾಯಗಳನ್ನು ತಿಳಿಸಿ ಭಾಷ್ಯದಲ್ಲಿ ಅವುಗಳಿಲ್ಲವೆಂಬುದನ್ನೂ ಸಹ ಹೇಳಿ ದೃಷ್ಟಿಭೇದದಿಂದ ಈ ವಿದ್ಯಾದಿಗಳನ್ನು ಹೇಳಿರುವ ಬಗೆಯನ್ನರಿತರೆ ನಿಸ್ಸಂಶಯವಾಗಿ ತತ್ತ್ವವು ತಿಳಿಯುವದೆಂದೂ ಹೇಳಿತ್ತು. ಈಗ ಈ ದೃಷ್ಟಿಭೇದದ ಕೆಲವು ರಹಸ್ಯಗಳನ್ನು ಇಲ್ಲಿ ತೋರಿಸಲಾಗುತ್ತದೆ. (1) ಪರಮಾರ್ಥತತ್ತ್ವವನ್ನು ತಿಳಿಸಲು ಅಧ್ಯಾರೋಪ–ಅಪವಾದ ಎಂಬ ಒಂದೇ ಒಂದು ಪ್ರಕ್ರಿಯೆಯು ಶ್ರುತಿಗಳಲ್ಲೆಲ್ಲಾ ಹಾಸುಹೊಕ್ಕಾಗಿದ್ದು ಸಂಪ್ರದಾಯವನ್ನು ಬಲ್ಲವರೂ ಅದನ್ನು ಒತ್ತಿ ಹೇಳಿದ್ದನ್ನು ಭಾಷ್ಯಕಾರರು ಚೆನ್ನಾಗಿ ವಿವರಿಸಿ ತಮ್ಮ ಭಾಷ್ಯದಲ್ಲಿ ತೋರಿಸಿಕೊಟ್ಟಿದ್ದಾರೆ. ಇಲ್ಲಿ 'ಅಧ್ಯಾರೋಪ' ಎಂದರೆ ಅದ್ವಿತೀಯ ತತ್ವದಲ್ಲಿ ನೆಲೆ ನಿಲ್ಲದಿರುವಾಗ–ತತ್ತ್ವವನ್ನರಿಯದಾಗ – ಅದರಲ್ಲಿ ನಿಜವಾಗಿಯೂ ಇಲ್ಲದಿರುವ ಪದಾರ್ಥಗಳನ್ನು ಜನಗಳು ಸ್ವಾಭಾವಿಕವಾಗಿ ತಿಳಿಯುತ್ತಾರೆ – ಇದೇ ಅಧ್ಯಾರೋಪವು. ಶಾಸ್ತ್ರವು – ಅಥವಾ ಗುರುಗಳು ತತ್ತ್ವವನ್ನು ತಿಳಿಸುವದಕ್ಕಾಗಿ ಈ ಅಜ್ಞರು ಕಲ್ಪಿಸಿದ ತತ್ತ್ವಗಳನ್ನು ಮೊದಲು ಇರುವಂತೆಯೇ ಒಪ್ಪಿ ಉಪದೇಶವನ್ನಾರಂಭಿಸುತ್ತಾರೆ. ಇದೇ ಅಧ್ಯಾರೋಪ ದೃಷ್ಟಿ – ವ್ಯವಹಾರ ದೃಷ್ಟಿ – ಅವಿದ್ಯಾ ದೃಷ್ಟಿ – ಎಂದರೆ ತಪ್ಪುತಿಳಿವಿಕೆಯ ಆಧಾರದಿಂದ ಒಪ್ಪಿದ್ದು ಅಥವಾ ಅನುಮಾನಿಸಲ್ಪಟ್ಟದ್ದು – ಎಂದರ್ಥ. ಉಪದೇಶದ ಕೊನೆಗೆ ಆರೋಪ ಮಾಡಿದ ಯಾವದೂ ಇಲ್ಲದ ಕೇವಲಾತ್ಮ ಸ್ವರೂಪವಾಗಿ ಅದ್ವೈತವಾಗಿಯೇ ಈಗಲೇ ಇಲ್ಲಿಯೇ ಜಿಜ್ಞಾಸುವು ನೆಲೆ ನಿಂತುಬಿಡುತ್ತಾನೆ. ಆ ನೆಲೆನಿಂತ

(ಜ್ಞಾನನಿಷ್ಠೆಯ) ದೃಷ್ಟಿಯಿಂದ ಮೊದಲು ಕಲ್ಪಿಸಿದ ಪದಾರ್ಥಗಳು ಯಾವಾಗಲೂ ಇರಲೇ ಇಲ್ಲವೆಂಬುದು ಅನುಭವಕ್ಕೇ ಗೋಚರವಾಗುತ್ತದೆ. ಇದಕ್ಕೇ ಅಪವಾದ ದೃಷ್ಟಿ – ಪರಮಾರ್ಥ ದೃಷ್ಟಿ – ಸಮ್ಯಗ್ದರ್ಶನ ದೃಷ್ಟಿ ಎಂದು ಮುಂತಾಗಿ ಕರೆಯುತ್ತಾರೆ. ಒಟ್ಟಿನಲ್ಲಿ ವ್ಯವಹಾರ ದೃಷ್ಟಿ. ಪರಮಾರ್ಥ ದೃಷ್ಟಿ ಎಂಬ ಎರಡು ದೃಷ್ಟಿ ಭೇದಗಳಿರುವ ರಹಸ್ಯವನ್ನು ಮೊದಲು ಅರಿಯಬೇಕು. (2) ಈ ದೃಷ್ಟಿ ಭೇದಗಳನ್ನು ಶ್ರೀ ಶಂಕರರು ಕಲ್ಪಿಸಿರುವದಿಲ್ಲ. ಲೋಕದಲ್ಲಿಯೂ ಹೀಗೆ ಉಂಟು – ಉದಾಹರಣೆಗೆ ಸೂರ್ಯನು ಪೂರ್ವಕ್ಕೆ ಹುಟ್ಟಿ ಮೇಲೆ ಬಂದು ಪಶ್ಚಿಮಕ್ಕೆ ವಾಲಿ ಕೊನೆಗೆ ಮುಳುಗುತ್ತಾನೆ, ಎಂಬುದು ವ್ಯವಹಾರ ದೃಷ್ಟಿ. ಆದರೆ ಸೂರ್ಯನು ಇರುವಂತೆಯೇ ಇದ್ದಾನೆ. ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಿರುವದರಿಂದ ಹಾಗೆ ಕಾಣುತ್ತದೆ ಎಂಬುದು ಪರಮಾರ್ಥ ದೃಷ್ಟಿ. ಹೀಗೆ ಎಷ್ಟೋ ಇವೆ. ಒಟ್ಟಿನಲ್ಲಿ ನಿಜವಾಗಿ ವಸ್ತು ಸ್ವಭಾವವಾಗಿ ಇದ್ದಿರುವದನ್ನೇ ಲೆಕ್ಕಕ್ಕೆ ಹಿಡಿಯುವದು ಪರಮಾರ್ಥ ದೃಷ್ಟಿ. ಅದರಲ್ಲಿ ತೋರುವ – ಅಥವಾ ಆ ವಸ್ತುವೇ ಅದನ್ನರಿಯದವರಿಗೆ ತೋರಿಕೊಳ್ಳುವ ದೃಷ್ಟಿಯು ವ್ಯವಹಾರ ದೃಷ್ಟಿಯು ಎಂದು ನೆನಪಿಟ್ಟರಾಯಿತು. (3) ಇಲ್ಲಿ ಪ್ರಕೃತಕ್ಕೆ "ನಾನು ಇಂಥವನು. ಇದು ಜಗತ್ತು" ಮುಂತಾಗಿ ಕಾಣುವ ದೃಷ್ಟಿಯುನ್ನವಲಂಬಿಸಿ ವಿವರಿಸ ಹೊರಟದ್ದೆಲ್ಲವೂ ವ್ಯಾವಹಾರಿಕ ಅಥವಾ ಅಧ್ಯಾರೋಪ ದೃಷ್ಟಿ. ಆದರೆ ಈಗಿನ ಈ 'ನಾನು' – ಅಥವಾ 'ಜಗತ್ತು' ಎಂಬುದಿದ್ದದ್ದನ್ನೂ ಇಲ್ಲದ್ದನ್ನೂ ನೇರಾಗಿ ಬೆಳಗುವ ಪರಿಶುದ್ಧ ಚಿನ್ಮಾತ್ರ ಸ್ವರೂಪದ ನಿರ್ವಿಕಾರ ದೃಷ್ಟಿಯನ್ನವಲಂಬಿಸುವದೇ ಪರಮಾರ್ಥ ದೃಷ್ಟಿ. (4) ಪರಮಾರ್ಥ ತತ್ತ್ವವನ್ನು ಈ 'ನಾನು' ಹಾಗೂ 'ಜಗತ್ತು'ಗಳಿಗೆ ಹೋಲಿಸಿ ನೋಡಿ ಅದನ್ನು ವರ್ಣಿಸುವ ದೃಷ್ಟಿಯೂ ವ್ಯಾವಹಾರಿಕ ದೃಷ್ಟಿಯೇ ಆಗಿದೆ. ಆದರೆ ಪರಮಾರ್ಥ ತತ್ತ್ವವಾದ 'ಕೇವಲ ತಾನು' ಹೇಗಿದೆಯೋ ಹಾಗೆಯೇ ಕಂಡುಕೊಳ್ಳುವ ನಿರೂಪಣೆಯು ಮಾತ್ರ ಪರಮಾರ್ಥ ದೃಷ್ಟಿ ಎನಿಸುತ್ತದೆ. ಹೀಗೆ ಅಧ್ಯಾರೋಪ ದೃಷ್ಟಿಯಿಂದ ಕಲ್ಪಿಸಲ್ಪಟ್ಟ ಕೆಲವು ಸಂಗತಿಗಳನ್ನು ನಿಜವಾಗಲೂ ಇರತಕ್ಕವುಗಳೆಂದು ಭಾವಿಸಿ ಅವು ತೊಲಗುವದೆಂದು ಪಟ್ಟುಹಿಡಿಯುವದು ದಡ್ಡತನವಾಗುತ್ತದೆ. ಈಗ ಇದೇ ನಿದ್ರೆಯ ಬಗೆಯಲ್ಲಿ (1) ಈಗಿನ ವ್ಯಾವಹಾರಿಕ ದೃಷ್ಟಿಯಿಂದ ಜಗತ್ತಿದೆ, ಬುದ್ಧಿಯ ಸಂಬಂಧವಿದೆ, ನಿದ್ರೆಯಲ್ಲಿ ಇದು ಮರೆಯಾದರೂ ಪುನಃ ಅದೇ ಜಗತ್ತು ಅದೇ ವಾಸನಾದಿಗಳು ಬರುವವು ಎಂಬ

ಲೌಕಿಕರ ಗ್ರಹಿಕೆಗನುಸರಿಸಿ ಜಗದ್ಬೀಜ, ವಾಸನಾಬೀಜಗಳನ್ನು ನಿದ್ರೆಯಲ್ಲಿ ಇರುವಂತೆ ಒಪ್ಪಿದೆಯೇ ಹೊರತು ನಿಜವಾಗಿಯೂ ನಿದ್ರೆಯಲ್ಲಿ ಆತ್ಮನೂ ಜಗದ್ಬೀಜವೂ ವಾಸನೆಯೂ ಇದ್ದೇ ಬಿಟ್ಟಿವೆ ಎಂದೇನೂ ಆಚಾರ್ಯರು ಹೇಳಲಿಲ್ಲ. (2) ಇದರಂತೆಯೇ ಆತ್ಮವಿಜ್ಞಾನವಾಗಬೇಕು ಎಂದ ಶಾಸ್ತ್ರೀಯ ವ್ಯವಹಾರ ದೃಷ್ಟಿಯಿಂದ ನಿದ್ರೆಯಲ್ಲಿ ಈ ಆತ್ಮವಿಜ್ಞಾನವು ಆಗಲು ಸಾಧ್ಯವಿಲ್ಲದ್ದರಿಂದ (ಅಂತಃಕರಣ – ಗುರು ಶಾಸ್ತ್ರಾದಿಗಳಿಲ್ಲದ್ದರಿಂದ) ಅಗ್ರಹಣ ರೂಪಕಾರಣಾವಿದ್ಯೆ ಇದ್ದಂತಾಯಿತು ಎಂದು ಕಲ್ಪಿಸಿದರೇ ಹೊರತು ನಿಜವಾಗಲೂ ನಿದ್ರೆಯಲ್ಲಿ ಆತ್ಮನೂ ಅಜ್ಞಾನವೂ ಜೊತೆಗೂಡಿ ಇವೆ ಎಂದೇನೂ ಹೇಳಲಿಲ್ಲ. (3) ಅವಿದ್ಯೆ ಎಂದರೆ ಆತ್ಮನ ಜಡವಾದ ಶಕ್ತಿ, ಮಾಯೆ ಅವಿದ್ಯೆ ಒಂದೇ, ಅದು ಆತ್ಮನನ್ನಾವರಿಸಿದೆ, ಅಧ್ಯಾಸವು ನಿಜವಾದ ಅವಿದ್ಯೆಯಲ್ಲ, ಅಗ್ರಹಣ, ವಿಪರೀತ, ಸಂಶಯ ರೂಪದ ಅವಿದ್ಯೆಗೆ ಒಂದು ಉಪಾದಾನ ಕಾರಣವಿದೆ, ಅದೇ ಮೂಲಾವಿದ್ಯೆ, ಅದು ಆತ್ಮನನ್ನಾವರಿಸಿ ಆತ್ಮನನ್ನಾಶ್ರಯಿಸಿದೆ, ಅವಸ್ಥಾತ್ರಯದಲ್ಲಿಯೂ ಆತ್ಮನೊಡನೆ (ದಂಡಾಯಮಾನ ವಾಗಿ) ಅವ್ಯಾಹತವಾಗಿದ್ದೇಬಿಟ್ಟಿದೆ, ಇದೇ ಜ್ಞಾನದಿಂದ ನಾಶವಾಗುವ ಅವಿದ್ಯೆ, ಗಾಢನಿದ್ರೆಯಲ್ಲಿ ಏನನ್ನೂ ಅರಿಯದಿರಲು ಅವಿದ್ಯೆಯೇ ಕಾರಣ – ಮುಂತಾದ ವಿಚಾರಗಳು ಭಾಷ್ಯಗಳಲ್ಲಿ ಎಲ್ಲಿಯೂ ಇಲ್ಲವೇ ಇಲ್ಲ. (4) ಇದಕ್ಕೆ ಬದಲಾಗಿ (ಅ) ಅವಿದ್ಯೆ ಎಂದರೆ ಅಧ್ಯಾಸವೇ. (ಆ) ಅರಿಯದಿರುವದು, ತಪ್ಪಾಗಿ ಅರಿಯುವದು, ಸಂಶಯಪಡುವದು ಎಲ್ಲವೂ ಅವಿದ್ಯೆಯೇ ಆಗಿದೆ. (ಇ) ತಪ್ಪಾಗಿ ತಿಳಿಯಲು (ಸಂಶಯಪಡಲು) ತಿಳಿಯದಿರುವದೇ ಕಾರಣವಾದ್ದರಿಂದ ಅಗ್ರಹಣವು ಕಾರಣಾವಿದ್ಯೆ, ಮಿಥ್ಯಾಜ್ಞಾನವು ಕಾರ್ಯಾವಿದ್ಯೆ. (ಈ) ಪರಮಾತ್ಮನಲ್ಲಿ ನಿಜವಾಗಿಲ್ಲದಿರುವ ದ್ವೈತ ಪ್ರಪಂಚವನ್ನು ಇದ್ದಂತೆ ನೋಡುವ ಅವಿದ್ಯೆಯ ದೃಷ್ಟಿಯಿಂದ ಈ ನಾಮರೂಪ ಪ್ರಪಂಚದ ಬೀಜವನ್ನು ಕಲ್ಪಿಸುತ್ತೇವಾದ್ದರಿಂದ ಮಾಯೆಯು ಅವಿದ್ಯಾಕಲ್ಪಿತ (ಉ) ಈ ಮಾಯೆಯ ಉಪಾಧಿಯಿಂದ ಈಶ್ವರತ್ವವು ಆತ್ಮನಿಗೆ ಬಂದಿದೆ – ವಿದ್ಯೆಯಿಂದ ಅವಿದ್ಯೆಯ ತೊಲಗಲು ಅವಿದ್ಯಾಕಲ್ಪಿತ ಮಾಯೆಯೂ ತೊಲಗುತ್ತದೆ. ಆಗ ಆತ್ಮನ ಈಶ್ವರತ್ವೂ ಇರುವದಿಲ್ಲ. ಅದ್ವಿತೀಯ ತತ್ತ್ವ ಮಾತ್ರವೇ ಇರುತ್ತದೆ. (ಊ) ಅವಿದ್ಯೆ ಅಂತಃಕರಣದ ಧರ್ಮ – ಆತ್ಮನ ಧರ್ಮವಲ್ಲ. ವಿದ್ಯಾವಿದ್ಯೆಗಳೆರಡೂ ಅನುಭವ ಸ್ವರೂಪನಾದ ಆತ್ಮನಿಂದ ಬೆಳಗಲ್ಪಡುತ್ತವೆ. (ಎ) ಕಾರ್ಯಕಾರಣ ವ್ಯವಹಾರವು ಅಧ್ಯಾಸದಿಂದಲೇ

ಕಲ್ಪಿತವಾಗಿದೆ. ಈ ಅಧ್ಯಾಸವು ಸ್ವಾಭಾವಿಕ – ಲೋಕಾನುಭವ ಪ್ರಸಿದ್ಧ – ಆತ್ಮನೇ ಸತ್ಯನಾಗಿರುವವನೆಂದೂ ಅನಾತ್ಮವು ಎಂದಿಗೂ ಇಲ್ಲವೇ ಇಲ್ಲದ್ದೆಂದೂ ಇವುಗಳನ್ನು ವಿಂಗಡಿಸಿ ಅರಿಯುದಿರುವ ರೂಪದ ಅವಿವೇಕದಿಂದಲೇ (ವಿವೇಕಾಭಾವದಿಂದಲೇ) ಅಧ್ಯಾಸವು ಬಂದಿದೆ. ವಿವೇಕದಿಂದ ವಸ್ತುಸ್ವರೂಪ ವನ್ನು ಕಂಡರೆ ತೊಲಗುತ್ತದೆ. (ಏ) ವಾಸನೆಗಳು ಹೃದಯ (ಅಂತಃಕರಣ)ಕ್ಕೆ ಸೇರಿವೆಯೇ ಹೊರತು ಆತ್ಮನಿಗಲ್ಲ. ಆತ್ಮನ (ಅನುಭವ ರೂಪನಾದ ಸ್ವರೂಪದ) ಬೆಳಕಿನಲ್ಲಿಯೇ ವಾಸನೆಗಳು ಕಾಣಬೇಕು. ವಾಸನೆಗಳು ಆತ್ಮನಿಗೆ ವಿಷಯಗಳಾಗಿವೆ. (ಐ) ಬುದ್ಧಿಗೆ ಮಾತ್ರ ತಾಮಸಪ್ರತ್ಯಯವಾದ ಅವಿದ್ಯೆಯ ಆವರಣವೂ ವಾಸನೆಗಳೂ ಇರುತ್ತವೆ. ಆತ್ಮನು ನಿತ್ಯ ಚಿನ್ಮಾತ್ರಸ್ವರೂಪನು. ಅವನ ಅರಿವಿನ ಸ್ವರೂಪಕ್ಕೆ ಲೋಪವೆಂಬುದಿಲ್ಲವೇ ಇಲ್ಲ. ಎಂದು ಅವಿದ್ಯೆ, ಇದು ನಿರ್ವಿಕಲ್ಪ ಸಮಾಧಿ (ಅಸಂಪ್ರಜ್ಞಾತ ಸಮಾಧಿ)ಯೇ ಮುಂತಾದ ವಿಶೇಷ ಅವಸ್ಥೆಗೆ ಸೇರಿದ್ದಲ್ಲ, ಎಲ್ಲಾ ಅವಸ್ಥೆಗಳೂ ಈ ಕೇವಲ ತಾನೆಂಬತತ್ತ್ವದಲ್ಲಿ ಅವಿದ್ಯೆಯಿಂದ ಕಲ್ಪಿಸಲ್ಪಡುತ್ತವೆಯೇ ಹೊರತು ನಿಜವಾಗಿ ಯಾವ ಅವಸ್ಥೆಗಳೂ ಎಂದೂ ಇಲ್ಲ. ಬರೀ ಆತ್ಮನೇ ನಿಜವಾದ ಪರಮಾರ್ಥನು. ಈ ರಹಸ್ಯವನ್ನರಿಯದ್ದಕ್ಕೆ ಸಮಾಧಿಯು ತುರ್ಯಾವಸ್ಥೆ, ತುರ್ಯಾತೀತಾವಸ್ಥೆಯೊಂದುಂಟು ಮುಂತಾಗಿ ಬಡಬಡಿಸುತ್ತಿರುತ್ತಾರೆ. ಮಾಂಡೂಕ್ಯ (ಮಂ – 7) ಛಾಂದೋಗ್ಯ (7–12–1)ರಲ್ಲಿ ಕಲ್ಪಿತಗಳಾದ ಎಚ್ಚರ ಕನಸು ನಿದ್ರೆಗಳ ದೃಷ್ಟಿಯಿಂದ ಆತ್ಮನು ತುರೀಯನು ಎಂದರೆ ನಾಲ್ಕನೆಯವ ನೆಂದಿದೆಯೇವಿನಃ ತುರೀಯವೆಂದರೆ ನಾಲ್ಕನೆಯ ಅವಸ್ಥೆ ಎಂದೇನೂ ಭಾಷ್ಯದಲ್ಲಿ ಎಲ್ಲೂ ಹೇಳಿಲ್ಲ. ಈ ಬೃಹದಾರಣ್ಯಕದಲ್ಲಂತೂ ಗಾಢನಿದ್ರಾನುಭವದ ವಿವೇಕದಿಂದ 'ನಿದ್ರೆ' ಎಂಬ ಆರೋಪವನ್ನು ಕಳೆದು ಕೇವಲ ತಾನಾಗಿರುವದನ್ನು ಲಕ್ಷಿಸಿದರೆ ಎಚ್ಚರ – ಕನಸುಗಳೂ ಬಾಧಿತವಾಗಿ ಬರೀ ತಾನೇ ಎಂದೆಂದಿಗೂ ಆಗಿರುವನೆಂಬುದನ್ನೇ ಹೇಳಿದ್ದಾರೆ. ಇಲ್ಲಿ ತುರೀಯ ಶಬ್ದವನ್ನೂ ಬಳಸದೆ ತತ್ತ್ವವನ್ನು ತಿಳಿಸಿರುತ್ತದೆ. ಆದ್ದರಿಂದ ಎಚ್ಚರ, ಕನಸು, ನಿದ್ರೆಗಳ ವಿಚಾರ ಕ್ರಮದ ವಿವೇಕವನ್ನು ಉಪನಿಷತ್ತುಗಳ ಬೋಧನೆಯಂತೆ ಮಾಡಿದರೆ "ಯಾವಾಗಲೂ ನಾವೆಲ್ಲರೂ ಕೇವಲ ಚಿನ್ಮಾತ್ರಸ್ವರೂಪರಾಗಿ ಅಸಂಸಾರಿಗಳಾಗಿ ಅದ್ವಿತೀಯ ರಾಗಿರುವೆವಾದ್ದರಿಂದ ಭಯಗೊಳ್ಳಬೇಕಾದದ್ದಿಲ್ಲ. ಈ ವಿವೇಕದಿಂದ ಅಭಯ ಸ್ವರೂಪವೇ ಆಗುತ್ತೇವೆ ಎಂದಾಗುತ್ತದೆ. ಆದರೆ ಈ ಲೇಖನಗಳ ಆರಂಭದಲ್ಲಿ

ತೋರಿಸಿದ ಭೌತಿಕ ವಿಜ್ಞಾನದ ಹೊರ ದೃಷ್ಟಿಯಿಂದ ನೋಡಿದರೆ ನಾವು ಯಾವಾಗಲೂ ಸಂಸಾರಿಗಳಾಗಿ ಕರ್ತೃಭೋಕ್ತೃಗಳಾಗಿ ಗೋಳಾಡುವವರೆಂಬುದೇ ನಿಶ್ಚಿತವಾಗುತ್ತದೆ. ನಿಸರ್ಗವು ನಿದ್ರೆಯಲ್ಲಿ ನಮ್ಮ ಅಸಂಸಾರಿ ಸ್ವರೂಪವನ್ನು ತೋರಿಸುತ್ತಿದ್ದರೂ ಎಚ್ಚರದ ಅಭಿಮಾನದಿಂದ ಆ ಅನುಭವವನ್ನೇ ಅಪವಾದ ಮಾಡಿ ಅಲ್ಲಿಯೂ ನಮಗೆ ಸಂಸಾರಿತ್ವವಿದೆ, ಅಲ್ಲಿಯೂ ಈಗಿನ 'ನಾನು' ಎಂದಾಗಿಯೇ ನಾವಿರುವೆವೆಂದು ಮೊಂಡುತನವನ್ನು ಸಾಧಿಸಬೇಕಾಗುತ್ತದೆ. ವಾಚಕರೇ! ಈಗ ಎರಡೂ ಬಗೆಯ ವಿಚಾರ ಸರಣಿ, ಅವುಗಳ ಕ್ರಮ, ಫಲ ಇದೆಲ್ಲವನ್ನೂ ತಿಳಿಸಿದ್ದಾಗಿದೆ. ಇದರಲ್ಲಿ ನಿಮಗೆ ಯಾವುದು ಸರಿದೋರುವದೋ ಅದನ್ನು ಅನುಸರಿಸಿ ಆ ಫಲವನ್ನು ಪಡೆಯಬಹುದು.

* * * * *

## ಅಧ್ಯಾಯ – 12

## ಭಾಷ್ಯಕಾರರ ನಿರೂಪಣೆ

ನಿದ್ರೆಯನ್ನು ಪರಾಮರ್ಥ ದೃಷ್ಟಿಯಿಂದ ನೋಡುವ ರಹಸ್ಯವನ್ನೇ ಶ್ರುತಿಗಳು ತೋರಿಸುತ್ತವೆ. ಆ ದೃಷ್ಟಿಯನ್ನು ಮುಟ್ಟುವ ಮೊದಲು ಅಧ್ಯಾರೋಪ ದೃಷ್ಟಿಯಿಂದ ನಿದ್ರೆಯನ್ನು ತೋರಿಸುತ್ತಾ ಕ್ರಮ ಕ್ರಮವಾಗಿ ಅನುಭವದೆಡೆಗೆ ಲಕ್ಷ್ಯವನ್ನೆಳೆಯುತ್ತಾ ಶಾಸ್ತ್ರವು ಹೊರಡುತ್ತದೆ. ಪರಮಾರ್ಥ ದೃಷ್ಟಿಯನ್ನವಲಂಬಿಸಿದಾಗ ನಿದ್ರೆಯ ನಿದ್ರಿತ್ವವು ಹಾರಿಹೋಗಿ ಕೇವಲಾತ್ಮನಾಗಿ ಬಿಡುತ್ತದೆ. ಆಗ ಎಚ್ಚರ ಕನಸು ಎಂಬವುಗಳೂ ಹಾರಿಹೋಗಿ ಬರೀ ಆತ್ಮನೊಂದೇ ಉಳಿದು ಈಗಲೇ ನಿತ್ಯಮುಕ್ತಸ್ವರೂಪವನ್ನು ಅನುಭವದಲ್ಲಿ ಕಂಡುಕೊಳ್ಳಲು ಬರುವದು. ಈ ಪರಮಾರ್ಥಾನುಭವದ ದೃಷ್ಟಿಯಲ್ಲಿ ವಿದ್ಯೆ, ಅವಿದ್ಯೆ, ಮಾಯೆ, ಈಶ್ವರ, ಬಂಧ, ಮೋಕ್ಷ, ಗುರು, ಶಿಷ್ಯ ಮುಂತಾದ ಯಾವ ಭೇದವೂ ಎಂದಿಗೂ ಇರಲೇ ಇಲ್ಲವೆಂಬುದೇ ಕೊನೆಯ ತೀರ್ಮಾನವು. **"ಜ್ಞಾತೇ ದ್ವೈತಂ ನ ವಿದ್ಯತೇ"** (ಮಾಂ.ಕಾ. 1–18) ಎಂಬುದರ ಆಭಿಪ್ರಾಯವೇ ಇದಾಗಿದೆ. ಈ ಅನುಭವಕ್ಕೆ ಬಂದು ಮುಟ್ಟಲು, ಅಧ್ಯಾರೋಪ ದೃಷ್ಟಿಯಿಂದ ಎಲ್ಲವನ್ನೂ ಲೋಕಾನುಭವಕ್ಕೆ ಅನುಸರಿಸಿ ಒಪ್ಪಿಕೊಳ್ಳಬೇಕಾಗಿದೆ. "ಅದ್ವಿತೀಯ

ಚಿನ್ಮಾತ್ರ ಬ್ರಹ್ಮದಲ್ಲಿ ಅವಿದ್ಯೆಯನ್ನು ಕಲ್ಪಿಸುವದು ಯುಕ್ತವಲ್ಲವೇ? ಎಂದು ಪ್ರಶ್ನೆಯನ್ನು ತೆಗೆದು ಇದಕ್ಕೆ ಉತ್ತರ ರೂಪವಾಗಿ– ಇದು ನಾವು ಮಾಡಿದ ಕಲ್ಪನೆಯಲ್ಲ – ಶಾಸ್ತ್ರವೇ ಕಲ್ಪಿಸಿ ಹೇಳುತ್ತದೆ. ಈ ಅವಿದ್ಯೆಯೊಂದೇ ಏಕೆ? ಎಲ್ಲವೂ ಶಾಸ್ತ್ರವು ಅದ್ವಿತೀಯಾತ್ಮನನ್ನು ತಿಳಿಸಲು ಮಾಡಿದ ಕಲ್ಪನೆಯೇ ಆಗಿದೆ. ಆತ್ಮನೊಬ್ಬನೇ ಅಕಲ್ಪಿತನಾದ ಎಂದರೆ ಸತ್ಯನಾದ ಪರಮಾರ್ಥವು, ಮಿಕ್ಕದ್ದೆಲ್ಲವೂ ಕಲ್ಪಿತವೇ ಆಗಿದೆ," ಎಂದು ಬೃ. 1–4–10ರಲ್ಲಿ ಆಚಾರ್ಯರು ಹೇಳಿದ್ದಾರೆ. (ಈ ಬಗ್ಗೆ **"ಬ್ರಹ್ಮಣಿ ಅವಿದ್ಯಾ ಅನುಪಪತ್ತಿರಿತಿ ಚೇತ್**...... ಎಂಬ ಭಾಷ್ಯಭಾಗವನ್ನೂ, "ಬ್ರಹ್ಮಣಿ **ಸಾಧಕತ್ವ ಕಲ್ಪನಾ ಅಸ್ಮದಾದಿಷ್ವಿವ ಅಪೇಶಲಾ**....." ಎಂಬ ಭಾಗಗಳನ್ನೂ ಈ ಬಗ್ಗೆ ಪೂರ್ತಿಯಾಗಿ ನೋಡಬೇಕು.) ಅಂತೂ ಅದ್ವೈತ ಬ್ರಹ್ಮಾನುಭವಕ್ಕಾಗಿ ಅವಿದ್ಯೆ ವಿದ್ಯೆ ಮುಂತಾದ್ದನ್ನೆಲ್ಲವನ್ನೂ ಅಧ್ಯಾರೋಪ ದೃಷ್ಟಿಯಿಂದ ಕಲ್ಪಸಿರುವದೇ ಹೊರತು ಪರಮಾರ್ಥವಲ್ಲ ಎಂಬುದನ್ನು ಮರೆಯಬಾರದು. ಇಲ್ಲಿ ಒಂದು ಪ್ರಶ್ನೆ :– ಬ್ರಹ್ಮ ತತ್ತ್ವವನ್ನು ತಿಳಿಸಲು ಅಧ್ಯಾಸರೂಪವಾದ – ಅಥವಾ ಅಗ್ರಹಣ – ವಿಪರೀತ – ಸಂಶಯರೂಪವಾದ – ಅವಿದ್ಯೆಯನ್ನು ಕಲ್ಪಿಸಿರುವಂತೆ ಈ ಅವಿದ್ಯೆಗೆ ಉಪಾದಾನ ಕಾರಣವಾದ ಮೂಲಾವಿದ್ಯೆ – ಮಾಯೆ ಎಂಬುದನ್ನೂ ಏಕೆ ಕಲ್ಪಿಸಬಾರದು? ಕೊನೆಯಲ್ಲಿ ಅದೂ ಪರಮಾರ್ಥವಲ್ಲ, ಜ್ಞಾನದಿಂದ ಹೋಗುವದು ಎಂದಿಟ್ಟು ಕೊಂಡು ಅದ್ವೈತವನ್ನು ಹೇಳಿದರೆ ತಪ್ಪೇನು? ಈ ಪ್ರಶ್ನೆಗೆ ಉತ್ತರವೇನೆಂದರೆ – ಅಧ್ಯಾಸ – ಅಥವಾ ಅಗ್ರಹಣಾದಿ ರೂಪದ ಅವಿದ್ಯೆಯು ಲೋಕಾನುಭವದಲ್ಲಿ ಪ್ರಸಿದ್ಧವಾಗಿದೆ. ಇದನ್ನೇ **"ಏವಂ ಅಯಂ ಅನಾದಿಃ ಅನಂತೋ ನೈಸರ್ಗಿಕೋ ಅಧ್ಯಾಸೋ ಮಿಥ್ಯಾಪ್ರತ್ಯಯ ರೂಪಃ ಕರ್ತೃತ್ವ ಭೋಕ್ತೃತ್ವ ಪ್ರವರ್ತಕಃ ಸರ್ವಲೋಕ ಪ್ರತ್ಯಕ್ಷಃ"** (ಸೂ.ಭಾ. ಅವ) "ಹೀಗೆ ಈ ಕೊನೆ ಮೊದಲಿಲ್ಲದ ಸ್ವಾಭಾವಿಕವಾದ ಆತ್ಮಾನಾತ್ಮರ ಅಧ್ಯಾಸರೂಪದ ಅವಿದ್ಯೆಯು 'ನಾನು ಕರ್ತೃ' 'ನಾನು ಭೋಕ್ತೃ' ಎಂಬ ಬುದ್ಧಿಯನ್ನುಂಟುಮಾಡುತ್ತಿರುವದು ಲೋಕದಲ್ಲಿ ಎಲ್ಲರಿಗೂ ಅನುಭವದಲ್ಲಿ ಕಂಡದ್ದಾಗಿರುತ್ತದೆ, ಎಂಬುದು ಈ ವಾಕ್ಯದ ಅರ್ಥ. ಅಧ್ಯಾಸ ಭಾಷ್ಯದ ಈ ವಾಕ್ಯದಲ್ಲಿಯ **ಸ್ವಾಭಾವಿಕ,** ಸರ್ವರ ಅನುಭವದಲ್ಲಿದೆ ಮುಂತಾದ ಶಬ್ದಗಳು ಅಧ್ಯಾಸರೂಪದ ಅವಿದ್ಯೆಯು ಲೋಕಾನುಭವ ಸಮ್ಮತವಾಗಿರುವದೆಂಬುದನ್ನು ತೋರಿಸುತ್ತದೆ. ಹೀಗೆ ಮೂಲಾವಿದ್ಯೆಯು ಲೋಕಾನುಭವ ಗೋಚರವಲ್ಲ. ಅದು ಕೆಲವು ವಾದಿಗಳು ಕಲ್ಪಿಸಿದ್ದಾದ್ದರಿಂದ

ಅದನ್ನು ಒಪ್ಪಲಾಗುವದದಿಲ್ಲ. ಇನ್ನು ಶಂಕರರ ಪ್ರಕಾರ 'ಮಾಯೆ'ಯು ಮೇಲೆ ಹೇಳಿದ ಅಧ್ಯಾಸದಿಂದ ಕಲ್ಪಿತವಾದದ್ದು. ಇದಲ್ಲದೆ ವಿದ್ಯೆ ಬಂದಾಗ ಅವಿದ್ಯೆಯೂ ಅದರಿಂದ ಕಲ್ಪಿತವಾದ ಮಾಯೆಯೂ ಹೊರಟು ಹೋಗುವದೂ – (ಎಂದರೆ ಇವು ಯಾವಾಗಲೂ ಕೇವಲಾತ್ಮನಾದ ನನ್ನಲ್ಲಿ ಬರಲಿಲ್ಲ, ಹೋಗಲಿಲ್ಲ ಎಂಬುದೂ) – ಅನುಭವ ಗೋಚರವಾಗಿಯೇ ಬಿಡುತ್ತದೆ. ಆದರೆ ಮೂಲಾವಿದ್ಯಾವಾದದಲ್ಲಿ ಹೀಗಾಗುವದೇ ಇಲ್ಲ. ಇದಿರಲಿ–ಸಧ್ಯಕ್ಕೆ ಗಾಢನಿದ್ರಾನುಭವದ ಪರಮಾರ್ಥದೃಷ್ಟಿಯ ವಿವೇಕ ಕ್ರಮದಿಂದ ಈಗಲೇ ನಿತ್ಯಮುಕ್ತ ಸ್ವರೂಪನಾಗಿ ನಿಲ್ಲುವದು ಹೇಗೆ? ಎಂಬುದನ್ನು ಇಲ್ಲಿ ವಿವೇಚಿಸಿದರೆ ಈ ಲೇಖನಮಾಲೆ ಪೂರ್ಣವಾಯಿತು. ಬ್ರಹದಾರಣ್ಯಕದಲ್ಲಿ– 4–4–6ರಲ್ಲಿ **"ಅಥ ಅಕಾಮಯಮಾನಃ ಯೋ ಅಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮಃ ನ ತಸ್ಯ ಪ್ರಾಣಾ ಉತ್ಕ್ರಾಮಂತಿ"** ಎಂಬ ವಾಕ್ಯವಿದೆ. ಇಲ್ಲಿ – ಯಾವನು ಅಕಾಮನೋ ಅವನು ಮುಕ್ತನಾಗುತ್ತಾನೆ. (ಅವನ ಪ್ರಾಣಗಳು ಅಜ್ಞನಂತೆ ಮೂಟೇ ಕಟ್ಟಿಕೊಂಡು ಜನ್ಮಾಂತರಕ್ಕೆ ಅವನನ್ನು ಕೊಂಡೊಯ್ಯುವುದಿಲ್ಲ.) ಅಕಾಮನಾಗುವದು ಹೇಗೆ? ನಿಷ್ಕಾಮನಾದರೆ ಅಕಾಮನಾಗುತ್ತಾನೆ. ನಿಷ್ಕಾಮನಾಗುವದು ಹೇಗೆ? ಅಪ್ತಕಾಮನಾದರೆ ನಿಷ್ಕಾಮನಾಗುತ್ತಾನೆ. ಆಪ್ತಕಾಮನಾಗುವದೆಂದರೆ ಎಲ್ಲಾ ಕಾಮ್ಯಗಳನ್ನೂ ಏಕಕಾಲದಲ್ಲಿಯೇ ಹೊಂದಿದವನಾಗುವದು ಎಂದರ್ಥ. ಇದು ಹೇಗೆ ಸಾಧ್ಯ? ಆತ್ಮಕಾಮನಾದರೆ ಆಪ್ತಕಾಮನಾಗುತ್ತಾನೆ. ಎಂದರೆ ಕಾಮಿಸುವ ಹೊರಗಿನ – ಈ ಲೋಕದ ಪರಲೋಕದ ಎಲ್ಲಾ ಕಾಮ್ಯಗಳೂ ಎಂದರೆ ವಸ್ತುಗಳೂ, ಕಾಮನೆಯುಳ್ಳ ನಾನು ಎಂಬವನೂ, ಕಾಮಿಸಲು ಸಾಧನೆಯಾದ ಮನಸ್ಸೇ ಮುಂತಾದ್ದೆಲ್ಲವೂ ಕೇವಲಾತ್ಮನೇ ಆಗಿದೆ ಎಂಬುದನ್ನು ಕಂಡುಕೊಂಡು ಆತ್ಮನಾಗಿ ನೆಲೆನಿಂತರೆ ಆತ್ಮಕಾಮನಾದನು. ಆಪ್ತಕಾಮನಾದನು. ಇನ್ನೊಂದಿಲ್ಲದ್ದರಿಂದ ನಿಷ್ಕಾಮನಾದನು. ಆದ್ದರಿಂದಲೇ ಅಕಾಮನಾದನು. ನಿತ್ಯಮುಕ್ತಸ್ವರೂಪನಾದ ಅದ್ವೈತನೇ ಆದನು. ಹೀಗೆ 'ನಾನು' 'ಜಗತ್ತು' ಎಂಬುದನ್ನು ಬಾಧಿಸಿ ಈಗಲೇ ಇದು ಎಲ್ಲವೂ ಇನ್ನೊಂದಿಲ್ಲದ ಕೇವಲಾತ್ಮನೇ ಆಗಿರುವದೆಂಬ ಅನುಭವದಲ್ಲಿ ನಿಂತಿರುವದೇ ಮುಕ್ತಿ, ಮೋಕ್ಷ. ಇವನಿಗೆ (ಹೀಗೆ ನಿಂತಿರುವವನಿಗೆ) ಅವನ ದೃಷ್ಟಿಯಲ್ಲಿ ಪ್ರಾಣವೂ ಇಲ್ಲ. ಹೋಗುವದೂ ಇಲ್ಲ. ಜಗತ್ತೂ ಇಲ್ಲ. ಈಗಲೇ ದೇಹಾದಿಗಳೂ ಇಲ್ಲ. ಇತರರ ದೃಷ್ಟಿಯಿಂದ ಅವನಿಗೆ ಮುಂದೆ ಶರೀರಗ್ರಹಣ

(ಪುನರ್ಜನ್ಮ)ವಿಲ್ಲ ಎಂದು ಈ ಮಂತ್ರದ ತಾತ್ಪರ್ಯವು. ಹೀಗೆ ಈಗಲೇ ಇದೆಲ್ಲವೂ ಅದ್ವಿತೀಯಾತ್ಮನೇ ಎಂದು ಅರಿಯುವದು ಹೇಗೆ? ಎಂದರೆ ಆಚಾರ್ಯರು ಇಲ್ಲಿ ಒಂದು ಮಹತ್ವದ ವಾಕ್ಯವನ್ನು ಬರೆದಿದ್ದಾರೆ. **"ಯೋ ಹಿ ಸುಷುಪ್ತಾವಸ್ಥಮಿವ ನಿರ್ವಿಶೇಷಂ ಅದ್ವೈತ ಅಲುಪ್ತ ಚಿದ್ರೂಪ ಜ್ಯೋತಿ ಸ್ವಭಾವಂ ಆತ್ಮಾನಂ ಪಶ್ಯತಿ, ತಸ್ಯೈವ ಅಕಾಮಯಮಾನಸ್ಯ ಕರ್ಮಾಭಾವೇ ಗಮನ ಕಾರಣಾಭಾವಾತ್ ಪ್ರಾಣಾವಾಗಾದಯೋ ನ ಉತ್ಕ್ರಾಮಂತಿ । ಕಿಂತು ವಿದ್ವಾನ್ ಸಃ ಇಹೈವ ಬ್ರಹ್ಮ ಯದ್ಯಪಿ ದೇಹವಾನಿವ ಲಕ್ಷ್ಯತೇ ಸಃ ಬ್ರಹ್ಮೈವಸನ್ ಬ್ರಹ್ಮ ಅಪ್ಯೇತಿ"** ಎಂದು ಮುಂತಾಗಿ ವಾಕ್ಯಗಳನ್ನು ಬರೆದಿದ್ದಾರೆ. ಗಾಢನಿದ್ರೆಯಲ್ಲಿ ಹೇಗೋ ಹಾಗೆಯೇ ಈಗಲೂ ಚಿನ್ಮಾತ್ರನಾಗಿರುವಿಕೆಯನ್ನು ಎಂದಿಗೂ ಬಿಡದಿರುವ ಸ್ವಭಾವದ ಸ್ವರೂಪನೇ ಆಗಿರುವೆನು, ಎಂದು ತನ್ನ ಸ್ವರೂಪವನ್ನು ಕಂಡು ಕೊಂಡವನೇ ಅಕಾಮ, ಆತ್ಮಕಾಮ, ಆಪ್ತಕಾಮ, ನಿಷ್ಕಾಮನಾಗುತ್ತಾನೆ. ಅವನ ದೃಷ್ಟಿಯಲ್ಲಿ ಬಯಸಲು – ಕಾಮಿಸಲು – ಆತ್ಮನಿಗಿಂತ ಬೇರೆಯಾಗಿ ಪರಿಚ್ಛಿನವಾಗಿರುವ ಇನ್ನೊಂದೆಂಬ ವಸ್ತುವೇ ಇರುವದಿಲ್ಲ. ಅವನು ಇತರರಿಗೆ ದೇಹವಿರುವವನಂತೆ ಕಂಡರೂ ಅವನು ಅಶರೀರಿಯು. ಬ್ರಹ್ಮವೇ ಅವನಾಗಿದ್ದು ವ್ಯಾವಹಾರಿಕ ದೃಷ್ಟಿಯಿಂದ ದೇಹಪಾತಾನಂತರ ಬ್ರಹವನ್ನೇ ಸೇರುವನೆಂದು ಉಪಚಾರಕ್ಕೆ ಹೇಳಲಾಗುತ್ತದೆ ಎಂಬುದು ಈ ವಾಕ್ಯದ ಭಾವವು. ಗಾಢನಿದ್ರೆಯ ಅನುಭವವನ್ನು ಆಧಾರವಾಗಿಟ್ಟು ಕೊಂಡು ವಿವೇಕಮಾಡಿ ನೋಡಿದರೆ ಈಗಲೂ 'ನಾನು ಇಂಥವನು' ಎಂಬುದು ನಿಜಸ್ವರೂಪವಲ್ಲ. ಈ ಜಗತ್ತೂ ಸಹ ನಿಜವಾದದ್ದಲ್ಲ. ನಿದ್ರೆಯಲ್ಲಿದ್ದ ಕೇವಲ ತಾನು ಎಂಬ ಸ್ವರೂಪವು ಅಚ್ಚಳಿಯದೆ ಕೇವಲ ತಾನೇ ತಾನಾಗಿದ್ದೇನೆ. ಈ ಜಗತ್ತೂ ಸಹ ಆ ಕೇವಲ ತಾನೇ ಆಗಿದೆಯೇ ಹೊರತು ಇದು ಜಗದ್ರೂಪದಿಂದ ಸತ್ಯವಲ್ಲ. ಈಗಲೇ ಜಗತ್ತೆಲ್ಲವೂ ಬ್ರಹ್ಮವೇ ಆಗಿದೆ, ಎಂಬ ಅನುಭವಪೂರ್ವಕವಾದ ವಿವೇಕದಿಂದ ಪ್ರಜ್ಞೆಯನ್ನನುಸರಿಸಿದರೆ ಕೇವಲ ತಾನೇ ತಾನಾಗಿ ನಿಂತಿರುವದೇ ಅನುಭವಕ್ಕೆ ಬರುತ್ತದೆ.

* * * * *

## ಶ್ರೀ ಬ್ರಹ್ಮಜ್ಞಕವಿ

# ಶ್ರೀ ದೇವರಾಯ ಕುಲಕರ್ಣಿ (ಹೊಂಬಳ)

[1922–1993]

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಹೊಂಬಳ ಗ್ರಾಮದವರಾದ ಆಗರ್ಭ ಶ್ರೀಮಂತರಾದ ರಾಘವೇಂದ್ರರಾಯರ ಪುತ್ರರಾದ ಶ್ರೀ ದೇವರಾಯ ಕುಲಕರ್ಣಿಯವರು ತಾ॥ 2-12-1922ರಲ್ಲಿ ಜನಿಸಿದರು. ಅನಂತರ ಪ್ರಾಪ್ತವಯಸ್ಕರಾದಾಗ ಶ್ರೀ ಅಗ್ನಿಹೋತ್ರಿ ಶಂಕರಭಟ್ಟರೆಂಬ ಗುರುಗಳಲ್ಲಿ ಸಂಸ್ಕೃತಭಾಷೆ ಹಾಗೂ ಅರ್ವಾಚೀನವೇದಾಂತ ಸಂಪ್ರದಾಯದಂತೆ ಶಂಕರವೇದಾಂತಾಧ್ಯಯನ ಮಾಡಿದರು. 1954 ರಿಂದ ಹೊಳೆನರಸೀಪುರದ ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳ ಶಿಷ್ಯರಾಗಿ ಶಾಂಕರವೇದಾಂತವನ್ನು ಪ್ರಸ್ಥಾನತ್ರಯ ಶಂಕರಭಾಷ್ಯಾನುಸಾರವಾಗಿ ಅಧ್ಯಯನಮಾಡಿ ಪ್ರವಚನ ಹಾಗೂ ಗ್ರಂಥರಚನೆಗಳ ಮೂಲಕ ವೇದಾಂತತತ್ತ್ವ ಪ್ರಚಾರವನ್ನು ದೇಶ-ವಿದೇಶಗಳಲ್ಲಿ ಕೈಗೊಂಡರು. 1956ರಿಂದ ಬೆಂಗಳೂರು ನಗರದಲ್ಲಿ ನೆಲೆಸಿದ್ದರು.

ಸಂಸ್ಕೃತ, ಕನ್ನಡ, ಮರಾಠಿ, ತೆಲುಗು, ಇಂಗ್ಲಿಷ್ - ಭಾಷಾಭಿಜ್ಞರಾದ ಗ್ರಂಥಕರ್ತರು ತಮ್ಮ ಸಾವಿರಾರು ವೇದಾಂತಪ್ರವಚನಗಳ ಮೂಲಕ ಶಂಕರ ಸಿದ್ಧಾಂತವನ್ನು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಚಾರಮಾಡಿ ಜಿಜ್ಞಾಸುಗಳ ಮತ್ತು ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದರು. ಕೆಲವು ವಿದೇಶೀಯ ಜಿಜ್ಞಾಸುಗಳಿಗೂ ಶಾಂಕರ ವೇದಾಂತವನ್ನು ಬೋಧಿಸಿದ್ದಾರೆ. ಸಾಧನಮಾರ್ಗದಲ್ಲಿಯೂ ಅನುಭವಿಗಳಾಗಿದ್ದು ಶ್ರೀ ದತ್ತಗುರುವಿನ ಉಪಾಸಕರೂ ಶಿಷ್ಟಾಚಾರ ಸಂಪ್ರದಾಯವಂತರೂ ಆಗಿದ್ದು ತಾ॥ 7-12-1993ರಂದು ತಮ್ಮ 72ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಈ ಮಹನೀಯರ ಅಮೋಘವಾದ ಅಧ್ಯಾತ್ಮವಿದ್ಯಾಪ್ರಚಾರಸೇವೆಗೆ ಕಾರ್ಯಾಲಯದವರು ಕೃತಜ್ಞರಾಗಿರುತ್ತಾರೆ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಸಾಕ್ಷಾತ್ ಶಿಷ್ಯರಲ್ಲೊಬ್ಬರಾದ, ಅವರ ದಿಗ್ದರ್ಶನದಂತೆಯೇ ಅವರ ಮಾರ್ಗಾನುಸರಣೆಯನ್ನು ಎಡೆಬಿಡದೆ ಅನುಸರಿಸಿರುವ ಶ್ರೀಯುತ ದೇವರಾಯ ಕುಲಕರ್ಣಿರಚಿಸಿರುವ ಗ್ರಂಥಗಳಿವು.

ಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳಂತೆ ಶ್ರವಣ, ಮನನ, ನಿದಿಧ್ಯಾಸನಗಳು ಆತ್ಮವಿಜ್ಞಾನಕ್ಕೆ ಸಾಕ್ಷಾತ್ಸಾಧನಗಳು. ಪರಂಪರಾ ಸಾಧನಗಳನ್ನು ಆಚರಿಸಿದ್ದರ ಫಲವಾಗಿ ಯಾರಿಗೆ ಸಹಕಾರಿಸಾಧನಗಳು ಅಳವಟ್ಟಿರುವವೋ ಅಂಥಜಿಜ್ಞಾಸುಗಳಿಗೆ ಮಾತ್ರ ಸಾಕ್ಷಾತ್ಸಾಧನಗಳು ಉಪಯೋಗವಾಗುತ್ತವೆ. ಅಧಿಕಾರಿಗಳಲ್ಲದವರಿಗೆ ಈ ಸಾಧನಗಳು ಬೌದ್ಧಿಕವ್ಯಾಯಾಮವಾಗಿ ಪರಿಣಮಿಸುತ್ತವೆ. ಮೊದಲು ಅಮಾನಿತ್ವಾದಿ ಸಾಧನಾನುಷ್ಠಾನ ಮಾಡಿದ್ದರೆ ಆಗ ಇವು ಬೇಗನೆ ಅಳವಟ್ಟು ಆತ್ಮದರ್ಶನಕ್ಕೆ ಕರಣಗಳಾಗುವು. ಹೀಗೆ ಸಾಧನಮಾರ್ಗದಲ್ಲಿರುವವರಿಗೆ ಈ ಆತ್ಮವಿಜ್ಞಾನಕ್ಕೆ ಸಾಕ್ಷಾತ್ಸಾಧನಗಳು ಅಳವಡುವ ರೀತಿಯನ್ನು ಈ "ಶ್ರವಣ ಮನನ ನಿದಿಧ್ಯಾಸನ ಅಥವಾ ಅಧ್ಯಾತ್ಮಯೋಗ" ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ.

ಸಾರ್ವತ್ರಿಕ ಪೂರ್ಣಾನುಭವದ ನೆಲೆಗಟ್ಟಿನ ಮೇಲೆ ನೆಲೆನಿಂತಿರುವ ಶಾಸ್ತ್ರವೆಂದರೆ ಅದು ವೇದಾಂತಶಾಸ್ತ್ರವೇ ಆಗಿದೆ. ಅದನ್ನು ಸುಲಭವಾಗಿ ತಿಳಿಸಿಕೊಡಲು ಶಾಸ್ತ್ರವು ಅಧ್ಯಾರೋಪಾಪವಾದ ಪ್ರಕ್ರಿಯೆಯನ್ನು ಅವಲಂಬಿಸಿದೆ. ಈ ಪ್ರಕ್ರಿಯೆಯು ಪಂಚಕೋಶ, ದೃಗ್ದೃಶ್ಯ, ಅನ್ವಯವ್ಯತಿರೇಕ, ಸಾಮಾನ್ಯವಿಶೇಷ – ಮೊದಲಾಗಿ ಅನೇಕ ಪ್ರಕಾರವಾಗಿ ವಿಸ್ತರಿಸಿದೆ. ಇವುಗಳಲ್ಲಿ ಅವಸ್ಥಾತ್ರಯವಿವೇಕವು ಅಸಾಧಾರಣವಾಗಿದೆ. ಈ ಪ್ರಕ್ರಿಯೆಯನ್ನು ಬಲ್ಲವರ ಬೋಧನೆಯ ನೆರವಿನಿಂದ ಅನುಸರಿಸಿದರೆ ಜಿಜ್ಞಾಸುವು ಶೀಘ್ರವಾಗಿ ಸ್ವಸ್ವರೂಪದಲ್ಲಿ ನೆಲೆನಿಲ್ಲುವನು. ಆದ್ದರಿಂದ "ವೇದಾಂತದ ಒಳಗಣ್ಣು" ಎಂಬ ಈ ಗ್ರಂಥದಲ್ಲಿ ಅವಸ್ಥಾತ್ರಯ ವಿಚಾರಕ್ರಮವನ್ನು ಅನುಸರಿಸಿ ಉಪನಿಷತ್ತುಗಳ ದಿಗ್ದರ್ಶನವನ್ನು ತಿಳಿಸಿಕೊಟ್ಟಿದೆ. ಅಂದರೆ ಅವಸ್ಥಾತ್ರಯಕ್ರಮದಲ್ಲಿ ಪರಮಾರ್ಥವಿಚಾರವನ್ನು ಮಾಡುವ ರೀತಿಯು ಇದಾಗಿದೆ.

ಇಲ್ಲಿ ಸಂಯೋಜಿಸಿರುವ ಎರಡು ಗ್ರಂಥಗಳು ಒಂದಕ್ಕೊಂದು ಪೂರಕವಾಗಿ ಆ ಅದ್ವಿತೀಯ ಪರತತ್ತ್ವವನ್ನು ಸುಲಭದಲ್ಲಿ ತಿಳಿಸುವ ಮಾರ್ಗದರ್ಶಿಯಾಗಿದೆ.

2021 ₹ 40/-